ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 27 ಸಂಚಿಕೆ 23 ಜೂನ್ 05, 2005 ಬೆಲೆ ರೂ. 3.00



ಎಪಿಎಂಸಿ ಕಾಯ್ದೆ ತಿದ್ದುಪಡಿ ಯಾರ ಹಿತಕ್ಕಾಗಿ ?



ಶೇಷಪ್ಪ ಹತ್ಯೆಯ ಸುತ್ತ



ಬಿಹಾರ : ಕಳ್ಳನಿಗೆ ಸುಳ್ಳ ಸಾಕ್ಷಿ



ಟೊಯೋಟಾ ಕಿರ್ಲೋಸ್ಕರ್ ಕಾರ್ಮಿಕರ ಹೋರಾಟ

ಜನತಾ ಕ್ರಾಂತಿಯತ್ತ ಬೊಲಿವಿಯಾ



ಪಶ್ಚಿಮ ಬಂಗಾಳ : ಎಡರಂಗದ ಭರ್ಜರಿ ವಿಜಯ

ಮಹಿಳೆಯರ ಮೇಲಿನ ದೌರ್ಜನ್ಯಗಳ ಹಲವು ಕ್ರೂರ ಮುಖಗಳು

ಕೆ.ಎಸ್.ಲಕ್ಷ್ಮಿ

ಹಲವು ಕ್ಷೇತ್ರಗಳಲ್ಲಿ ಜಗತ್ತಿನ ಗಮನ ಸೆಳೆದಿರುವ ಬೆಂಗಳೂರು ಅಪರಾಧೀಕರಣದ ಕೇಂದ್ರವಾಗಿಯೂ ಬೆಳೆಯುತ್ತಿರುವುದು ನಗರದ ಜನತೆಯನ್ನಷ್ಟೇ ಅಲ್ಲದೇ, ರಾಜ್ಯದ ಜನತೆಯನ್ನು ಭಯಭೀತರನ್ನಾಗಿಸಿದೆ. ಬಹುಮುಖ್ಯವಾಗಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು ಲೈಂಗಿಕ ಕಿರುಕುಳಗಳು, ಅವುಗಳ ಸ್ವರೂಪಗಳು ನಾಗರೀಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ.

ನಗರದ ಕೋರ್ಟ್‌ನಿಂದ ವಿಚಾರಣೆಗೆ ಬಳಪಟ್ಟು ಸಣ್ಣ ವಯಸ್ಸಿನ ಇಬ್ಬರು ಮಹಿಳೆಯರೊಂದಿಗೆ ಹಿಂತಿರುಗುತ್ತಿದ್ದ 25-26 ವಯಸ್ಸಿನ ಮಹಿಳೆಯನ್ನು ಭೇಟಿ ಮಾಡಿ ನಾವು ನಿನ್ನೊಂದಿಗಿದ್ದೇವೆ, ಧೈರ್ಯವಾಗಿರಿ. ನಿಮ್ಮ ಹೆಸರೇನೆಂದು ಕೇಳಿದಾಗ ನಾಲಿಗೆ ಕಚ್ಚಿ ಹೇಳಿದ ಹೆಸರು ಒಂದಾದರೆ ಪೊಲೀಸ್ ಇಲಾಖೆಗೆ ಹೇಳಿದ ಹೆಸರು ಮತ್ತೊಂದು, ಪತ್ರಿಕೆಗಳು ವರದಿ ಮಾಡಿದ ಹೆಸರು ಬೇರೊಂದು. ಹೀಗೆ ಸಮಾಜಕ್ಕೆ ಮುಖ ತೋರಿಸಿ ತನ್ನ ಸ್ವಂತ ಹೆಸರಿನಿಂದ ಗುರುತಿಸಿಕೊಳ್ಳಲಾಗದೇ, ಮುಂದಿನ ಜೀವನವೇನೆಂದು ತಲೆ ಮೇಲೆ ಕೈಹೊತ್ತು ಕುಂತಿರುವ ಮಂಜುಳ ಕಳೆದ ತಿಂಗಳು ಜೈಲಿನಲ್ಲಿರುವ ತನ್ನ ಗಂಡನನ್ನು ನೋಡಲೆಂದು ಮಕ್ಕಳೊಂದಿಗೆ ಬೆಂಗಳೂರಿಗೆ ಬಂದು ಹೊಸಕೆರೆ ಹಳ್ಳಿ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿರುವಾಗ ನಗರ ಟ್ಯಾಕ್ಸಿ ಚಾಲಕರ ತಂಡವೊಂದು ಆಕೆಯನ್ನು ವಂಚಿಸಿ ಬೆಂಗಳೂರು ವಿ.ವಿ. ಆವರಣದಲ್ಲಿ 7 ಮಂದಿ ಸಾಮೂಹಿಕ ಅತ್ಯಾಚಾರಗೈದಿದ್ದಾರೆ. ಆಕೆಯ ಮಕ್ಕಳು ನೀಡಿದ ಮಾಹಿತಿಯನ್ನಾಧರಿಸಿ 4 ಆರೋಪಿಗಳನ್ನು ಬಂಧಿಸಿದರಾದರೂ ಇಂತಹ ಅಮಾನವೀಯ ದೌರ್ಜನ್ಯಗಳಿಗೆ ಕೊನೆ ಎಲ್ಲಿ ? ರಾತ್ರಿಯಲ್ಲ, ಹಗಲು ವೇಳೆಯಲ್ಲಿ ಹೆಣ್ಣುಮಕ್ಕಳಿಗೆ ಭದ್ರತೆ ಇಲ್ಲವಾಗಿದೆ. ಮನೆ ಗಂಡನಿಲ್ಲದ ಸಾಮಾನ್ಯ ಕೂಲಿಕಾರಳಾದ ಅಂಗಾರಪಾಳ್ಯದ ಸುನಂದ ತನ್ನ 14 ವಯಸ್ಸಿನ ಮಗಳನ್ನು ಜೆ.ಪಿ.ನಗರ ನಿವಾಸಿ ನಾಗರಾಜನ ಮನೆಯ ಮಕ್ಕಳ ಆರೈಕೆಗೆಂದು ಕಳುಹಿಸಿ, ಕಳೆದ 7 ತಿಂಗಳಿಂದ ಮಗಳು ಕಾಣೆಯಾಗಿದ್ದಾಳೆ. ಮತ್ತೆ ಮತ್ತೆ ವಿಚಾರಿಸ ಹೋದರೆ ನಾಗರಾಜನಿಂದ ದೈಹಿಕ ಹಲ್ಲೆ. ಪೋಲೀಸ್ ಠಾಣೆಗೆ ಹೋದರೆ ಪೊಲೀಸರ ಸಿಡಿಸಿಡಿ. ಚಿಕ್ಕಪ್ಪನೇ ಅತ್ಯಾಚಾರ ಮಾಡಿ ಅಜ್ಜಿಯ ಸಹಕಾರದಿಂದ ವೇಶ್ಯಾವಾಟಿಕೆಗೆ ಮಾರಲು ಹೊರಟ ಮಡಿವಾಳದ ಶ್ವೇತಾ ಪ್ರಕರಣ, ಹೀಗೆ ನೂರಾರು ಪ್ರಕರಣಗಳು ಜನವಾದಿ ಮಹಿಳಾ ಸಂಘಟನೆಯತ್ತ ಧಾವಿಸುತ್ತವೆ. ಕೆಲವನ್ನು ನಮ್ಮ ಮಧ್ಯ ಪ್ರವೇಶದಿಂದ ಎದುರಿಸುತ್ತವಾದರೂ ಬಹಳಷ್ಟು ಪ್ರಕರಣಗಳು ಪ್ರಯತ್ನವನ್ನು ಮೀರಿ ನಿಲ್ಲುತ್ತದೆ. ನಗರ ಪೋಲೀಸ್ ಇಲಾಖೆಯ ಪ್ರಕಾರ 2004ರ ಮಹಿಳಾ ದೌರ್ಜನ್ಯಗಳಿಗೆ ಸಂಬಂಧಿಸಿದ ಮಾಹಿತಿ ಹೀಗಿವೆ.



ವರದಕ್ಷಿಣೆ ಕೊಲೆ - 6
ವರದಕ್ಷಿಣೆ ಕೊಲೆ ಪ್ರಯತ್ನ -7
ವರದಕ್ಷಿಣೆ ಕಿರುಕುಳದಿಂದ ಆತ್ಮಹತ್ಯೆ - 78
ವರದಕ್ಷಿಣೆಯ ಕಿರುಕುಳ ಮತ್ತು ಹಿಂಸೆ - 247
ಅತ್ಯಾಚಾರ - 37
ನಿಂದನೆ / ಚುಡಾಯಿಸುವಿಕೆ - 35
ಕದ್ದೊಯ್ದ ಪ್ರಕರಣಗಳು - 14
ಕಿರುಕುಳ - 151
2004 ರಲ್ಲಿ ಕಾಣೆಯಾದ ಪ್ರಕರಣ 4370 (ಗಂಡು ಮತ್ತು ಹೆಣ್ಣು)
2005 5 ತಿಂಗಳಲ್ಲಿ 1518 ಪ್ರಕರಣಗಳು

ಹೀಗೆ ಗಾಬರಿ ಹುಟ್ಟಿಸುವ ಪ್ರಕಣಗಳು ಕೇವಲ ದಾಖಲಾದ ಪ್ರಕರಣಗಳು ದಾಖಲಾಗದೇ ನಲುಗಿ ಹೋಗಿರುವ ಪ್ರಕರಣಗಳು ಅದೆಷ್ಟು. ಈ ರೀತಿ ದಾಖಲಾಗದೇ ಇರುವುದಕ್ಕೆ ಬಹಳ ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯ ಸಿಬ್ಬಂದಿಯ ಅಮಾನವೀಯ ವರ್ತನೆ, ಅಸಹಕಾರಗಳೇ ಕಾರಣವಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಸಾಮಾಜಿಕ, ಕೌಟುಂಬಿಕ ಒತ್ತಡಗಳಿಂದ ದಾಖಲಾಗಿರುವುದಿಲ್ಲ. ಹಲವು ಕ್ಷೇತ್ರಗಳಲ್ಲಿ ಜಗತ್ತಿನ ಗಮನ ಸೆಳೆದಿರುವ ಬೆಂಗಳೂರು ಅಪರಾಧೀಕರಣದ ಕೇಂದ್ರವಾಗಿಯೂ ಬೆಳೆಯುತ್ತಿರುವುದು ನಗರದ ಜನತೆಯನ್ನಷ್ಟೇ ಅಲ್ಲದೇ, ರಾಜ್ಯದ ಜನತೆಯನ್ನು ಭಯಭೀತರನ್ನಾಗಿಸಿದೆ. ಬಹುಮುಖ್ಯವಾಗಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು ಲೈಂಗಿಕ ಕಿರುಕುಳಗಳು, ಅವುಗಳ ಸ್ವರೂಪಗಳು ನಾಗರೀಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಈ ಎಲ್ಲಾ ಸಮಸ್ಯೆಗಳನ್ನು ಪುಷ್ಟೀಕರಿಸುತ್ತಿರುವ ಮಾಧ್ಯಮಗಳ ಪಾತ್ರ ಸಣ್ಣದೇನಲ್ಲಾ. ದಿನದ 24 ಗಂಟೆಯೂ ಬಿತ್ತರಗೊಳ್ಳುವ ಅಶ್ಲೀಲ ಕಾರ್ಯಕ್ರಮಗಳಿಗೆ ಲಗಾಮೇ ಇಲ್ಲದಂತಾಗಿದೆ. ಸೆಕ್ಸ್ ಕುರಿತು ಸಂವಾದ, ಚರ್ಚೆ, ಹಾಡು, ಸಿನಿಮಾಗಳನ್ನೇ ಪ್ರಧಾನವಾಗಿಟ್ಟುಕೊಂಡು ಮೂಡಿಬಂದಿರುವ 'ಜೂಮ್ 200 ಎಮ್' ಛಾನಲ್‌ನ ಸಂವಾದ ಒಂದು ಹೀಗಿದೆ - 'ನಿಮ್ಮ ಹೆಂಡತಿಯ ಅಂಗಾಂಗಗಳಲ್ಲಿ ನಿಮಗಿಷ್ಟವಾದ ಅಂಗ ಯಾವುದು?' 'ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ಆಕರ್ಷಿಸಲು ಎಂತಹ ಉಡುಪು ಧರಿಸಬೇಕು' ಸೆಕ್ಸ್ ಚಟುವಟಿಕೆಯ ಆಧಾರದಲ್ಲಿ ವ್ಯಕ್ತಿಗಳ ಜಾತಕ ಹೀಗೆ ಹತ್ತು, ಹಲವು ಅಶ್ಲೀಲ ಸಾಹಿತ್ಯ, ಸಿನಿಮಾ ಯತೇಚ್ಛವಾಗಿ ಹರಿಬಿಡಲಾಗಿದೆ. ದಿನನಿತ್ಯ ಹಿಂಸೆ, ಅಶ್ಲೀಲತೆಯನ್ನು ಬಿಂಬಿಸುವ ಛಾನಲ್‌ಗಳಿಂದ ಅಪ್ರಾಪ್ತ ವಯಸ್ಕ ಮಕ್ಕಳು ಅಡ್ಡಹಾದಿ ತುಳಿಯುವಂತಾಗಿದೆ. ಇವುಗಳನ್ನೆಲ್ಲಾ ನಿಯಂತ್ರಿಸಬೇಕಾದ ಸೆನ್ಸಾರ್ ಮಂಡಳಿಗಳು, ಮುಕ್ತ ಪರವಾನಿಗೆ ನೀಡುವ ಕೇಂದ್ರಗಳಾಗಿವೆ. ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಗಳು ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಂಡು ಕಂಡೂ ಕಾಣದಂತೆ ಮೌನವಹಿಸಿರುವುದು ಪರೋಕ್ಷವಾಗಿಯೇ ಬೆಂಬಲಿಸಿದಂತಿದೆ.

ಈ ಕುರಿತು ಅಡಿಷನಲ್ ಕಮಿಷನರ್ ನಾರಾಯಣಗೌಡರೊಂದಿಗೆ ಚರ್ಚಿಸುವಾಗ ಆಶ್ಚರ್ಯ ಮತ್ತು ಆತಂಕವನ್ನು ಹೆಚ್ಚಿಸಿದ ಅಂಶವೆಂದರೆ ದೆಹಲಿಯಲ್ಲಿ ನಗರಕ್ಕೊಂದು 60 ಸಾವಿರ ಪೋಲೀಸ್ ಸಿಬ್ಬಂದಿ, ಮುಂಬೈ ನಗರದಲ್ಲಿ 45,000 ಪೋಲೀಸ್ ಸಿಬ್ಬಂದಿ ಇದ್ದು, ಬೆಂಗಳೂರಿನ ಒಟ್ಟು ಸಿಬ್ಬಂದಿ 13,000. ಅದರಲ್ಲಿ 7000 ಸಿವಿಲ್ ಪೋಲಿಸ್ ಆಗಿದ್ದು, 600 ಪೊಲೀಸ್ ಸಿಬ್ಬಂದಿ ಕಾನೂನು ಸುವ್ಯವಸ್ಥೆಗೆ ನಿಯೋಜನೆಗೊಂಡಿರುವುದು. ಜನತೆಯ ಮೂಲಭೂತ ಅಗತ್ಯಗಳ ರಕ್ಷಣೆಗೆ ಸರ್ಕಾರವು ವಹಿಸಿರುವ ಗಂಭೀರತೆಯನ್ನು ತೋರುತ್ತದೆ. ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ 28.05.05 ರಂದು ನಗರ ಪೊಲೀಸ್ ಕಮಿಷನರ್ ಕಛೇರಿಯ ಮುಂದೆ ಬೃಹತ್ ಪ್ರತಿಭಟನೆಯನ್ನು ನಡೆಸಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಯಿತು.

- ದೌರ್ಜನ್ಯಗಳ ತಡೆಗೆ ಮಹಿಳೆಯರ ರಕ್ಷಣೆಗೆ ತತ್‌ಕ್ಷಣದ ಕ್ರಮಗಳ ಅಗತ್ಯ.
- ವರ್ತುಲ ರಸ್ತೆ ಮತ್ತು ಇತರ ಸಾರ್ವಜನಿಕ ಸ್ಥಳಗಳಿಂದ ಬಸ್‌ನಿಲ್ದಾಣ - ಶಿಕ್ಷಣ ಸಂಸ್ಥೆಗಳು ರೈಲ್ವೆ ನಿಲ್ದಾಣಗಳಲ್ಲಿ ಪೊಲೀಸ್ ಸುವ್ಯವಸ್ಥೆ ಹೆಚ್ಚಬೇಕು.
- ದೌರ್ಜನ್ಯಗಳಿಗೆ ಇಂಬುಕೊಡುವ ಅಶ್ಲೀಲ ಸಾಹಿತ್ಯ-ಚಲನಚಿತ್ರಗಳನ್ನು ನಿಷೇಧಿಸಲು ಶೀಘ್ರ ಕ್ರಮ ಕೈಗೊಳ್ಳಬೇಕು.
- ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳಿಗೆ ಸಂಬಂಧಿಸಿ ಡಿಸಿಪಿ-ಎಸಿಪಿ ವ್ಯಾಪ್ತಿಯಲ್ಲಿ ತಿಂಗಳಿಗೊಮ್ಮೆ ಮಹಿಳಾ ಸಂಘಟನೆಗಳೊಂದಿಗೆ ಸಭೆ ನಡೆಸಬೇಕು.
- ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯರ ಕುಂದು-ಕೊರತೆಗಳಿಗೆ ಸಂಬಂಧಿಸಿ ನಿಯಮಿತ ಸಭೆಗಳನ್ನು ನಡೆಸಬೇಕು.
- ವಿವಿಧ ಸಮಸ್ಯೆಗಳಿಗಾಗಿ ಪೊಲೀಸ್ ಠಾಣೆಗಳಿಗೆ ಬರುವ ಮಹಿಳೆಯರೊಂದಿಗೆ ಸೌಜನ್ಯಯುತ ನಡವಳಿಕೆಗೆ ಪೊಲೀಸ್ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡುವುದು.
- ದೌರ್ಜನ್ಯದ ಪ್ರಕರಣಗಳ ತನಿಖೆಯ ಸಂದರ್ಭದಲ್ಲಿ ದೌರ್ಜನ್ಯಕ್ಕೆ ಒಳಗಾದವರನ್ನು ಮಹಿಳಾ ಸಂಘಟನೆಗಳು ಭೇಟಿ ಮಾಡಲು ಅವಕಾಶ ಮಾಡಿಕೊಡಬೇಕು.
- ಆರೋಪಿಗಳು ತಪ್ಪಿಸಿಕೊಳ್ಳಲಾರದಂತಹ ಕಠಿಣ ಕ್ರಮ ಕೈಗೊಳ್ಳಬೇಕು.
- ಪ್ರಕರಣಗಳ ದಾಖಲೆ ಮಾಡುವಲ್ಲಿ ಅನಗತ್ಯ ವಿಳಂಬ ತಪ್ಪಿಸಬೇಕು.
- ಕಾನೂನು -ಸುವ್ಯವಸ್ಥೆಗೆ ಅವಶ್ಯಕವಾದ ಸಿಬ್ಬಂಧಿ ನೇಮಕಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.

18ನೇ ಮಹಾಧಿವೇಶನ ಸಿಪಿಐ(ಎಂ)

ಶಿಕ್ಷಣದ ಕುರಿತು ನಿರ್ಣಯ

ಸ್ವಾತಂತ್ರ್ಯಗಳಿಸಿದ 57 ವರ್ಷಗಳ ನಂತರವೂ ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ಶೈಕ್ಷಣಿಕ ಪರಿಸ್ಥಿತಿಯು ತುಂಬಾ ಆತಂಕಕಾರಿ ಎಂದು ಸಿಪಿಐ(ಎಂ) 18ನೇ ಮಹಾಧಿವೇಶನ ಪರಿಗಣಿಸಿದೆ. ಶೈಕ್ಷಣಿಕ ಅಭಿವೃದ್ಧಿಯ ಪ್ರಶ್ನೆಯಲ್ಲಿ 177 ದೇಶಗಳ ನಡುವೆ ಭಾರತ ಇಷ್ಟು ಸುದೀರ್ಘ ಅವಧಿಯ ನಂತರವೂ 127 ನೇ ಸ್ಥಾನದಲ್ಲಿದೆ. ಶಾಲೆಯಿಂದ ಹೊರಗಿನ 6 ರಿಂದ 10 ರ ವಯಸ್ಸಿನೊಳಗಿನ ಜಗತ್ತಿನ 10 ಕೋಟಿ ಮಕ್ಕಳಲ್ಲಿ ಭಾರತದಲ್ಲಿ ಮಾತ್ರವೇ 4 ಕೋಟಿ ಮಕ್ಕಳಿದ್ದಾರೆ. 17 ರಿಂದ 23 ವರ್ಷದೊಳಗಿನ ಉನ್ನತ ಶಿಕ್ಷಣ ಪಡೆಯುತ್ತಿರುವವರ ಪ್ರಮಾಣ ಶೇ 6.4ರಲ್ಲಿಯೇ ಸ್ಥಗಿತಗೊಂಡಿದೆ. ಇದು ಏಶ್ಯಾದಲ್ಲಿ ಸರಾಸರಿ9.7 ರಷ್ಟಿದೆ. ದಕ್ಷಿಣ ಕೊರಿಯಾದಂತಹ ದೇಶದಲ್ಲಿ ಶೇ 52 ರಷ್ಟಿದೆ. ಶಿಕ್ಷಣಕ್ಕೆ ಕೇಂದ್ರ ಬಜೆಟ್‌ನಲ್ಲಿ ಒದಗಿಸಿದ್ದು ಶೇ 3.57 ರಷ್ಟು ಮಾತ್ರ. ಅದೇ ರೀತಿ ಜಿಡಿಪಿಯ ಶೇ 4.18 ಮಾತ್ರ ನೀಡಲಾಗುತ್ತಿದೆ. ಇಂತಹ ಗಂಭೀರ ಶೈಕ್ಷಣಿಕ ಸನ್ನಿವೇಶದಲ್ಲಿ ಹಿಂದಿನ ಎನ್‌ಡಿಎ ಸರ್ಕಾರದ ಶಿಕ್ಷಣ ಕೋಮುವಾದಿಕರಣದ ಫಲವಾಗಿ ಇಂದಿಗೂ ಶಿಕ್ಷಣ ರಂಗದಲ್ಲಿ ತುಂಬಿರುವ ವಿಷವನ್ನು ಪೂರ್ಣವಾಗಿ ತೆಗೆಯಲಾಗಿಲ್ಲ. ಶಿಕ್ಷಣದ ನಿರ್ಲಜ್ಜ ವ್ಯಾಪಾರೀಕರಣದ ಧೋರಣೆಯಲ್ಲಿ ಯಾವುದೇ ಬದಲಾವಣೆ ಕಾಣುತ್ತಿಲ್ಲ. ಗ್ಯಾಟ್ಸ್ (General Agreement of Trade in Services) ಒಪ್ಪಂದದ ಪರಿಣಾಮವಾಗಿ ಉನ್ನತ ಶಿಕ್ಷಣ ಕ್ಷೇತ್ರವನ್ನು ಜಾಗತಿಕ ಬಂಡವಾಳಕ್ಕೆ ತೆರೆದಿಡುವ ಅಪಾಯಕಾರಿ ನೀತಿಯನ್ನು ಜಾರಿಗೊಳಿಸಲು ಕೇಂದ್ರ ಯುಪಿಎ ಸರ್ಕಾರ ಮುಂದಾಗಿದೆ. ದೇಶದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯನ್ನು, ವಿಜ್ಞಾನ ತಂತ್ರಜ್ಞಾನದ ಮುನ್ನಡೆ ಹಾಗೂ ಸ್ವಾವಲಂಬನೆ ಸಾಧಿಸುವಲ್ಲಿ ಉನ್ನತ ಶಿಕ್ಷಣದ ಪಾತ್ರ ಮಹತ್ವದ್ದಾಗಿದ್ದು, ಇಂದು ಈ ರಂಗದ ಮೇಲೆ ವ್ಯವಸ್ಥಿತ ಧಾಳಿ ನಡೆಸಲಾಗುತ್ತಿದೆ. ತೀವ್ರ ಶುಲ್ಕ ಏರಿಕೆ - ಹಣವುಳ್ಳವರಿಗೆ ಮಾತ್ರ ಶಿಕ್ಷಣ ಎಂಬ ನೀತಿಗಳನ್ನು ಅನುಸರಿಸಲಾಗುತ್ತಿದೆ.

ಶಿಕ್ಷಣವನ್ನು ಕೋಮುವಾದಿ ವಿಷದಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ಕೆಲವು ಆರಂಭಿಕ ಕ್ರಮಗಳನ್ನು ಹಾಗೂ ಸಿಎಬಿಇ ಪುನರ್ರಚನೆ, ಮಾದರಿ ವಿಶ್ವವಿದ್ಯಾಲಯ ಕಾಯ್ದೆ ರದ್ದು ಮುಂತಾದ ಕೆಲವು ಕ್ರಮಗಳನ್ನು ಯುಪಿಎ ಸರ್ಕಾರ ಕೈಗೊಂಡಿದೆ.

14 ರ ವಯಸ್ಸಿನವರೆಗೆ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ, ಜಾತಿ ಮತ್ತು ಲಿಂಗ ತಾರತಮ್ಯ ವಿಲ್ಲದ ಶಿಕ್ಷಣ ಮತ್ತು ಉದ್ಯೋಗವು ಎಲ್ಲರಿಗೂ ಸಿಗುವಂತಾಗಲು ಕೇಂದ್ರ ಬಜೆಟ್‌ನ ಶೇ 10, ರಾಜ್ಯ ಬಜೆಟ್‌ನ ಶೇ 30 ರಷ್ಟನ್ನು ಹಾಗೂ ಜಿಡಿಪಿಯ ಶೇ 6 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡುವಂತಾಗಲು ಶಿಕ್ಷಣವನ್ನು ಸಮವರ್ತಿ ಪಟ್ಟಿಯಿಂದ ರಾಜ್ಯ ಪಟ್ಟಿಗೆ ನೀಡುವಂತಾಗಲು, ಶಿಕ್ಷಣದ ಕೋಮುವಾದೀಕರಣ - ವ್ಯಾಪಾರೀಕರಣವನ್ನು ನಿವಾರಿಸಿ ಪ್ರಜಾಪ್ರಭುತ್ವೀಯ ಗುಣಗಳನ್ನು ಬಲಗೊಳಿಸಲು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕ ಮತ್ತು ಪಠ್ಯ ಕ್ರಮಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಕೇಂದ್ರೀಯ ಶಾಸನವನ್ನು ಜಾರಿಗೆ ತರುವಂತೆ ಒತ್ತಾಯಿಸಿ ದೇಶದ ಎಡ-ಪ್ರಜಾಸತ್ತಾತ್ಮಕ - ಜಾತ್ಯತೀತ ಶಕ್ತಿಗಳನ್ನು ಅಣಿನೆರೆಸಿ ಪ್ರಬಲ ಹೋರಾಟ ರೂಪಿಸಲು ಸಿಪಿಐ(ಎಂ) ಪಕ್ಷದ 18ನೇ ಮಹಾಧಿವೇಶನ ನಿರ್ಣಯಿಸುತ್ತದೆ.

ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ - ಚಿಂತನೆ

ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲು ರಾಜ್ಯ ಸರ್ಕಾರ ಯೋಚಿಸುತ್ತಿದೆ. ಅದಕ್ಕಾಗಿ ಸಂಪುಟ ಉಪ ಸಮಿತಿ ರಚಿಸಲಾಗಿದೆ. ಜನತೆಯ ಕೈಗೆ ಅಧಿಕಾರ ನೀಡುವ ನಿಟ್ಟಿನಲ್ಲಿ ಪ್ರಯೋಗಕ್ಕೀಡಾದ ಜಿಲ್ಲಾ ಪಂಚಾಯತ್‌ಗಳನ್ನು ದುರ್ಬಲಗೊಳಿಸಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವನ್ನು ನಾಮಕಾವಸ್ತೆ ಮಾಡುವ ಅಧಿಕಾರ ಕೇಂದ್ರೀಕರಣ -ಅಧಿಕಾರಶಾಹಿಗೆ ಕುಮ್ಮಕ್ಕು ನೀಡುವ ಈ ಚಿಂತನೆಗಳ ಹಿಂದೆ ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳ ಒತ್ತಡವಿದೆ. ಆದ್ದರಿಂದ ಸಂಪುಟದ ಉಪಸಮಿತಿಯ ಅಧ್ಯಯನದ ರೂಪುರೇಷೆ, ಅಂಶಗಳನ್ನು ಸಾರ್ವಜನಿಕರೆದುರು ತೆರೆದಿಡಬೇಕು.

ಆಡಳಿತ ವಿಕೇಂದ್ರೀಕರಣ' ' ಜನತೆಯ ಕೈಗೆ ಅಧಿಕಾರ' ಎಂಬಿತ್ಯಾದಿ ಆಕರ್ಷಕ ಮಾತುಗಳಿಂದ ಖ್ಯಾತಿ ಪಡೆಯಲು ಪೈಪೋಟಿಗಿಳಿಯುವ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳದ ಮೈತ್ರಿಕೂಟದ ಸರ್ಕಾರ, ತಾನಾಡುವ ಮಾತುಗಳ ಅರ್ಥವೇನೆಂದಾಗಲೀ, ಅದಕ್ಕಾಗಿ ಪ್ರಾಮಾಣಿಕ ಬದ್ಧತೆಯನ್ನಾಗಲೀ, ತೋರಿದೆಯೇ? ಇದೇ ಮೇ 24ರ ಕರ್ನಾಟಕ ಸರ್ಕಾರದ ಸಚಿವ ಸಂಪುಟದ ಚರ್ಚೆಗಳನ್ನು ಗಮನಿಸಿದರೆ ಆತಂಕ ಹೆಚ್ಚಾಗುತ್ತದೆ.

ಜಿಲ್ಲಾಧಿಕಾರಿಗಳ ಕಛೇರಿಯನ್ನು 'ಸುಧಾರಿಸುವ' ದಿಕ್ಕಿನಲ್ಲಿ ಹಲವಾರು ಇಲಾಖೆಗಳ ನಿಯಂತ್ರಣವನ್ನು ಡಿ.ಸಿ.ಗಳ ವ್ಯಾಪ್ತಿಗೆ ತರಬೇಕು. ಇವರಿಗೆ ಜಿಲ್ಲಾಮಟ್ಟದ ಕಛೇರಿಗಳ ತಪಾಸಣೆ ಅಧಿಕಾರ, ಇಲಾಖೆಗಳ ಕಾರ್ಯಕ್ರಮ, ಯೋಜನೆ ಜಾರಿ ಬಗ್ಗೆ ಸಮನ್ವಯ, ಮೇಲ್ವಿಚಾರಣೆಗೆ ಅಧಿಕಾರ ನೀಡಬೇಕು ಎಂಬುದು ಸಂಪುಟದಲ್ಲಿ ಬಂದ ಚರ್ಚೆಯೆಂದು ಹೊರಗೆ ಪ್ರಕಟವಾಗಿದೆ. ಇದರ ಬಗ್ಗೆ ಬಹಳ ಚರ್ಚೆಯಾಗಿ ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆಯಂತೆ.

ಜಿಲ್ಲೆಯ ಆಡಳಿತದಲ್ಲಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕೆಂಬ ಚಿಂತನೆಯೇ ಅಧಿಕಾರಶಾಹಿಯ ಸರ್ವಾಧಿಕಾರತ್ವವನ್ನು ಬಲಪಡಿಸುವ ದಿಕ್ಕಿನಲ್ಲಿರುವಂತಹದ್ದು. ಸಂಪುಟವು ಸ್ಥಳೀಯ ಚುನಾಯಿತ ಸಂಸ್ಥೆಗಳಾದ ಪಂಚಾಯತ್‌ಗಳನ್ನು ಬಲಪಡಿಸುವ, ಹೆಚ್ಚಿನ ಹಣ ಸಂಪನ್ಮೂಲ-ಅಧಿಕಾರ ನೀಡುವ ನಿಟ್ಟಿನಲ್ಲಿ ಚರ್ಚಿಸಬೇಕಿತ್ತು. ಆದರೆ ಹಂತಹಂತವಾಗಿ ಜನಪ್ರತಿನಿಧಿ ಸಂಸ್ಥೆಗಳನ್ನು ದುರ್ಬಲಗೊಳಿಸುವ ನೀತಿ ಮತ್ತು ಕ್ರಮಗಳನ್ನು ಪಂಚಾಯತ್‌ರಾಜ್ ಬಗ್ಗೆ ಸರ್ಕಾರ ತೆಗೆದುಕೊಳ್ಳುತ್ತಿದೆ. ಜಿಲ್ಲಾಡಳಿತದಲ್ಲಿ ಜಿಲ್ಲಾ ಪಂಚಾಯತ್ ಸಂಸ್ಥೆಯನ್ನು ನಿರ್ಲಕ್ಷಿಸುತ್ತಾ ಬರಲಾಗಿದೆ. ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರವೆಂದರೆ ಸ್ಥಳೀಯ ಚುನಾಯಿತ ಸಂಸ್ಥೆಗಳಿಗೆ ಅಧಿಕಾರ ಮೊಟಕು ಎಂದೇ ಅರ್ಥ.

ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ದುರ್ಬಲಗೊಳಿಸುವ ಅಧಿಕಾರಶಾಹಿ ಬಲಪಡಿಸುವತ್ತ ಹೆಜ್ಜೆಗಳು

ಸಾಧಾರಣವಾಗಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲಾ ಇಂತಹುದೇ ನೀತಿಗಳನ್ನು ಅನುಸರಿಸುತ್ತಾ ಬಂದಿದೆ. ಹಿಂದೆ ಜನತಾ ಪಕ್ಷದ ಆಡಳಿತವಿದ್ದಾಗ ನಜೀರ್ ಸಾಬ್

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಪಂಚಾಯತ್‌ರಾಜ್ ಸಚಿವರಾಗಿದ್ದರು. ಪಶ್ಚಿಮ ಬಂಗಾಳದಲ್ಲಿ ಯಶಸ್ವಿಯಾಗಿದ್ದ ಮಾದರಿಯನ್ನು ಅಧ್ಯಯನ ಮಾಡಿ ತಮ್ಮದೇ ಒಂದು ಭಿನ್ನ ಮಾದರಿಯೆಂದು ಹೇಳಿ ಪಂಚಾಯತ್ ವ್ಯವಸ್ಥೆ ಜಾರಿಗೆ ತಂದಾಗ ಜಿಲ್ಲಾ ಪಂಚಾಯತ್, ತಾಲೂಕ ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿತ್ತು. (ಪಶ್ಚಿಮ ಬಂಗಾಳದಂತೆ ಅಲ್ಲವೆಂದರೂ) ಜಿಲ್ಲಾ ಪಂಚಾಯತ್ ಅಧ್ಯಕ್ಷ ಸ್ಥಾನ ರಾಜ್ಯಸಚಿವ ಸ್ಥಾನಕ್ಕೆ ಸಮಾನವಾಗಿದ್ದು ಆಡಳಿತದಲ್ಲಿ ಹೆಚ್ಚಿನ ಅಧಿಕಾರ, ಹಣ ಸಂಪನ್ಮೂಲ ನೀಡಲಾಗಿತ್ತು. ಮುಂದೆ ಕಾಂಗ್ರೆಸ್ ಅಧಿಕಾರಕ್ಕೆ ಬಂದನಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಹಲವು ಇಲಾಖೆಗಳನ್ನು ಅಲ್ಲಿಂದ ಬೇರ್ಪಡಿಸಲಾಯಿತಲ್ಲದೇ ಜಿಲ್ಲಾ ಪಂಚಾಯತ್ ಅಧ್ಯಕ್ಷ, ತಾಲೂಕ ಪಂಚಾಯತ್ ಅಧ್ಯಕ್ಷರ





ಸ್ಥಾನ- ಅಧಿಕಾರ ಕಡಿಮೆ ಮಾಡಲಾಯಿತು. ತಾಲೂಕುಗಳಲ್ಲಿಯೂ ಶಾಸಕರೇ ಪ್ರಧಾನವೆಂದು ಅವರ ನೇತೃತ್ವದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಇರಬೇಕೆಂದು ವಾದಿಸಿದ್ದು, ಶಾಸಕರ ಪಾತ್ರ ಹೆಚ್ಚಿಸಿದ್ದು ಇದೆ. ಕೇಂದ್ರದಲ್ಲಿ ರಾಜೀವ್‌ಗಾಂಧಿ ಪ್ರಧಾನಿಯಾಗಿರುವಾಗಲೂ ನೇರವಾಗಿ ಜಿಲ್ಲೆಗಳಿಗೆ-ಜಿಲ್ಲಾಧಿಕಾರಿಗಳಿಗೆ ಕೇಂದ್ರ ಸರ್ಕಾರದಿಂದ ಹಣ ನೀಡಲು ನಿರ್ಧರಿಸಿದರು. ಇಲ್ಲಿ ರಾಜ್ಯ ಸರ್ಕಾರಗಳನ್ನು ಮೀರಿ ನೇರವಾಗಿ ಅಧಿಕಾರಶಾಹಿ ಗಳೊಂದಿಗೆ ಸಂಪರ್ಕಿಸಿ (ನಿಕ್ ನೆಟ್‌ವರ್ಕ್ ಮೂಲಕ) ಹುಕುಂ ಚಲಾಯಿಸುವ ಸರ್ವಾಧಿಕಾರತ್ವದ ಕ್ರಮವಾಗಿತ್ತು. ಇದನ್ನು ಸಿ.ಪಿ.ಐ(ಎಂ) ಮತ್ತು ಎಡಪಕ್ಷಗಳು ದೃಢವಾಗಿ ವಿರೋಧಿಸಿದವು. ಜಿಲ್ಲಾಡಳಿತಗಳು ರಾಜ್ಯಸರ್ಕಾರಕ್ಕೆ ಚುನಾಯಿತ ಸಂಸ್ಥೆಗಳಿಗೆ ಬಾಧ್ಯಸ್ಥ ಎಂಬುದನ್ನು ನಿಲಾಕ್ಷಿಸುವಂತಹ ಕ್ರಮ ಕೇಂದ್ರವೇ ತನ್ನ ಕೈಯಲ್ಲಿ ಕಡಿವಾಣ ಇರಿಸಿಕೊಳ್ಳುವ ಇಚ್ಛೆಯಾಗಿತ್ತು.

ಈಗ ಕೇಂದ್ರದ ಮತ್ತು ರಾಜ್ಯ ಸರ್ಕಾರಗಳು ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮಂತ್ರ ಜಪಿಸಿ ಜಾರಿಗೆ ಟೊಂಕ ಕಟ್ಟಿನಿಂತಿವೆ. ಎಡಪಕ್ಷಗಳ ದೃಢ ವಿರೋಧದಿಂದ ಅಂದುಕೊಂಡದ್ದು ಆಗುತ್ತಿಲ್ಲವೆಂದರೂ ಈ ಸರ್ಕಾರಗಳಿಗೆ ಮೂಲಭೂತ ನೀತಿ ಅದೇ ಆಗಿದೆ. ವಿಶ್ವ ಬ್ಯಾಂಕ್, ಐ.ಎಂ.ಎಫ್ ಮುಂತಾದ ವಿದೇಶಿ ಬ್ಯಾಂಕ್‌ಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತ ಅವುಗಳ ನಿರ್ದೇಶನಗಳನ್ನೇ ಶಿರಸಾವಹಿಸಿ ಜಾರಿಗೆ ತೊಡಗಿವೆ. ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಚಿಂತನೆಯೂ ಇದೇ ವಿಶ್ವಬ್ಯಾಂಕಿನಿಂದ ಬಂದಿರುವಂತಹದ್ದು.

ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವನ್ನು ದುರ್ಬಲಗೊಳಿಸಿ, ಅಧಿಕಾರಶಾಹಿಗೆ ಇನ್ನಷ್ಟು ಹೆಚ್ಚಿನ ಅಧಿಕಾರಗಳನ್ನು ನೀಡುವುದನ್ನು ವಿರೋಧಿಸಬೇಕಿದೆ. ಜಿಲ್ಲೆಯ ಆಡಳಿತ ಚುಕ್ಕಾಣಿ ಜಿಲ್ಲಾ ಪಂಚಾಯತ್‌ಗಳಿಗೆ ಇರಬೇಕು. ಜಿಲ್ಲಾಧಿಕಾರಿಗಳು ಜಿಲ್ಲಾ ಪಂಚಾಯತ್‌ಗಳ ಜಂಟಿ ಕಾರ್ಯದರ್ಶಿಯಾಗಿ ಪಶ್ಚಿಮ ಬಂಗಾಳದಲ್ಲಿ ಇರುವುದನ್ನು ಗಮನಿಸಬೇಕು. ಸಚಿವ ಸಂಪುಟದಲ್ಲಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಬಗ್ಗೆ ಬಹಳ ಚರ್ಚೆಯಾದ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚಿಸಲಾಗಿದೆ. ಈ ಸಮಿತಿಯ ಅಜೆಂಡಾಗಳೇನು ಎಂಬುದು ಸಾರ್ವಜನಿಕವಾಗಿ ಬಹಿರಂಗಪಡಿಸಬೇಕು ಮತ್ತು ವರದಿಯನ್ನು ತೆರೆದಿಡಬೇಕು.

ಶಿವಮೊಗ್ಗ -ಚಾಮರಾಜಪೇಟೆ, ಉಪಚುನಾವಣೆಗಳು ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಸಿ.ಪಿ.ಐ.(ಎಂ) ಕರೆ

ಶಿವಮೊಗ್ಗ ಲೋಕಸಭೆ ಹಾಗೂ ಚಾಮರಾಜಪೇಟೆ ವಿಧಾನ ಸಭೆ ಉಪಚುನಾವಣೆಯಲ್ಲಿ ಕೋಮುವಾದಿ ಬಿ.ಜೆ.ಪಿ.ಯನ್ನು ಸೋಲಿಸಲು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರೆ ನೀಡಿದೆ. ದೇಶದಲ್ಲಿ ಮತ್ತು ರಾಜ್ಯದಲ್ಲಿಯೂ ಕೋಮುದ್ರೇಕ ಹೆಚ್ಚಿಸಿ ಹಿಂದುತ್ವದ ಫ್ಯಾಸಿಸ್ಟ್ ಮಾದರಿ ಅಜೆಂಡಾ ಹಿಡಿದು ಹೊರಟಿರುವ ಸಂಘಪರಿವಾರದ ಹುನ್ನಾರಗಳನ್ನು, ಅದರ ಜನದ್ರೋಹಿ - ದೇಶವಿರೋಧಿ ಆರ್ಥಿಕ, ರಾಜಕೀಯ ನೀತಿಗಳನ್ನು ಸೋಲಿಸಿ ಹಿಮ್ಮೆಟ್ಟಿಸುವುದು ಅತ್ಯಂತ ತುರ್ತಿನ ಕರ್ತವ್ಯವಾಗಿದೆ. ರಾಜ್ಯದಲ್ಲಿಯೂ ಈ ಶಕ್ತಿಗಳ ಅಟ್ಟಹಾಸ, ಅಪಾಯ ಹೆಚ್ಚಿದ್ದು ಬಿ.ಜೆ.ಪಿಯನ್ನು ಸೋಲಿಸಲು ಮತದಾರರಿಗೆ ವಿನಂತಿಸಿ, ಸ್ವತಂತ್ರವಾಗಿ ಪಕ್ಷವು ಪ್ರಚಾರ ನಡೆಸಲು ಕಾರ್ಯದರ್ಶಿ ಮಂಡಳಿ ನಿರ್ಧರಿಸಿದೆ. ಕರ್ನಾಟಕ ಕೋಮುವಾದಿಗಳ ನೆಲೆಯಾಗದಂತೆ, ಹಿಂದಿನ ಚುನಾವಣೆಗಳಲ್ಲಿ ಜನತೆ ತಿರಸ್ಕರಿಸಿದಂತೆ ಈ ಶಕ್ತಿಗಳನ್ನು ಮೂಲೆಗಟ್ಟಿ, ಜಾತ್ಯಾತೀತತೆಯ ವಾತಾವರಣ ಕಾಯಲು ಮೌಲ್ಯಗಳು ಉಳಿಯಲು ಸಹಕಾರಿಯಾಗುವಂತೆ ಈ ಚುನಾವಣಾ ಸಂದರ್ಭ ಬಳಸಿ ನಿರ್ಣಾಯಕವಾಗಿ ಸೋಲಿಸಲು ಕರೆ ನೀಡಿದೆ.

ವೈದ್ಯಕೀಯ ಶಿಕ್ಷಣ ಪ್ರಯೋಗಾಲಯ ಶುಲ್ಕ ಹೆಚ್ಚಳ : ಶಿಕ್ಷಣದ ದಂಧೆಗೆ ಸರಕಾರದ್ದೂ ಪಾಲೇ?

ವೈದ್ಯಕೀಯ ಶಿಕ್ಷಣದ ಪ್ರಯೋಗಾಲಯವನ್ನು ಶುಲ್ಕಗಳನ್ನು ಹೆಚ್ಚಿಸಿರುವ ಸರ್ಕಾರದ ಕ್ರಮ ಖಂಡನೀಯ. ಈ ಏರಿಕೆ ಅಲ್ಪಸ್ವಲ್ಪವೇನು ಅಲ್ಲ. ಬದಲಾಗಿ ಪೂರ್ವ ಕ್ಲಿನಿಕ್‌ಗಿದ್ದ ರೂ.1000 ಶುಲ್ಕವನ್ನು 5000ಏರಿಸಲಾಗಿದೆ. ಪ್ಯಾರಾ ಕ್ಲಿನಿಕ್‌ನ ಶುಲ್ಕ ರೂ.1000 ದಿಂದ 10000 ಸಾವಿರದವರೆಗೆ ಕ್ಲಿನಿಕ್ ಶುಲ್ಕ ರೂ.5000 ದಿಂದ 50,000ದವರೆಗೆ. ಈಗಾಗಲೇ ಸರ್ಕಾರಗಳು ಶಿಕ್ಷಣದ ಸಾರ್ವತ್ರಿಕರಣಕ್ಕೆ ಇಚ್ಛಾಶಕ್ತಿ ಕೊರತೆ ಮಾತ್ರವಲ್ಲ, ಶಿಕ್ಷಣ ವಿರೋಧವಾದ, ಶಿಕ್ಷಣವನ್ನು ವ್ಯಾಪಾರದ ಶಿಕ್ಷಣದ ವ್ಯಾಪಾರೀಕರಣಕ್ಕೆ ಮುಕ್ತಪರವಾನಗಿ ನೀಡುವ ಧೋರಣೆಯಿಂದ ವೈದ್ಯಕೀಯ ಶಿಕ್ಷಣ ಒಳಗೊಂಡು ಉನ್ನತ ಶಿಕ್ಷಣವೇ ದಂಧೆಯಾಗಿ, ಖಾಸಗಿ ಮಾಲೀಕರ ಸುಲಿಗೆಗೆ ಮುಕ್ತಪರವಾನಿಗಿಯಾಗಿ ಮಾರ್ಪಟ್ಟು ಪ್ರವೇಶ ಶುಲ್ಕ, ಶಿಕ್ಷಣ ಶುಲ್ಕಗಳೇ ಸಾಮಾನ್ಯರಿಗೆ ಕೈಗೆಟಕದಂತಿರುವಾಗ ಸರ್ಕಾರದ ಈ ಏರಿಕೆ ವಿದ್ಯಾರ್ಥಿಪಾಲಕರ ಮೇಲೆ ಎಳೆದ ಬರೆಯಾಗಿದೆ.

ಸರಕನ್ನಾಗಿಸಿ ಸುಲಿಗೆಯ ದಂಧೆಗೆ ಪ್ರೋತ್ಸಾಹಿಸುವ ಕೃತ್ಯವನ್ನು ಸರ್ಕಾರ ಕೈಬಿಡಬೇಕು. ಶುಲ್ಕ ಇಳಿಸಬೇಕು.

ಶಿಕ್ಷಣ ಶುಲ್ಕಗಳ ಹೆಚ್ಚಳದಿಂದ ಶಿಕ್ಷಣವೇ ಅಸಾಧ್ಯವೆಂದು ಕೈಚೆಲ್ಲಿ ಕುಳಿತುಕೊಳ್ಳುವ ಸಂದರ್ಭವಿರುವಾಗ ಸರ್ಕಾರದ ಕಾಲೇಜುಗಳ ಪ್ರಯೋಗಾಲಯದ ಶುಲ್ಕ ಹತ್ತರಷ್ಟು ಹೆಚ್ಚಿಸಿರುವ ಸರ್ಕಾರದ ಕ್ರಮ ಖಂಡನೀಯ ಮಾತ್ರವಲ್ಲ, ಶಿಕ್ಷಣ ವಿರೋಧಿಯಾಗಿದೆ.

ಬೆಂಗಳೂರು : ನೀರಿನ ಖಾಸಗೀಕರಣ

ನೀರು ಕುಡಿಸಲೆಂದೇ ಬಂದಿರುವ ಜಪಾನಿನ ಜೆ.ಬಿ.ಐ.ಸಿ. ಸಂಸ್ಥೆಯ ಬಾಯಿಗೆ ಬೆಂಗಳೂರಿನ ನಾಗರೀಕರನ್ನು ತಳ್ಳಲು ಸರ್ಕಾರ ನಿರ್ಧರಿಸಿದೆ. ವಿಶ್ವಬ್ಯಾಂಕ್, ಅಭಿವೃದ್ಧಿಬ್ಯಾಂಕ್‌ಗಳಂತಹ ವಿದೇಶಿ ಸಂಸ್ಥೆಗಳಿಂದ ಸಾಲ ಎತ್ತುವಾಗ ಇವರು ವಿಧಿಸಿದ ಷರತ್ತಿನಂತೆ ಪ್ರಮುಖ ನಗರಗಳ ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಿಸುವುದು ಒಂದು. ಅದರಂತೆ ಈ ಸಂಸ್ಥೆಯು 3383 ಕೋಟಿ ರೂಪಾಯಿ ಹೂಡುವುದೆಂದು ತಿಳಿಸಲಾಗಿದೆ. ಇದನ್ನು ಒಳಚರಂಡಿ, ನೀರು ಸರಬರಾಜು ಮಂಡಳಿ ಮೂಲಕ ಮಾಡಲಾಗುವುದು.

ಇಂತಹ ಕಂಪನಿಗಳು ಬೇರೆ ಬೇರೆ ದೇಶಗಳಿಗೆ ಮಾಡಿರುವ ಅನಾಹುತಗಳು ಕಣ್ಣೆದುರೇ ಇವೆ. ಅದೊಂದು ಕಡೆಯಾದರೆ, ಈಗಾಗಲೇ ಇಂತಹ ನೀತಿಯಿಂದ ಬೆಂಗಳೂರು, ಹೈದ್ರಾಬಾದ್ ಮುಂತಾದ ನಗರಗಳಲ್ಲಿಯೇ ದುಬಾರಿ ಹಣ ತೆತ್ತು ನೀರು ಕುಡಿಯಬೇಕಿದೆ. ಸರ್ಕಾರದ ಈ ನಿರ್ಧಾರ ಜನರ ಬದುಕಿಗೆ ವಿಪರೀತ ತಾಪವನ್ನು, ಹಣ ಹೆಚ್ಚು ಕೊಟ್ಟು ನೀರು ಖರೀದಿಸಬೇಕಾದ ಸಂದಿಗ್ಧ ಪರಿಸ್ಥಿತಿಯನ್ನು ತರಲಿದೆ. ಇದರ ವಿರುದ್ಧ ನಾಗರೀಕರ ಹೋರಾಟ ಪ್ರತಿಭಟನೆ ಅಗತ್ಯ.


ಟೊಯೋಟಾ ಕಿರ್ಲೋಸ್ಕರ್ ಕಾರ್ಮಿಕರ ಹೋರಾಟ

ಒಂದು ಕ್ಷಣ ಎಚ್ಚರ ತಪ್ಪಿದರೂ ಪ್ರಾಣಕ್ಕೆ ಕುತ್ತಾಗುವಂತಹ ಗಂಡಾಂತರಕಾರಿ ಪರಿಸ್ಥಿತಿ, ತೀವ್ರವಾದ ದೈಹಿಕ ಶ್ರಮ ಬೆನ್ನುನೋವು ಮೂಳೆ ಸವೆತ, ಸೈನಸ್ ಸಮಸ್ಯೆ ಮತ್ತಿತರ ವಾಸಿಯಾಗದಂತಹ ಕಾಯಿಲೆಗಳಿಗೆ ತುತ್ತಾಗಿರುವ ಅಪಾಯಕಾರಿ ಪರಿಸ್ಥಿತಿಯಲ್ಲಿ ದುಡಿಯುತ್ತಿರುವ ಟೊಯೋಟಾ ಕಿರ್ಲೋಸ್ಕರ್ ಕಾರ್ಖಾನೆ ಕಾರ್ಮಿಕರು ಹೋರಾಟದತ್ತ.

ತಮ್ಮ ಕನಿಷ್ಠ ಮೂಲಭೂತ ಅಗತ್ಯಗಳಾದ ವೇತನ ಮತ್ತು ಬೋನಸ್ ಹೆಚ್ಚಳಕ್ಕೆ ಟೊಯೋಟಾ ಕಿರ್ಲೋಸ್ಕರ್ ಕಾರ್ಮಿಕರು ಬೇಡಿಕೆಯನ್ನು ಇಟ್ಟಿದ್ದಾರೆ. ಇದನ್ನೇ ನೆಪವಾಗಿಟ್ಟುಕೊಂಡಿರುವ ಆಡಳಿತ ಮಂಡಳಿ ಕಾರ್ಖಾನೆಯನ್ನು ಹರಿಯಾಣ ಅಥವಾ ಉತ್ತರಾಂಚಲಕ್ಕೆ ವರ್ಗಾಯಿಸುವುದಾಗಿ ಬೆದರಿಕೆ ಒಡ್ಡಿದೆ. ದುರುದ್ದೇಶಪೂರಕವಾಗಿ ಆಡಳಿತ ಮಂಡಳಿಯ ಈ ಬೆದರಿಕೆಯನ್ನು ತೀವ್ರವಾಗಿ ಖಂಡಿಸುತ್ತಾ ಹೇಳಿಕೆಯನ್ನು ವಾಪಸ್ ಪಡೆಯಬೇಕೆಂದು ಟಿ.ಕೆ.ಎಂ.ಇ.ಯು ಒತ್ತಾಯಿಸಿದೆ.

ಎಂತಹ ಪರಿಸ್ಥಿತಿಯಲ್ಲಿಯೂ ಕಾರ್ಮಿಕರು ಕೇವಲ 180 ಸೆಕೆಂಡುಗಳಿಗೆ ಒಂದು ಕಾರಿನ ಉತ್ಪಾದನೆಯನ್ನು ನೀಡುತ್ತಿದ್ದಾರೆ. ಹೀಗಿದ್ದರೂ ಶ್ರಮಕ್ಕೆ ತಕ್ಕ ಫಲವನ್ನು ನೀಡಲು ಆಡಳಿತ ಮಂಡಳಿ ಮೀನಮೇಷ ಎಣಿಸುತ್ತಿದೆ. ಉದ್ಯೋಗದ ಭದ್ರತೆಯಾಗಲಿ, ಆರೋಗ್ಯ ವೆಚ್ಚಗಳನ್ನಾಗಲಿ ಒದಗಿಸುವಲ್ಲಿ ಮುತುವರ್ಜಿ ವಹಿಸಿಲ್ಲ. ಕಾರ್ಮಿಕರು ತೀವ್ರತರವಾದ ಕಾಯಿಲೆಗೆ ತುತ್ತಾದರೂ ಸೂಕ್ತ ಚಿಕಿತ್ಸೆಯನ್ನು ನೀಡಲು ನಿರಾಕರಿಸುತ್ತಾ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ. ಅನಾರೋಗ್ಯಕ್ಕೆ ತುತ್ತಾದ ವ್ಯಕ್ತಿಯು ಕಾರ್ಖಾನೆಗೆ ಖುದ್ದು ಹಾಜರಾಗಿ ತನಗೊದಗಿರುವ ಕಾಯಿಲೆಯನ್ನು ದೃಢೀಕರಿಸಿದ ನಂತರ ರಜೆಯನ್ನು ಮಂಜೂರು ಮಾಡುವಂತಹ ಅಮಾನವೀಯ ಪದ್ಧತಿಯನ್ನು ಈ ಕಾರ್ಖಾನೆಯಲ್ಲಿ ಅಳವಡಿಸಲಾಗಿದೆ.

ಕಾರ್ಮಿಕರು ಎದುರಿಸುತ್ತಿರುವ ಇಂತಹ ಗಂಭೀರ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತುವವರನ್ನು ಯಾವುದೇ ಮುಲಾಜಿಲ್ಲದೇ ವಜಾ ಮಾಡಿದೆ. ಹಲವಾರು ಕಾರ್ಮಿಕರನ್ನು ಅಮಾನತ್ತಿನಲ್ಲಿಡಲಾಗಿದೆ. ಕಾರ್ಮಿಕರಿಗೆ ಕನಿಷ್ಠ ಹಾಗೂ ಮೂಲಭೂತವಾಗಿ ಒದಗಿಸಬೇಕಾದ ಆರೋಗ್ಯ ಸೌಲಭ್ಯ ಮತ್ತು ಸೇವಾಭದ್ರತೆಯನ್ನು ನೀಡಬೇಕೆಂದು ಹಾಗೂ ಕಾರ್ಮಿಕರ ವಿರುದ್ಧದ ಅಮಾನವೀಯ ಮತ್ತು ದುರ್ವರ್ತನೆಯನ್ನು ನಿಲ್ಲಿಸಬೇಕೆಂದು ಮೂರು ಬಾರಿ ಮುಷ್ಕರಗಳನ್ನು ನಡೆಸಲಾಗಿದೆ.



ಆದರೆ ಆಡಳಿತ ಮಂಡಳಿಯು ಟಿಕೆಎಂಇಯು ಕಾರ್ಮಿಕ ಸಂಘಟನೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ನಿರ್ಲಕ್ಷ್ಯ ಮನೋಭಾವದಿಂದ ಕಾಣುತ್ತ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ಸಂಘ ನೀಡಿರುವ 20 ಬೇಡಿಕೆಗಳ ಮನವಿಗೆ ಸಂಬಂಧಿಸಿದಂತೆ ಪರಸ್ಪರ ಚರ್ಚಿಸದೆ ತನ್ನ ಮರ್ಜಿಯಂತೆ ಅಲ್ಪ ಪ್ರಮಾಣದ ವೇತನವನ್ನು ಹೆಚ್ಚಿಸಿರುವುದಾಗಿ ಘೋಷಿಸಿದೆ. ಇದರ ವಿರುದ್ಧ ಕಾರ್ಮಿಕರು ಧ್ವನಿ ಎತ್ತುವುದನ್ನು ನಿಗ್ರಹಿಸಲು ಹಾಗೂ ಅವರಲ್ಲಿ ಭೀತಿಯನ್ನು ಸೃಷ್ಟಿಸಲು ಕಾರ್ಖಾನೆ ಬಳಿ ಪೊಲೀಸ್ ಕಾವಲನ್ನು ಏರ್ಪಡಿಸಿ ಕಾರ್ಮಿಕರು ಮತ್ತು ಆಡಳಿತ ಮಂಡಳಿ ನಡುವೆ ಉದ್ರಿಕ್ತ ವಾತಾವರಣ ನಿರ್ಮಾಣವಾಗುವಂತೆ ಮಾಡಲಾಗಿದೆ.

ಕಾರ್ಮಿಕ ವರ್ಗ ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳದ ಆಡಳಿತ ಮಂಡಳಿ ಕಾರ್ಖಾನೆಯನ್ನು ಬೇರೆ ರಾಜ್ಯಕ್ಕೆ ವರ್ಗಾಯಿಸುವುದಾಗಿ ಬೆದರಿಕೆಯೊಡ್ಡುತ್ತಿದೆ. ಕಾರ್ಮಿಕ ಕಾನೂನನ್ನು ಗೌರವಿಸಿ ಅದರಂತೆ ನಡೆಯಲು ಸಿದ್ಧವಿಲ್ಲ. ಪೊಲೀಸ್ ಬಲ ಮತ್ತು ತನ್ನ ಪ್ರಭಾವವನ್ನು ಬಳಸಿ ಕಾರ್ಮಿಕರನ್ನು ಅವರ ಹಕ್ಕುಗಳನ್ನು ಹತ್ತಿಕ್ಕಲು ಮುಂದಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರದ ಕಾರ್ಮಿಕ ಸಚಿವರು ಮಧ್ಯಪ್ರವೇಶ ಮಾಡಿ ವಿವಾದವನ್ನು ಪರಿಹರಿಸಲು ಮುಂದಾಗಿಲ್ಲ ಎಂದು ಕಾರ್ಮಿಕರು ವಿಷಾಧ ವ್ಯಕ್ತಪಡಿಸಿದ್ದಾರೆ.

ಕಾರ್ಖಾನೆಯಲ್ಲಿ ಶೇ.90 ಮಂದಿ ಕಾರ್ಮಿಕರು ಕನ್ನಡಿಗರಾಗಿದ್ದು ಕಾರ್ಖಾನೆಯ ವರ್ಗಾಯಿಸುವುದರಿಂದ ಅವರೆಲ್ಲಾ ನಿರುದ್ಯೋಗಿಗಳಾಗುತ್ತಾರೆಂದು ಭಾವನಾತ್ಮಕ ಪ್ರಶ್ನೆಗಳನ್ನು ತಲೆಯಲ್ಲಿ ತುರುಕಲು ಹಲವರು ಪಿತೂರಿ ನಡೆಸುತ್ತಿದ್ದಾರೆ. ಆದರೆ ಕಾರ್ಮಿಕರಿಗೆ ಕಡಿಮೆ ವೇತನ ನೀಡುತ್ತಿರುವ ಬಗ್ಗೆ, ಈಗಾಗಲೇ 20 ಕಾರ್ಮಿಕರು ವಜಾಗೊಂಡಿದ್ದು 16 ಮಂದಿ ಅಮಾನತ್ತಿನಲ್ಲಿರುವವರು ಕನ್ನಡಿಗರಲವೇ ಎಂಬುದನ್ನು ಇಂತಹವರು ಮರೆಯಬಾರದೆನ್ನುವುದು ಕಾರ್ಮಿಕರ ಆಕ್ರೋಶವಾಗಿದೆ. ಎಲ್ಲ ಕಾರ್ಮಿಕರ ಮೇಲೂ ಆಡಳಿತ ಮಂಡಳಿಯವರ ದಬ್ಬಾಳಿಕೆ ತೀವ್ರವಾಗಿದೆ.

ಕಾರ್ಖಾನೆ ಸ್ಥಾಪನೆಗೆ ಕೇವಲ 80 ಎಕರೆ ಭೂಮಿ ಮಾತ್ರ ಅಗತ್ಯವಾಗಿದೆ. ಆದರೆ ಇವರು 500 ಎಕರೆ ಕೃಷಿ ಭೂಮಿಯನ್ನು ಕರ್ನಾಟಕ ಸರ್ಕಾರ ರಿಯಾಯತಿ ದರದಲ್ಲಿ ಒದಗಿಸಿದೆ. ಅವಶ್ಯವಿದ್ದಷ್ಟು ವಿದ್ಯುತ್ ಸರಬರಾಜು ಮಾಡುವುದರೊಂದಿಗೆ 5 ವರ್ಷ ಮಾರಾಟ ತೆರಿಗೆ ವಿನಾಯತಿಯನ್ನು ನೀಡಿದೆ.

ಹೀಗೆ ಸರ್ಕಾರದಿಂದ ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆದು ಕಾರ್ಮಿಕರಿಗೆ ಒದಗಿಸಬೇಕಾದ ಸೌಲಭ್ಯಗಳನ್ನು ನೀಡದೆ ಮತ್ತೊಂದು ರಾಜ್ಯಕ್ಕೆ ವಲಸೆ ಹೋಗುವುದಾಗಿ ಬೆದರಿಕೆ ಹಾಕುತ್ತಿರುವುದು ಕಾರ್ಮಿಕರ ಶೋಷಣೆಯನ್ನು ಮರೆಮಾಚುವ ಕುತಂತ್ರವಾಗಿದೆ.

15 ತಿಂಗಳಿನಿಂದ ಅಮಾನತ್ತಿನಲ್ಲಿಟ್ಟಿರುವ ಕಾರ್ಮಿಕರನ್ನು ಮತ್ತೆ ನೇಮಿಸಿಕೊಳ್ಳಬೇಕೆಂಬ ಬೇಡಿಕೆ ಈಡೇರಿದೆ. ಆದರೆ ಇದುವರೆಗೂ ವೇತನವನ್ನು ಹೆಚ್ಚಿಸಿಲ್ಲ ಕಾರ್ಮಿಕರ ವಿರುದ್ಧ ಆಡಳಿತ ಮಂಡಳಿ ನಡೆಸುವ ಕುತಂತ್ರಗಳಿಗೆ ಬಲಿಯಾಗದೆ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟವನ್ನು ಮುಂದುವರೆಸಿದ್ದಾರೆ.

ಕಾರ್ಮಿಕ ಮುಖಂಡರ ಅಪಹರಣ ಖಂಡಿಸಿ ನೆಲಮಂಗಲ ಪೊಲೀಸ್ ಠಾಣೆ ಎದುರು ಪ್ರತಿಭಟನೆ


ನೆಲಮಂಗಲ ಬಳಿಯ ತುಮಕೂರು ರಸ್ತೆಯಲ್ಲಿರುವ ಕರ್ನಾಟಕ ಬ್ರೀವರೀಸ್ ಅಂಡ್ ಡಿಸ್ಟಿಲರೀಸ್ ಕಾರ್ಖಾನೆಯ ಕಾರ್ಮಿಕ ಮುಖಂಡರಲ್ಲೊಬ್ಬರಾದ ಚಂದ್ರಶೇಖರ್ ಅವರನ್ನು ಮೇ 20 ರಂದು ಕಾರ್ಖಾನೆಯ ಮುಖ್ಯದ್ವಾರದ ಎದುರೇ ಅಪಹರಿಸಿಕೊಂಡು ಹೋಗಿ ಹಲ್ಲೆ ನಡೆಸಿದ ವ್ಯಕ್ತಿಗಳನ್ನು ಕೂಡಲೇ ಪೊಲೀಸರು ಬಂಧಿಸಬೇಕೆಂದು ಒತ್ತಾಯಿಸಿ ನೆಲಮಂಗಲ ಪೊಲೀಸ್ ಠಾಣೆ ಎದುರು, ಪೀಣ್ಯ, ದಾಸರಹಳ್ಳಿ ಮತ್ತು ನೆಲಮಂಗಲ ಪ್ರದೇಶದ 250 ಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಸಿ.ಐ.ಟಿ.ಯು ಕಾರ್ಮಿಕ ಸಂಘ ಮಾಡಿದ್ದನ್ನು ಸಹಿಸದ ಕೆ.ಬಿ.ಡಿ.ಎಲ್ ಮಾಲೀಕರು ಗೂಂಡಾಗಳನ್ನು ಉಪಯೋಗಿಸಿಕೊಂಡು ಕಾರ್ಮಿಕರನ್ನು ಹೆದರಿಸಿ ಸಂಘಕ್ಕೆ ರಾಜಿನಾಮೆ ಕೊಡುವಂತೆ ಒತ್ತಾಯಿಸುತ್ತಿದ್ದದನ್ನು ಪ್ರತಿಭಟಿಸಿದ ಕಾರ್ಮಿಕ ಮುಖಂಡ ಚಂದ್ರಶೇಖರ್ ಅವರನ್ನು ಮೇ 20ರಂದು ಕಾರ್ಖಾನೆಯ ಮುಖ್ಯದ್ವಾರದ ಎದುರೇ ಮಾರುತಿ ವ್ಯಾನ್‌ನಲ್ಲಿ 7-8 ಜನ ಮಾಲೀಕರು ನೇಮಿಸಿದ ಗೂಂಡಾಗಳು ಅಪಹರಿಸಿಕೊಂಡು ಹೋಗಿ ದೊಣ್ಣೆ, ಜಾಕ್ ರಾಡ್ ಮತ್ತು ಸೈಕಲ್ ಚೈನ್‌ನಿಂದ ಚೆನ್ನಾಗಿ ಥಳಿಸಿ ಮಧ್ಯರಾತ್ರಿ 12 ಗಂಟೆ ಸುಮಾರಿಗೆ ರೈಲ್ವೆ ಗೊಲ್ಲಹಳ್ಳಿ ಹತ್ತಿರ ರೈಲ್ವೆ ಕಂಬಿ ಬಳಿ ಬಿಸಾಕಿ ಹೋಗಿದ್ದಾರೆ ಎಂದು ಸಂಘದ ಮುಖಂಡರು ಆರೋಪಿಸಿದ್ದಾರೆ.

20.05.2005 ರಂದು ಕೊಟ್ಟ ಅಪಹರಣ ದೂರು, 21.05.2005 ರಂದು ಚಂದ್ರಶೇಖರ್ ಅವರಿಂದ ಅಪಹರಿಸಿ ಹಲ್ಲೆ ನಡೆದ ವ್ಯಕ್ತಿಗಳ ಪೂರ್ಣ ಮಾಹಿತಿಯನ್ನು ಪೊಲೀಸರಿಗೆ ಕೊಟ್ಟಿದ್ದರೂ ಕೂಡ ಇವರುಗಳಾರನ್ನೂ ಪೊಲೀಸರು ದಸ್ತಗಿರಿ ಮಾಡದೆ ಮಾಲೀಕರನ್ನು ಪರೋಕ್ಷವಾಗಿ ಬೆಂಬಲಿಸುತ್ತಿದ್ದು, ಪೊಲೀಸರ ಈ ಮಾಲಿಕ ಪರ ಕಾರ್ಮಿಕ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಈ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಈ ಪ್ರದರ್ಶನದ ನೇತೃತ್ವವನ್ನು ಸಿ.ಐ.ಟಿ.ಯು ಮುಖಂಡರಾದ ಕೆ.ಎಸ್.ಸುಬ್ರಮಣ್ಯ ಅವರು ವಹಿಸಿದ್ದರು. ಪ್ರತಿಭಟನಾಕಾರರನ್ನುದ್ದೇಶಿಸಿ ಮತ್ತೊಬ್ಬ ಸಿ.ಐ.ಟಿ.ಯು ಮುಖಂಡರಾದ ಕೆ.ಎ.ಗಂಗಣ್ಣ, ವಿಪ್ರೊ ಕಾರ್ಮಿಕ ಸಂಘದ ಮುಖಂಡರಾದ ಸತೀಶ್ ಕುಮಾರ್, ಫೋರೇಸ್ ಕಾರ್ಮಿಕ ಸಂಘದ ಮುಖಂಡರಾದ ಪಿ.ಸಿ.ನರಸಿಂಹಮೂರ್ತಿ, ಕಾವೇರಿ ಸಿಲ್ಕ್ಸ್ ಕಾರ್ಮಿಕ ಸಂಘದ ಮುಖಂಡರಾದ ಅಶೋಕ್‌ಕುಮಾರ್, ವೆಲ್‌ಕ್ಯಾಸ್ಟ್‌ನ ಮುಖಂಡರಾದ ಗೋಪಿನಾಥ್ ಮತ್ತಿತರರು ಮಾತನಾಡಿದರು. ಸ್ಥಳದಲ್ಲಿ ಹಾಜರಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ರಮೇಶ್‌ಕುಮಾರ್ ಹಲ್ಲೆ ನಡೆಸಿದವರನ್ನು ಕೂಡಲೇ ದಸ್ತಗಿರಿ ಮಾಡುವುದಾಗಿ ಭರವಸೆ ನೀಡಿದರು.

ರೈತರ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ ಚಂದ್ರಶೇಖರ್ ನಾಡಗೌಡ ಅವಿರೋಧ ಆಯ್ಕೆ



ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿ ರೈತರ ಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಚಂದ್ರಶೇಖರ್ ನಾಡಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ನಡೆದ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಚಂದ್ರಶೇಖರ್ ನಾಡಗೌಡ ಹಾಗೂ ದೇವದುರ್ಗ ತಾಲೂಕು ಸಮಿತಿ ಸದಸ್ಯರಾದ ಅಲಿಬಾಬ ಗಲಗ ಅವರು ಅವಿರೋಧವಾಗಿ ಆಯ್ಕೆಯಾಗಿದ್ದರು.

ಅಧ್ಯಕ್ಷರಾಗಿ ಆಯ್ಕೆಯಾಗಿರುವ ಚಂದ್ರಶೇಖರ ನಾಡಗೌಡ ವಿದ್ಯಾರ್ಥಿ ದೆಸೆಯಿಂದಲೇ ಪ್ರಗತಿಪರ ಚಳುವಳಿ ಕಡೆ ಆಕರ್ಷಿತರಾಗಿ ವಿದ್ಯಾರ್ಥಿ ಸಂಘಟನೆಯಾದ ಭಾರತ ವಿದ್ಯಾರ್ಥಿ ಫೆಡರೇಷನ್ ಜಿಲ್ಲಾ ಸಮಿತಿ ಸದಸ್ಯರಾಗಿ ಹಲವಾರು ವಿದ್ಯಾರ್ಥಿ ಚಳುವಳಿಗಳನ್ನು ರೂಪಿಸಿ ನಾಯಕತ್ವ ನೀಡಿದ ಅವರು ಪ್ರಸ್ತುತ ಡಿವೈಎಫ್ಐ ರಾಯಚೂರು ಜಿಲ್ಲಾ ಸಮಿತಿ ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿರುವುದಲ್ಲದೆ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾಗಿ ಕೂಡ ಕಾರ್ಯನಿರ್ವಹಿಸುತ್ತಿದ್ದಾರೆ.

ಬಿಹಾರ
ಮತ್ತೊಮ್ಮೆ ಕಳ್ಳನಿಗೆ ಸುಳ್ಳ ಸಾಕ್ಷಿ


ಕೊನೆಗೂ ಬಿಹಾರದ ವಿಧಾನಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಗಳನ್ನು ನಡೆಸಲು ನಿರ್ಧರಿಸದೆ ಬೇರೆ ದಾರಿಯಿರಲಿಲ್ಲ. ಈ ರಾಜ್ಯದಲ್ಲಿ ಒಡಕು ತೀರ್ಪು ಬಂದ ಮೂರು ತಿಂಗಳಲ್ಲಿ 243 ಸದಸ್ಯರುಳ್ಳ ಸದನದಲ್ಲಿ ಬಹುಮತವಿರುವ ಒಂದು ಸರ್ಕಾರವನ್ನು ರಚಿಸುವ ಎಲ್ಲಾ ಪ್ರಯತ್ನಗಳು ವಿಫಲವಾದವು. ಚುನಾವಣೆಯಲ್ಲಿ ಬಿಹಾರದ ಮತದಾರರು ಆರ್‌ಜೆಡಿ ಮತ್ತು ಅದರ ಮಿತ್ರರಿಗೆ 79, ಬಿಜೆಪಿ-ಜೆಡಿ(ಯು)ಗೆ 92, ಎಲ್‌ಜೆಪಿ ಗೆ 29 ಹಾಗೂ ಕಾಂಗ್ರೆಸಗೆ 10 ಸ್ಥಾನ ನೀಡಿದ್ದು ಬಿಜೆಪಿ-ಜೆಡಿ(ಯು)ನ ಕೋಮುವಾದಿ ಕೂಟ ಸರ್ಕಾರ ರಚಿಸುವುದನ್ನು ಅನುಮೋದಿಸಲು ಸ್ಪಷ್ಟವಾಗಿ ನಿರಾಕರಿಸುವುದು ಸುಸ್ಪಷ್ಟ. ಕೇಂದ್ರದಲ್ಲಿ ಸರ್ಕಾರದಲ್ಲಿರುವ ಎಲ್ಲಾ ಪಕ್ಷಗಳು ಬಿಹಾರದಲ್ಲಿ ಒಟ್ಟು ಸೇರಿದ್ದರೆ ಅಲ್ಲಿ ಆರ್‌ಜೆಡಿ ನೇತೃತ್ವದಲ್ಲಿ (ಅದು ಅತಿದೊಡ್ಡ ಪಕ್ಷವಾಗಿ ಹೊಮ್ಮಿದ್ದರಿಂದ) ಒಂದು ಜಾತ್ಯತೀತ ಸರ್ಕಾರದ ರಚನೆ ಸಾಧ್ಯವಿತ್ತು. ಆದರೆ ಹಾಗಾಗಲಿಲ್ಲ. ರಾಮವಿಲಾಸ್ ಪಾಸ್ವಾನರ ಎಲ್‌ಜೆಪಿ ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರದ ರಚನೆಗೆ ಪ್ರಯತ್ನಿಸುವ ಬದಲು ರಾಷ್ಟ್ರಪತಿ ಆಳ್ವಿಕೆಯೇ ಒಳ್ಳೆಯದು ಎಂದಿತು.

ಆರಂಭದಲ್ಲಿ ಮಾರ್ಚ್ 7 ರಂದು ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿದಾಗ ವಿಧಾನಸಭೆಯನ್ನು ಅಮಾನತಿನಲ್ಲಿಡಲಾಗಿತ್ತು. ಮುಂದೆ ಒಂದು ಬಹುಮತದ ಸರ್ಕಾರವನ್ನು ರಚಿಸುವ ಸಾಧ್ಯತೆಗಳನ್ನು ಪರಿಶೀಲಿಸಬಹುದು ಎಂಬ ನಿರೀಕ್ಷೆಯಿತ್ತು. ಆದರೆ ಎರಡು ತಿಂಗಳ ಕಾಲ ಇಂತಹ ಯಾವುದೇ ಸಾಧ್ಯತೆ ಕಾಣಬರಲಿಲ್ಲ.

ಕುದುರೆ ವ್ಯಾಪಾರದತ್ತ

ಆದರೆ ಕಳೆದ ವಾರದಲ್ಲಿ ಎಲ್‌ಜೆಪಿಯ ಕೆಲವು ವಿಭಾಗಗಳು, ಜೆಡಿ(ಯು) ಕಡೆಗೆ ಹೋಗಿ ನೀತಿಬಾಹಿರ, ನಾಚಿಕೆಹೀನ ಕುದುರೆ ವ್ಯಾಪಾರಕ್ಕೆ ಪ್ರಜಾಪ್ರಭುತ್ವದ ಅಪಹಾಸ್ಯಕ್ಕೆ ರಂಗ ಸಜ್ಜುಗೊಳ್ಳಲಾರಂಭಿಸಿತು. ಬಿಹಾರದ ಮತದಾರರು ಬಿಜೆಪಿ-ಜೆಡಿ(ಯು) ಕೂಟಕ್ಕೆ ಜನಾದೇಶ ನೀಡಲು ಸ್ಪಷ್ಟವಾಗಿ ನಿರಾಕರಿಸಿರುವಾಗ ಹಿಂಬಾಗಿಲಿನಿಂದ ಸರ್ಕಾರ ರಚಿಸಲು ಮುಂದಾಗಿರುವುದು ಸ್ಪಷ್ಟ.

ಈ ಹಿನ್ನೆಲೆಯಲ್ಲಿ ಪಾಸ್ವಾನರ 29 ಶಾಸಕರಲ್ಲಿ ಬಹುಮಂದಿ ಮಾಯವಾಗಿ ಬಿಜೆಪಿ ಆಳ್ವಿಕೆಯ ಝಾರ್ಖಂಡ್‌ನಲ್ಲಿ ಪ್ರತ್ಯಕ್ಷಗೊಂಡರು. ಬಿಹಾರದ ರಾಜ್ಯಪಾಲರು ನಗ್ನ ಕುದುರೆವ್ಯಾಪಾರ ಹಾಗೂ ನಾಚಿಕೆಗೆಟ್ಟ ವಿಧಾನಗಳನ್ನು ಅಂಗೀಕರಿಸಲಾಗುತ್ತಿದೆ ಎಂದು ಆತಂಕಕಾರಿ ವರದಿಗಳಿದ್ದ ರಾಜ್ಯಪಾಲರ ವರದಿಯಲ್ಲದೆ, ಅಲ್ಲಿ ಅಹಿತಕರ ಪ್ರಜಾಪ್ರಭುತ್ವವಿರೋಧಿ ಚಟುವಟಿಕೆಗಳು ನಡೆಯುತ್ತಿರುವುದರ ಬಗ್ಗೆ ಮಾಹಿತಿ ಸರ್ಕಾರಕ್ಕೆ ದೊರೆತಿದ್ದು, ಪ್ರಜಾಸತ್ತಾತ್ಮಕ ಭಾವನೆಯನ್ನು ಎತ್ತಿ ಹಿಡಿಯಲು ವಿಧಾನಸಭೆಯನ್ನು ವಿಸರ್ಜಿಸಿ ಒಂದು ಹೊಸ ಜನಾದೇಶಕ್ಕೆ ಮುಂದಾಗುವುದೇ ಏಕೈಕ ದಾರಿಯಾಗಿತ್ತು ಎಂದು ಪ್ರಧಾನ ಮಂತ್ರಿಗಳು ದೃಢಪಡಿಸಿದ್ದಾರೆ.



ವಾಜಪೇಯಿ ನಾಯಕತ್ವದಲ್ಲೇ

ಈ ಸನ್ನಿವೇಶದಲ್ಲಿ ವಾಜಪೇಯಿಯವರು ಇದು 'ಪ್ರಜಾಪ್ರಭುತ್ವದ ಕೊಲೆ' ಎಂದು 'ಸಂವಿಧಾನಕ್ಕೆ ಬಗೆದ ಮೋಸ' ಎಂದು ಗುಡುಗಿರುವುದು ಮತ್ತೊಮ್ಮೆ ಕಳ್ಳನಿಗೆ ಸುಳ್ಳ ಸಾಕ್ಷಿ ಎಂಬುದಕ್ಕೊಂದು ಒಳ್ಳೆಯ ಉದಾಹರಣೆ. ವಾಜಪೇಯಿಯವರ ನಾಯಕತ್ವದಲ್ಲಿಯೇ ತಾನೇ ಎನ್‌ಡಿಎ ಸಂವಿಧಾನದ ಹತ್ತನೇ ಶೆಡ್ಯೂಲಿನಲ್ಲಿ ತಿದ್ದುಪಡಿ ತಂದು ತಾವು ಆರಿಸಿಬಂದ ಪಕ್ಷವನ್ನು ತ್ಯಜಿಸಿ ಹೋಗುವ ಶಾಸಕರನ್ನು ಅನರ್ಹಗೊಳಿಸಿದ್ದು! ಈ ಕಾನೂನಿನ ಅಪಹಾಸ್ಯ ನಡೆಸುತ್ತಾ ಬಿಜೆಪಿ-ಜೆಡಿ(ಯು) ಕೂಟ ಈ ಅಂಶದಿಂದ ತಪ್ಪಿಸಿಕೊಳ್ಳಲು ಎಲ್‌ಜೆಪಿಯ 29 ಶಾಸಕರಲ್ಲಿ ಮೂರನೇ ಎರಡರಷ್ಟನ್ನು ಹಾರಿಸಿ ತರುವ ಪ್ರಯತ್ನ ನಡೆಸಿತು. ಚುನಾವಣಾ ಪ್ರಜಾಪ್ರಭುತ್ವಕ್ಕೆ ಇದಕ್ಕಿಂತ ದೊಡ್ಡ ಅಪಮಾನ ಬೇರೇನೂ ಸಾಧ್ಯವಿಲ್ಲ.

ಇಷ್ಟೇ ಅಲ್ಲ, ಇದೇ ವಾಜಪೇಯಿ ನೇತೃತ್ವದಲ್ಲಿಯೇ ಹಿಂದಿನ ವಿಧಾನಸಭಾ ಚುನಾವಣೆಗಳ ನಂತರ ಎನ್‌ಡಿಎ, ಬಿಹಾರ ವಿಧಾನಸಭೆಯಲ್ಲಿ ಬಹುಮತ ಇಲ್ಲದಿದ್ದರೂ ನಿತೀಶ್ ಕುಮಾರರನ್ನು ಮುಖ್ಯಮಂತ್ರಿಯಾಗಿ ಹೇರುವ ಪ್ರಯತ್ನ ನಡೆಸಿ ವಿಫಲಗೊಂಡಿತು. ಕೇವಲ 42 ಜೆಡಿ(ಯು) ಎಂಎಲ್‌ಎಗಳು ಹಾಗೂ 35 ಬಿಜೆಪಿ ಎಂಎಲ್‌ಎಗಳಿದ್ದರೂ ಆತ ಅಧಿಕಾರದ ಪ್ರಮಾಣವಚನ ಸ್ವೀಕರಿಸುವಂತೆ ಮಾಡಲಾಯಿತು. ಆದರೆ ಎಷ್ಟೆಲ್ಲಾ ಕುದುರೆ ವ್ಯಾಪಾರದ ಪ್ರಯತ್ನ ನಡೆಸಿದರೂ ಬಹುಮತ ಗಳಿಸುವುದು ಸಾಧ್ಯವಿಲ್ಲ ಎಂದು ಸ್ಪಷ್ಟವಾದಾಗ ರಾಜೀನಾಮೆ ನೀಡಿ ತಲೆತಪ್ಪಿಸಿಕೊಂಡು ಹೋಗಬೇಕಾಯಿತು. ಆದರೆ ವಾಜಪೇಯಿಯವರ ಪ್ರಕಾರ ಇದು 'ಪ್ರಜಾಪ್ರಭುತ್ವದ ಕೊಲೆ' ಯ ಪಟ್ಟಿಗೆ ಬರುವುದಿಲ್ಲ!

ಕಳೆದ ಐದು ವರ್ಷಗಳಲ್ಲೂ ಎರಡು ಬಾರಿ ವಾಜಪೇಯಿ ಸರ್ಕಾರ ಬಿಹಾರದ ಆರ್‌ಜೆಡಿ ಸರ್ಕಾರವನ್ನು, ಅದಕ್ಕೆ ವಿಧಾನಸಭೆಯಲ್ಲಿ ಸ್ಪಷ್ಟ ಬಹುಮತವಿದ್ದರೂ ವಜಾ ಮಾಡಲು ಪ್ರಯತ್ನಿಸಿತು. ಈ ಪ್ರಯತ್ನವನ್ನು ಅನುಮೋದಿಸಲು ರಾಜ್ಯಸಭೆಯಲ್ಲಿ ಬಹುಮತ ಗಳಿಸುವ ಸ್ಥಿತಿಯಲ್ಲಿ ಅದು ಇಲ್ಲದ್ದರಿಂದ ಅದು ಸಾಧ್ಯವಾಗಲಿಲ್ಲ. ಪೋಟಾ ಅಂಗೀಕಾರಕ್ಕೆ ಎರಡೂ ಸದನಗಳ ಜಂಟಿ ಅಧಿವೇಶನ ಕರೆದಂತೆ ಇದಕ್ಕೂ ಜಂಟಿ ಸಭೆ ಕರೆಯುವ ಯೋಚನೆಯನ್ನು ಎನ್‌ಡಿಎ ಮಾಡಿತ್ತು. ಆದರೆ ಇವೆಲ್ಲಾ ಅದರ ಪ್ರಕಾರ 'ಸಂವಿಧಾನಕ್ಕೆ ಬಗೆದ ಮೋಸ' ಆಗುವುದಿಲ್ಲ!

ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುತ್ತೇವೆಂಬ ಬಿಜೆಪಿ-ನೇತೃತ್ವದ ಎನ್‌ಡಿಎಯ ಸೋಗನ್ನು ಬಯಲಿಗೆಳೆಯಲು ಇಷ್ಟೇ ಸಾಕು. ಅವರಿಗೆ ಅನುಕೂಲವಾದದ್ದು 'ಪ್ರಜಾಸತ್ತಾತ್ಮಕ' ಅಲ್ಲದ್ದು 'ಪ್ರಜಾಪ್ರಭುತ್ವದ ಕೊಲೆ'!

ಪಾಠ ಕಲಿಯಬೇಕು

ಆರಂಭದಲ್ಲಿ ಬಿಜೆಪಿ ಮತ್ತು ಎನ್‌ಡಿಎ ತಾವು ಈ ವಿಷಯದಲ್ಲಿ ಬೀದಿಗಳಿಯುತ್ತೇವೆ, ಇದಕ್ಕೆ ಸವಾಲೊಡ್ಡಿ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದೆಲ್ಲಾ ಗುಡುಗಿದರು. ಆದರೆ ಜನಗಳಿಂದ ಇದಕ್ಕೆ ಸಾಕಷ್ಟು ಸ್ಪಂದನ ದೊರೆಯದ್ದರಿಂದ ದನಿ ಬದಲಿಸಿ ರಾಜ್ಯದಲ್ಲಿ ಬೇಗನೆ ಚುನಾವಣೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ಬಿಹಾರ ವಿಧಾನಸಭೆ ಅಮಾತಿನಲ್ಲಿದ್ದ ಈ ಮೂರು ತಿಂಗಳು ಜಾತ್ಯತೀತ ಪಕ್ಷಗಳು ಸೂಕ್ತ ಪಾಠ ಕಲಿಯಲು ಒದಗಿಸಿದ ಒಂದು ಅನುಭವವಾಗಬೇಕು. ಕೋಮುವಾದಿ ಶಕ್ತಿಗಳು ಅನುಕೂಲ ಪಡೆಯದಂತೆ ಮಾಡಲು ಜಾತ್ಯತೀತ - ಪಕ್ಷಗಳ ನಡುವೆ ಮತಗಳ ವಿಭಜನೆಯನ್ನು ಗರಿಷ್ಟ ಮಟ್ಟದ ವರೆಗೆ ಕನಿಷ್ಟಗೊಳಿಸಬೇಕು ಎಂದು ಸಿಪಿಐ(ಎಂ) ಹೇಳುತ್ತಲೇ ಬಂದಿದೆ. ಸೂಕ್ತ ಪಾಠ ಕಲಿಯುವುದೆಂದರೆ ಈಗಾಗಲೇ ಎರಡು ಬಾರಿ ಕೋಮುವಾದಿ ಮೈತ್ರಿಕೂಟವನ್ನು ತಿರಸ್ಕರಿಸಿರುವ (2004 ರ ಲೋಕಸಭಾ ಚುನಾವಣೆಗಳಲ್ಲಿ ಮತ್ತು 2005 ರ ವಿಧಾನಸಭಾ ಚುನಾವಣೆಗಳಲ್ಲಿ) ಬಿಹಾರದ ಮತದಾರರು ಇನ್ನಷ್ಟು ನಿರ್ಣಾಯಕವಾಗಿ ಈ ಕೂಟವನ್ನು ತಿರಸ್ಕರಿಸುವಂತೆ ಅನುವು ಮಾಡಿಕೊಡಲು ಸಾಧ್ಯವಾಗುವಂತಹ ಒಂದು ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ ಮಾಡಬೇಕಾಗಿದೆ.

18ನೇ ಮಹಾಧಿವೇಶನ
ಸಿಪಿಐ(ಎಂ)

ನಿರ್ಣಯಗಳು

ಕಾರ್ಮಿಕ ವರ್ಗದ ಹೋರಾಟಗಳ ಕುರಿತು

ಕಾರ್ಮಿಕ ವರ್ಗದ ದೈನಂದಿನ ಜೀವನ ಪರಿಸ್ಥಿತಿ ಮತ್ತು ಅವರ ಹಕ್ಕುಗಳ ಮೇಲೆ ಎರಗುತ್ತಿರುವ ಸತತ ಧಾಳಿಯ ಕುರಿತು ಸಿಪಿಐ(ಎಂ) ನ 18ನೇ ಮಹಾಧಿವೇಶನವು ತನ್ನ ತೀವ್ರ ಕಾಳಜಿಯನ್ನು ವ್ಯಕ್ತಪಡಿಸಿತು. ಇಂದು ಕಾರ್ಮಿಕರ ಹಕ್ಕುಗಳನ್ನು ಮುರಿದು ಎರಡನೇ ಹಂತದ ಸುಧಾರಣೆಗಳನ್ನು ಜಾರಿಗೆ ತರಲಾಗುತ್ತಿದೆ.

ಕಾರ್ಮಿಕರ ನ್ಯಾಯೋಚಿತವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಪ್ರಬಲ ಅಸ್ತ್ರವಾಗಿದ್ದ ಮುಷ್ಕರದ ಹಕ್ಕನ್ನು ಸುಪ್ರೀಂಕೋರ್ಟ್ ತನ್ನ ತೀರ್ಪಿನ ಮೂಲಕ ಕಿತ್ತುಕೊಂಡಿತು. ಈ ಹಕ್ಕನ್ನು ಕಾಪಾಡಲು ಕೇಂದ್ರ ಸರ್ಕಾರವು ಕಾನೂನನ್ನು ಜಾರಿಗೆ ತರಬೇಕೆಂದು ಇಡೀ ಕಾರ್ಮಿಕ ವರ್ಗ ಐಕ್ಯತೆಯಿಂದ ಪ್ರತಿಪಾದಿಸಿದರೂ ಫಲಕಾರಿಯಾಗಲಿಲ್ಲ. ಆದರೆ ಕಾರ್ಮಿಕ ವರ್ಗವು ದೇಶಾದ್ಯಂತ ಒಂದು ದಿನದ ಮುಷ್ಕರವನ್ನು ಯಶಸ್ವಿಯಾಗಿ ಆಚರಿಸವುದರ ಮೂಲಕ, ತನ್ನ ಮೂಲಭೂತ ಹಕ್ಕಿನ ಮೇಲೆ ಎರಗಿದ ಧಾಳಿಯನ್ನು ತೀವ್ರವಾಗಿ ವಿರೋಧಿಸಿತು.

ಉದ್ಯೋಗವಕಾಶಗಳನ್ನು ಕಡಿತಗೊಳಿಸುವ ಸರ್ಕಾರಗಳ ನಿರ್ಧಾರದಿಂದ ಉತ್ತೇಜಿತರಾದ ಖಾಸಗಿ ಕ್ಷೇತ್ರವು ಗುತ್ತಿಗೆಯ ಆಧಾರಿತ ಮೇಲೆ, ಹಂಗಾಮಿಯಾಗಿ ಕಾರ್ಮಿಕರನ್ನು ನೇಮಿಸಿಕೊಳ್ಳುವುದರ ಮೇಲೆ ಹೆಚ್ಚು ಒತ್ತು ಕೊಡುತ್ತಿವೆ. 2002ನೇ ಇಸವಿಯಿಂದ ಈಚೆಗೆ ಪ್ರತಿವರ್ಷ ಶೇ 2 ರಷ್ಟು ಉದ್ಯೋಗಗಳನ್ನು ಕಡಿತ ಮಾಡಬೇಕೆಂದು ಕೇಂದ್ರ ಸರ್ಕಾರ ನಿರ್ಧರಿಸಿದುದರಿಂದ ಪ್ರತಿವರ್ಷ 66,000 ದಷ್ಟು ಉದ್ಯೋಗ ಕಡಿಮೆಯಾಗುತ್ತಿದೆ. ಹೆಚ್ಚಿನ ರಾಜ್ಯ ಸರ್ಕಾರಗಳು ಮತ್ತು ಸಾರ್ವಜನಿಕ ಉದ್ದಿಮೆಗಳು ಇದೇ ನೀತಿ ಅನುಸರಿಸುತ್ತಿವೆ. ಒಟ್ಟಾರೆಯಾಗಿ, ಸಂಘಟಿತ ಕ್ಷೇತ್ರದಲ್ಲಿ ಕಳೆದ 4 ವರ್ಷಗಳಲ್ಲಿ 7 ಲಕ್ಷದಷ್ಟು ಉದ್ಯೋಗಗಳು ಕಡಿಮೆಯಾಗಿವೆ ಎಂದು ಅಂದಾಜು ಮಾಡಲಾಗಿದೆ.

ಗುತ್ತಿಗೆ ಮತ್ತು ಕ್ಯಾಷುವಲ್ ಆಧಾರದಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಹೆಚ್ಚುತ್ತಿರುವಾಗಲೇ ಕಂಪನಿಯು ಇಡೀ ಉತ್ಪಾದನಾ ವಿಧಾನವನ್ನೇ ಬದಲಿಸಿ, ಕಂಟ್ರಾಕ್ಟುದಾರರಿಗೆ ನೀಡಿ, ಮಾಲಿಕರು ಕೇವಲ ವ್ಯಾಪಾರಕ್ಕೆ ಸೀಮಿತಗೊಳ್ಳುವ ವ್ಯವಸ್ಥೆಯೂ ಹೆಚ್ಚುತ್ತಿದೆ. ಇದರಿಂದ ಮನೆ ಆಧಾರಿತ ಕೆಲಸಗಳು ಜಾಸ್ತಿಯಾಗಿ, ಮಹಿಳೆಯರೇ ಹೆಚ್ಚಾಗಿ ಕಡಿಮೆ ಕೂಲಿಯಲ್ಲಿ ದುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭಗಳಲ್ಲಿ ಕಾರ್ಮಿಕ ಹಕ್ಕುಗಳಿಂದ ವಂಚಿತರಾದ ಉದ್ಯೋಗಿಗಳು ಸೇವಾ ಭದ್ರತೆ ಇಲ್ಲದೆ, ವೇತನದಲ್ಲಿ ನಿರಂತರತೆ ಇಲ್ಲದೆ ಜೀವನದುಸ್ತರವಾಗುತ್ತಿದೆ. ಇದರಿಂದ ಉದ್ಯೋಗ ಸಂಬಂಧಗಳು ಬದಲಾಗುತ್ತಿದ್ದು, ಕಾರ್ಮಿಕ ಸಂಘದ ಚಟುವಟಿಕೆಗಳನ್ನು ದುರ್ಬಲಗೊಳಿಸಲಾಗುತ್ತಿದೆ ಮತ್ತು ಹತ್ತಿಕ್ಕಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಕಾರ್ಮಿಕ ಕಾನೂನುಗಳನ್ನು ಪುನರ್‌ರಚಿಸುವ, ಕಿತ್ತುಹಾಕುವ ಪ್ರಯತ್ನಗಳು ಸಾಗುತ್ತಿವೆ. ಕೆಲಸದ ಸಮಯ, ಸೇವಾಭದ್ರತೆ, ವೇತನಕ್ಕೆ ಸಂಬಂಧಪಟ್ಟಂತೆ ಕಾನೂನುಗಳ ಜಾರಿಗಳ ಕುರಿತು ಅಲಕ್ಷ್ಯ ತೋರಿಸಲಾಗುತ್ತಿದೆ. ಕನಿಷ್ಟ ವೇತನ ಕಾಯಿದೆಗೆ ಒಳಪಟ್ಟ ಕಾರ್ಮಿಕರಲ್ಲಿ ಶೇಕಡಾ 50 ಕ್ಕಿಂತಲೂ ಹೆಚ್ಚು ಕಾರ್ಮಿಕರಿಗೆ ಕನಿಷ್ಟ ವೇತನಕ್ಕಿಂತಲೂ ಅತಿ ಕಡಿಮೆ ವೇತನ ದೊರೆಯುತ್ತಿದೆ.



ಗುತ್ತಿಗೆ ಮತ್ತು ಕ್ಯಾಷುವಲ್ ಕಾರ್ಮಿಕರನ್ನು ಹೆಚ್ಚಿಸಲು, ಮಾಲಿಕರು ಮನಬಂದಂತೆ ಕಾರ್ಮಿಕರನ್ನು ಶೋಷಿಸಲು ಅನುಕೂಲವಾಗುವಂತೆ ಕೈಗಾರಿಕಾ ವಿವಾದ ಕಾಯಿದೆ, ಗುತ್ತಿಗೆ ಕಾರ್ಮಿಕ ಕಾಯಿದೆ, ಫ್ಯಾಕ್ಟರಿ ಕಾಯಿದೆ, ಕೈಗಾರಿಕಾ ಉದ್ಯೋಗ ಕಾಯಿದೆ ಇತ್ಯಾದಿಗಳಿಗೆ ತಿದ್ದುಪಡಿ ತರಲು ತೀವ್ರ ಪ್ರಯತ್ನಗಳು ನಡೆಯುತ್ತಿವೆ. ಕಳೆದ ಸಾರ್ವತ್ರಿಕ ಚುನಾವಣೆಗೆ ಮೊದಲು, 'ನಿಗದಿತ ಅವಧಿಯ ಉದ್ಯೋಗ'(FIXED TERM EMPLOY-MENT) ದ ಕುರಿತು ಎನ್‌ಡಿಎ ಸರ್ಕಾರವು ನೋಟಿಫಿಕೇಷನ್ ಜಾರಿ ಮಾಡಿದ್ದು, ಯುಪಿಎ ಸರ್ಕಾರ ಬಂದ ನಂತರ, ಕಾರ್ಮಿಕ ಸಂಘ ಚಳುವಳಿ ಮತ್ತು ಎಡ ಪಕ್ಷಗಳ ಒತ್ತಾಯದ ಮೇರೆಗೆ ಹಿಂತೆಗೆದುಕೊಳ್ಳಲಾಗಿತ್ತು.

ಭಾರತದಲ್ಲಿ ಸೇವಾ ಭದ್ರತೆಗೆ ಮೀಸಲಿಟ್ಟ ಹಣ ಕೇವಲ ಜಿಡಿಪಿಯ ಶೇ 1.5 ರಷ್ಟು ಮಾತ್ರ. ಇತರೆ ಬೆಳವಣಿಗೆ ಹೊಂದುತ್ತಿರುವ ರಾಷ್ಟ್ರಗಳಿಗೆ ಹೋಲಿಸಿದರೆ ಇದು ತೀರಾ ಕಡಿಮೆ. ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿಗೆ ಕಡಿಮೆ ಬಡ್ಡಿ, ಪೆನ್ಷನ್‌ನಿಧಿಯ ಕುರಿತು ಸುಗ್ರೀವಾಜ್ಞೆ ಮತ್ತು ವಿದೇಶಿ ಬಂಡವಾಳವನ್ನು ಆಹ್ವಾನಿಸಿರುವುದು, ಇತ್ಯಾದಿಗಳು ಸೇವಾಭದ್ರತೆಗೆ ಸಂಬಂಧಪಟ್ಟ ಉಳಿತಾಯವನ್ನು ಕಡಿತಗೊಳಿಸಿ ಶೇರು ವ್ಯಾಪಾರಕ್ಕೆ ಹೆಚ್ಚು ಒತ್ತು ಕೊಡುವ ಪ್ರಯತ್ನ ಸಾಗಿದೆ.

ಇಂತಹ ಸನ್ನಿವೇಶದಲ್ಲಿ 17ನೇ ಅಧಿವೇಶನದ ನಂತರ, ಜಾಗತೀಕರಣ ನೀತಿಗಳ ವಿರುದ್ಧ ದೇಶದಾದ್ಯಂತ ಎರಡು ಸಾರ್ವತ್ರಿಕ ಮುಷ್ಕರಗಳು ಸೇರಿದಂತೆ ಹಲವಾರು ಮುಷ್ಕರಗಳು ನಡೆದಿವೆ. ಬ್ಯಾಂಕ್, ಇನ್ಶೂರೆನ್ಸ್, ಅಂಚೆ, ಪೆಟ್ರೋಲಿಯಂ, ಸಾರ್ವಜನಿಕ ಉದ್ದಿಮೆಗಳಲ್ಲೂ ಮುಷ್ಕರಗಳು ನಡೆದಿವೆ. ಪಕ್ಷದ 18ನೇ ಅಧಿವೇಶನವು ಖಾಸಗೀಕರಣ ಮತ್ತು ಉದಾರೀಕರಣ ನೀತಿಗಳ ವಿರುದ್ಧ ಧೀರೋದಾತ್ತ ಹೋರಾಟಗಳನ್ನು ನಡೆಸಿದ ಕಾರ್ಮಿಕ ವರ್ಗವನ್ನು ಅಭಿನಂದಿಸುತ್ತಾ, ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಬೇಕೆಂದೂ ಕರೆ ನೀಡಿದೆ. ○

ಕೃಷಿ ಉತ್ಪನ್ನ ಮಾರುಕಟ್ಟೆ(ಎಪಿಎಂಸಿ) ಕಾಯ್ದೆಗೆ ತಿದ್ದುಪಡಿ ತಂದು ಕೃಷಿ ಉತ್ಪನ್ನಗಳ ಮುಕ್ತ ಮಾರುಕಟ್ಟೆಗೆ ಅವಕಾಶ ಕಲ್ಪಿಸುವ ರಾಜ್ಯ ಸರ್ಕಾರದ ಕ್ರಮದಿಂದಾಗಿ ರೈತರು ಕಂಗಾಲಾಗಿದ್ದಾರೆ. ವ್ಯಾಪಾರಸ್ಥರು ಆತಂಕಕ್ಕೆ ಒಳಗಾಗಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರ ಅಂಗೀಕರಿಸಿದ ಕಾಯ್ದೆಯನ್ನು ಈಗ ಯುಪಿಎ ಸರ್ಕಾರ ಅದನ್ನು ಜಾರಿಗೆ ತರಲು ಹೊರಟಿರುವುದು ಆಶ್ಚರ್ಯದ ಸಂಗತಿ. ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿ ಮಾರುಕಟ್ಟೆಯನ್ನು ಪ್ರವೇಶಿಸಲು ಅವಕಾಶ ನೀಡುವ ಮತ್ತು ಅಪಾಯಕಾರಿ 'ಗುತ್ತಿಗೆ ಬೇಸಾಯ' ಪದ್ಧತಿಯನ್ನು ಕಾನೂನುಬದ್ಧಗೊಳಿಸುವ ಈ ಕಾಯ್ದೆಯಿಂದ ಉಂಟಾಗುವ ಅನಾಹುತಗಳನ್ನು ಇಲ್ಲಿ ಚರ್ಚಿಸಲಾಗಿದೆ.



ಸಮಾಲೋಚನ ಸಭೆಯಲ್ಲಿ ಹಮಾಲಿ ಕಾರ್ಮಿಕರ ಸಂಘದ ಪ್ರಸನ್ನಕುಮಾರ್, ಎಪಿಎಂಸಿ ವರ್ತಕರ ಕ್ರಿಯಾ ಸಮಿತಿಯ ಸಿ.ಪಿ.ಸುಬ್ಬರಾಜಶೆಟ್ಟಿ, ರಾಜ್ಯ ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಪ್ರಾಂತ ರೈತ ಸಂಘದ ಮಾರುತಿ ಮಾನ್ಪಡೆ ಹಾಗೂ ಬಯ್ಯಾರೆಡ್ಡಿ

'ಎಪಿಎಂಸಿ ಮಾದರಿ ಕಾನೂನು-2003'
ರೈತವಿರೋಧಿ, ಜನವಿರೋಧಿ ನೀತಿಯನ್ನು

ಜಾಗತೀಕರಣ ನೀತಿಗಳಿಂದ ಕೃಷಿ ರಂಗ ಹಿಂದೆಂದೂ ಕಾಣದಂತ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇದರ ಪ್ರತಿಫಲವೇ ಕಳೆದ ಐದಾರು ವರ್ಷಗಳಿಂದ ಸಂಭವಿಸುತ್ತಿರುವ ಸಾವಿರಾರು ರೈತರ ಆತ್ಮಹತ್ಯೆಗಳು ಮತ್ತು ಕೃಷಿ ಕಾರ್ಮಿಕರ ಹಸಿವಿನ ಸಾವುಗಳು. ರೈತರ ಆತ್ಮಹತ್ಯೆಗಳಿಗೆ ಪ್ರಮುಖ ಕಾರಣ 'ಸಾಲ' ಎಂಬ ಬಾಧೆ ಎಂದು ಮೇಲ್ನೋಟಕ್ಕೆ ಕಂಡರೂ, ರೈತನು ಖಾಯಂ ಆಗಿ 'ಸಾಲ'ದ ಬಲೆಗೆ ಸಿಕ್ಕಿಸಿ ಹಾಕಲು ಪ್ರಮುಖ ಕಾರಣ 'ರೈತ ವಿರೋಧಿ ಮಾರುಕಟ್ಟೆ' ವ್ಯವಸ್ಥೆ. ಹಲವಾರು ಪ್ರತಿಕೂಲತೆಗಳನ್ನು ಎದುರಿಸಿಯೂ ಉತ್ಪಾದಿಸಿದ ರೈತರ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆಯನ್ನು ನೀಡುವ 'ರಾಷ್ಟ್ರೀಯ ಬೆಲೆ ನೀತಿ'ಯೊಂದನ್ನು ರೂಪಿಸಿ, ಜಾರಿ ಮಾಡಲು ಐದು ದಶಕಗಳ ಸ್ವಾತಂತ್ರ್ಯ ಭಾರತದಲ್ಲಿ ಸಾಧ್ಯವಾಗಲೇ ಇಲ್ಲ. ವರ್ಷದಿಂದ ವರ್ಷಕ್ಕೆ ಬೀಜ, ಗೊಬ್ಬರ, ವಿದ್ಯುತ್ ಇತ್ಯಾದಿ ಕೃಷಿ ಸಾಮಗ್ರಿಗಳ ಬೆಲೆಗಳು ಮತ್ತು ರೈತ ಉಪಯೋಗಿಸುವ ಬೀಜ, ಔಷಧ, ಸಿಮೆಂಟ್ ಇತ್ಯಾದಿ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿಕೆಯಾಗುತ್ತಿದ್ದರೂ ರೈತರ ಉತ್ಪಾದಿಸಿದ ಉತ್ಪನ್ನಗಳ ಬೆಲೆ ಮಾತ್ರ ಏರಿಕೆಯಾಗುತ್ತಿಲ್ಲ, ಮಾತ್ರವಲ್ಲ ಹಲವಾರು ಬಾರಿ ಪಾತಾಳಕ್ಕಿಳಿಯುತ್ತಿವೆ. ಮುಕ್ತ ಮಾರುಕಟ್ಟೆಯ ನೀತಿಗಳ ಜಾರಿಯ ನಂತರವಂತೂ ತೀರ ಅಗ್ಗದ ದರದ ವಿದೇಶಿ ಉತ್ಪನ್ನಗಳ ಆಮದಿನಿಂದ ಕೃಷಿಕರು ಸರ್ವನಾಶದ ಅಂಚಿಗೆ ತಲುಪಿದ್ದಾರೆ.

ಇಂತಹ ಭಯಾನಕ ಸ್ಥಿತಿಯಿಂದ ರೈತರನ್ನು ಮೇಲೆ, ಎತ್ತಿ ರಕ್ಷಿಸಬೇಕಾದ ರೀತಿಯಲ್ಲಿ 'ಮಾರುಕಟ್ಟೆ' ಮತ್ತು ಸಮಗ್ರ ಕೃಷಿ ನೀತಿಯನ್ನು ರೂಪಿಸಬೇಕಿರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಂದೆ ಇರುವ ತಕ್ಷಣದ ಕರ್ತವ್ಯವಾಗಿದೆ.

ಇಂತಹ ಜನಪರ ಆಶಯಗಳೊಂದಿಗೆ ಈ ದೇಶದ ರೈತರು, ಕೃಷಿ ಕೂಲಿಕಾರರು, ಕಳೆದ ಚುನಾವಣೆಯಲ್ಲಿ ಕೃಷಿ ವಿರೋಧಿ ನೀತಿಗಳನ್ನು ಅನುಸರಿಸಿದ ಬಿಜೆಪಿ ನಾಯಕತ್ವದ ಎನ್‌ಡಿಎ ಸರ್ಕಾರವನ್ನು ತಿರಸ್ಕರಿಸಿ, ಬದಲಿ ಸರ್ಕಾರದ ರಚನೆಗೆ ಜನಾದೇಶವನ್ನು ನೀಡಿದರು. ಈ ಜನಾದೇಶದ ಫಲವಾಗಿ ಎಡಪಕ್ಷಗಳ ಬೆಂಬಲದೊಂದಿಗೆ ಕೇಂದ್ರದಲ್ಲಿ ಅಧಿಕಾರವನ್ನು ಹಿಡಿದಿರುವ ಕಾಂಗ್ರೆ ನಾಯಕತ್ವದ ಯುಪಿಎ ಸರ್ಕಾರ, 'ಕೃಷಿ ಮಾರುಕಟ್ಟೆ' ಪ್ರಶ್ನೆಗೆ ಸಂಬಂಧಿಸಿ, ಜನಾದೇಶವನ್ನು ಸಂಪೂರ್ಣವಾಗಿ ಧಿಕ್ಕರಿಸಿ, ವಿಶ್ವ ವ್ಯಾಪಾರ ಸಂಘಟನೆ(WTO), ವಿಶ್ವ ಬ್ಯಾಂಕ್ ನೀತಿಗಳಿಗೆ ಶರಣಾಗಿ ಈ ಹಿಂದಿನ ಬಿಜೆಪಿ ನಾಯಕತ್ವದ ಎನ್‌ಡಿಎ ಸರ್ಕಾರ ರೂಪಿಸಿದ್ದ 'ಎಪಿಎಂಸಿ ಮಾದರಿ ಕಾನೂನು-2003' ಎಂಬ ರೈತ ವಿರೋಧಿ, ಜನ ವಿರೋಧಿಯಾದ ಕಾನೂನಿನ ಅನ್ವಯ 'ಮಾರುಕಟ್ಟೆ'ಸ ನೀತಿಯನ್ನು ಎಲ್ಲಾ ರಾಜ್ಯ ಸರ್ಕಾರಗಳು ಜಾರಿ ಮಾಡಲೇಬೇಕೆಂದು ಪಟ್ಟು ಹಿಡಿದು ಕೂತಿದೆ. ಮಾತ್ರವಲ್ಲ, ಈ ಕಾನೂನನ್ನು ರಾಜ್ಯ ಸರ್ಕಾರಗಳು ಜಾರಿ ಮಾಡದಿದ್ದರೆ ಕೇಂದ್ರದಿಂದ ರಾಜ್ಯ ಸರ್ಕಾರಗಳಿಗೆ ಸಿಗಬೇಕಿರುವ 'ನಿಧಿ'ಗಳನ್ನು ತಡೆ ಹಿಡಿಯುವುದಾಗಿ ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಸ್ವತಃ ಕೇಂದ್ರ ಕೃಷಿ ಸಚಿವರೇ ಈ ಫರ್ಮಾನನ್ನು ಹೊರಡಿಸಿದ್ದಾರೆ.

ಕಾಂಗ್ರೆ ನಾಯಕತ್ವ ಯುಪಿಎ ಸರ್ಕಾರದ ಈ ಕ್ರಮ ಪರಿಸ್ಥಿತಿ ಕಾರಣದಿಂದ ಯುಪಿಎ ಧ್ವನಿಯಲ್ಲಿ ಮಾತನಾಡಿದರೂ ಜಾಗತೀಕರಣದ ನೀತಿಗಳನ್ನು ಜಾರಿ ಮಾಡುವ ವಿಷಯದಲ್ಲಿ ಹಿಂದಿನ ಎನ್‌ಡಿಎಗೂ, ತನಗೂ ಏನೂ ವ್ಯತ್ಯಾಸವಿಲ್ಲವೆಂದು ಮತ್ತೊಮ್ಮೆ ಸಾಬೀತುಮಾಡಿದೆ. 'ಎಪಿಎಂಸಿ ಮಾದರಿ ಕಾನೂನು-2003' ಭಾರಿ ಕ್ರಾಂತಿಕಾರಕವೆಂದು, ಇದರಿಂದ ಹಾಲಿ ಎಪಿಎಂಸಿಗಳಲ್ಲಿ ನಡೆಯುತ್ತಿರುವ ಅನ್ಯಾಯ, ಅಕ್ರಮಗಳಿಗೆ ತಿಲಾಂಜಲಿ ನೀಡಿ, ಸಾವಿರಾರು ಕೋಟಿ ಬಂಡವಾಳ ಹೂಡಿಕೆಯೊಂದಿಗೆ ವೃತ್ತಿಪರತೆ, ಸ್ಪರ್ಧೆಯನ್ನು ಹೆಚ್ಚಿಸಿ ರೈತರನ್ನು ಉದ್ದಾರ ಮಾಡುವುದಾಗಿ ಕೇಂದ್ರ ಮತ್ತು ಕೆಲವು ರಾಜ್ಯ ಸರ್ಕಾರಗಳು ಬೊಗಳೆ ಬಿಡುತ್ತಿವೆ. ಹಾಗಾದರೆ ವಾಸ್ತವವಾಗಿ ಈ ಎಪಿಎಂಸಿ 'ಮಾದರಿ ಕಾನೂನು-2003' ರಲ್ಲಿ ಏನಿದೆ ಎಂಬದನ್ನು ನೋಡೋಣ.

ಎಪಿಎಂಸಿ 'ಮಾದರಿ ಕಾನೂನು-2003' ರಲ್ಲಿ ಏನಿದೆ?

ಬಿಜೆಪಿ ನಾಯಕತ್ವ ಎನ್‌ಡಿಎ ಸರ್ಕಾರ ರೂಪಿಸಿದ ಮತ್ತು ಯುಪಿಎ ಜಾರಿ ಮಾಡಲು ಪಣ ತೊಟ್ಟಿರುವ ಮಾದರಿ ಕಾನೂನು - 2003 ಹಾಲಿ ಇರುವ ಕೃಷಿ ಉತ್ಪನ್ನಗಳ ಮಾರುಕಟ್ಟೆಗಳಲ್ಲಿ ರೈತರಿಗೆ ಅನ್ಯಾಯ, ಅಕ್ರಮಗಳು ನಡೆಯುತ್ತಿವೆಂದು, ವೃತ್ತಿಪರತೆ, ಸ್ಪರ್ಧೆ ಇಲ್ಲವೆಂದು, ಈ ಕಾರಣದಿಂದ ರೈತರಿಗೆ ಸರಿಯಾದ ಬೆಲೆಗಳು ಸಿಗುತ್ತಿಲ್ಲವೆಂದು ಹೇಳುತ್ತಾ, ಈ ದೋಷಗಳನ್ನು ಸರಿಪಡಿಸಲು 'ವಿಶೇಷ ಮಾರುಕಟ್ಟೆ', 'ಖಾಸಗಿ ಮಾರುಕಟ್ಟೆ'ಗಳನ್ನು ಸ್ಥಾಪನೆ ಮಾಡುವುದಾಗಿ ಸಾರುತ್ತದೆ. ಸಾವಿರಾರು ಕೋಟಿ ರೂ.ಗಳ ಬಂಡವಾಳ ಹೂಡಿಕೆಯೊಂದಿಗೆ ಪ್ರಾರಂಭವಾಗುವ ಖಾಸಗಿ ಮಾರುಕಟ್ಟೆಗಳನ್ನು ಸ್ಥಾಪಿಸುವ 'ಮೆಟ್ರೋ' ಮಾದರಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಹಾಲಿ ಎಪಿಎಂಸಿಗಳ ನಡುವೆ ಸ್ಪರ್ಧೆ ಉಂಟಾಗಿ, ರೈತರಿಗೆ ಭಾರಿ ಉತ್ತಮ ಬೆಲೆಗಳನ್ನು ನೀಡಲು ಸಾಧ್ಯವಾಗುತ್ತದೆಂದು ವಾದಿಸುತ್ತದೆ. ಅಷ್ಟು ಮಾತ್ರವಲ್ಲದೆ ಕೃಷಿಕರು ಇನ್ನೂ ಮುಂದೆ, ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು 'ಮಾರುಕಟ್ಟೆ'ಗಳಿಗೆ ಬರಬೇಕಾಗಿಲ್ಲವೆಂದು, 'ಖಾಸಗಿ ಮಾರುಕಟ್ಟೆ'ಗಳು, 'ವಿಶೇಷ ಮಾರುಕಟ್ಟೆ'ಗಳು

ಜಿ.ಸಿ.'ಬ


ನೇರವಾಗಿ ರೈತರಿಂದ ಹೊಲ, ಗದ್ದೆ, ತೋಟಗಳಿಂದಲೇ ಖರೀದಿ ಮಾಡಲಾಗುವುದೆಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವಾಗಿ ಉತ್ತಮ ಬೀಜ, ಗೊಬ್ಬರ, ಕೀಟನಾಶಕ, ಹಣಕಾಸು ತಂತ್ರಜ್ಞಾನದ ಕೊರತೆಗಳಿಂದ ನರಳುತ್ತಿರುವ ಬಹುಸಂಖ್ಯಾತ ರೈತರಿಗೆ ಅಗತ್ಯ ನೆರವುಗಳನ್ನು ನೀಡಿ, ಮಾರುಕಟ್ಟೆಗಳು ಇವರ ಉತ್ಪನ್ನಗಳನ್ನು ಖರೀದಿ ಮಾಡುವ ಸಹಾಯಕವಾಗುವ ರೀತಿಯಲ್ಲಿ 'ಕ್ರಾಂಟ್ರಾಕ್ಟ್ ಬೇಸಾಯ' ಪದ್ಧತಿಯನ್ನು ಈ ಕಾನೂನು ದೊಡ್ಡ ಪ್ರಮಾಣದಲ್ಲಿ ಪ್ರೋತ್ಸಾಹಿಸುತ್ತಿದೆ ಎಂದು ಹೇಳುತ್ತಾ ಈ 'ವಿಶೇಷ ಮಾರುಕಟ್ಟೆ', 'ಖಾಸಗಿ ಮಾರುಕಟ್ಟೆ'ಗಳನ್ನು ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿಯನ್ನು ಚುನಾಯಿತ ಸಮಿತಿಗಳ ಬದಲಿಗೆ ಸರ್ಕಾರ ನೇಮಿತ ಸಮಿತಿಗಳಿಗೆ ಪ್ರಸ್ತಾವಗಳನ್ನು ಇಟ್ಟಿದೆ.

ಆಹಾರ ಭದ್ರತೆ' ಮತ್ತು ದೇಶದ ಸ್ವಾವಲಂಬನೆಯನ್ನು ನಾಶಪಡಿಸುವ ವಿಶ್ವವ್ಯಾಪಾರಿ ಸಂಘಟನೆ (ಡಬ್ಲ್ಯು?ಟಿಒ)ನ ಮತ್ತೊಂದು ಅವತಾರವೇ ಎಪಿಎಂಸಿ ಮಾದರಿ ಕಾನೂನು 2004"

ಮೇಲ್ ನೋಟಕ್ಕೆ ಅತ್ಯಂತ ರೈತರಪರವೆಂದು ಕಾಣುವ 'ಮಾದರಿ ಕಾನೂನು-2003' ವಾಸ್ತವವಾಗಿ ದೇಶದ 'ಕೃಷಿ ಪದ್ಧತಿ' 'ಆಹಾರ ಭದ್ರತೆ'ಯನ್ನು

ಡಾ.ಎಂ.ಮಹದೇವಪ್ಪ
ವಿಶ್ರಾಂತ ಕುಲಪತಿಗಳು ಕೃಷಿ ವಿ.ವಿ. ಧಾರವಾಡ





ರೈತ ಸಂಘದ ಪುಟ್ಟಣ್ಣಯ್ಯ

ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡನಂತೆ

"ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿನೋಡಿಕೊಂಡನಂತೆ" ಎಂಬ ನಾನುಡಿಯಂತೆ ಪಾಪಪ್ರಜ್ಞೆಯಿಂದ ನರಳುತ್ತಿದೆ ಬೆಂಗಳೂರಿನಲ್ಲಿ ಸಗಟುವ್ಯಾಪಾರದಲ್ಲಿ ತೊಡಗಿರುವ 'ಮೆಟ್ರೋ ಕ್ಯಾಷ್ ಅಂಡ್ ಕ್ಯಾರಿ" ಹೆಸರಿನ ಜರ್ಮನಿಯ ಬಹುರಾಷ್ಟ್ರೀಯ ಕಂಪನಿ. 'ಎಪಿಎಂಸಿ ಮಾದರಿ ಕಾನೂನು-2003'ರ ವಿರುದ್ಧ ಹಾಗೂ ರಾಜ್ಯಸರ್ಕಾರ ಈ ಕಾನೂನಿನ ಅನ್ವಯ' 1966 ಎಪಿಎಂಸಿ ಕಾಯ್ದೆಗೆ ತಿದ್ದುಪಡಿಗಳನ್ನು ತರಬಾರದೆಂದು ಸಕ್ರಿಯವಾಗಿ ಹೋರಾಟಗಳಲ್ಲಿ ತೊಡಗಿಕೊಂಡಿರುವ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಮತ್ತು ಅದರ ಪ್ರಧಾನ ಕಾರ್ಯದರ್ಶಿಯಾಗಿರುವ ಜಿ.ಸಿ.ಬಯ್ಯಾರೆಡ್ಡಿಯವರ ಮೇಲೆ ಕಳ್ಳನಂತೆ ಬೆಂಗಳೂರಿನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ, ಪ್ರಾಂತ ರೈತ ಸಂಘದವರು, ತಮ್ಮ ಮಾರಾಟ ಮಳಿಗೆಯ ಮೇಲೆ ದಾಳಿ ಮಾಡಿ, ತನ್ನ ಆಸ್ತಿಪಾಸ್ತಿಗಳನ್ನು ನಾಶಪಡಿಸುವ, ತನ್ನ ನೌಕರರ ಮೇಲೆ ಹಲ್ಲೆ ನಡೆಸುವ ಇತ್ಯಾದಿ ಸಾಧ್ಯತೆಗಳಿರುವ ಕಾರಣದಿಂದ ರೈತ ಸಂಘದವರು ತನ್ನ ಮಾರಾಟ ಮಳಿಗೆ, ಕಛೇರಿಗಳಿಂದ 500 ಮೀಟರ್ ಅಂದರೆ ಅರ್ಧ ಕಿ.ಮೀ. ದೂರ ಇರುವಂತೆ ಆಜ್ಞೆಯನ್ನು ನೀಡಿ ತಮ್ಮನ್ನು ರಕ್ಷಿಸಬೇಕೆಂದು ಕೇಳಿಕೊಂಡಿದ್ದಾರೆ. ಸಾಮಾನ್ಯ ಜನರ ರಕ್ಷಣೆಯ ವಿಷಯದಲ್ಲಿ ತಡೆ ಮಾಡಿದರೂ ಪರವಾಗಿಲ್ಲ, ದೇಶವನ್ನು ಉದ್ದಾರ ಮಾಡಲು ದುಡಿಯುತ್ತಿರುವ 'ಮೆಟ್ರೊ' ನಂತ ಬಹುರಾಷ್ಟ್ರೀಯ ಕಂಪನಿಗೆ ರಕ್ಷಣೆ ನೀಡಬೇಕಾಗಿರುವುದು ಆದ್ಯ ಕರ್ತವ್ಯವೆಂದು ಭಾವಿಸಿ, ಕಂಪನಿಯವರು ಹಾಕಿಕೊಂಡು ಅರ್ಜಿ ಮತ್ತು ಕೆಲವು ಪತ್ರಿಕಾ ಹೇಳಿಕೆಗಳನ್ನು ಆಧಾರವಾಗಿಟ್ಟುಕೊಂಡು ಹಿಂದೆ ಮುಂದೆ ಯೋಚನೆ ಮಾಡದೇ ರೈತ ಸಂಘದವರು ಈ ಕಂಪನಿಯ ಕಛೇರಿ, ಮಳಿಗೆ ಸುತ್ತಮುತ್ತ 500 ಮೀಟರ್ ದೂರದಲ್ಲಿ ಇರಬೇಕೆಂದು ನಮ್ಮ ನ್ಯಾಯಾಲಯ ಆದೇಶವನ್ನು ನೀಡಿಬಿಟ್ಟಿದೆ.

ಈ ಕೇಸನ್ನು ನ್ಯಾಯಾಲಯದ ಒಳಗೆ ಮತ್ತು ನ್ಯಾಯಾಲಯದ ಹೊರಗೆ ಎದುರಿಸಲು ಇತ್ತೀಚೆಗೆ ಸೇರಿದ್ದ ರೈತ ಸಂಘದ ರಾಜ್ಯ ಮುಖಂಡತ್ವ ನಿರ್ಧರಿಸಿದೆ.

ವಾಯಕ್ಕೆ ಸಿಲುಕಿಸಿ, ಬಹುರಾಷ್ಟ್ರೀಯ ಕಂಪನಿಗಳ ತ್ತು ಇವುಗಳ ಒಡೆಯರಾದ ಸಾಮ್ರಾಜ್ಯಶಾಹಿ ೇಶಗಳ ತಾಳಕ್ಕೆ ತಕ್ಕಂತೆ ಕುಣಿಯುವಂತೆ ದೇಶದ ್ವಾವಲಂಬನೆಯನ್ನು ನಾಶಪಡಿಸುವುದೇ ಇದರ ರಮ ಗುರಿಯಾಗಿದೆ.

ಸದ್ಯ ಎಪಿಎಂಸಿ ಮಾರುಕಟ್ಟೆಗಳಲ್ಲಿ ಇರುವ ಂಭೀರವಾದ ಕೆಲವು ಲೋಪದೋಷಗಳನ್ನು ರಿಪಡಿಸುವ ಜವಾಬ್ದಾರಿ ಹೊತ್ತಿರುವ ರ್ಕಾರಗಳು, ಅದನ್ನು ಮಾಡದೇ, ಸಾವಿರಾರು ೋಟಿ ರೂ ಬಂಡವಾಳ ತೊಡಗಿಸಿರುವ ಮತ್ತು ಾವಿರಾರು ಸರ್ಕಾರಿ ನಿಯಂತ್ರಿತ ಎಪಿಎಂಸಿಗಳು ೇಮ್ಮೆ ಮಾರುಕಟ್ಟೆಗಳು ಇತ್ಯಾದಿ ಹಲವು ಕ್ಷೇತ್ರದ ಾರುಕಟ್ಟೆ ಹಾಪ್‌ಕಾಮ್ಸ್, ಹಾಲು ಒಕ್ಕೂಟಗಳು ತ್ಯಾದಿ ಸಹಕಾರಿ ಕ್ಷೇತ್ರದ ಮಾರುಕಟ್ಟೆಯ ಸಂಘ, ಂಸ್ಥೆಗಳನ್ನು ಬಹುರಾಷ್ಟ್ರೀಯ ದೈತ್ಯ ಕಂಪನಿಗಳ ೊತೆ ಅಸಮಾನ ಸ್ಪರ್ಧೆಗೆ ಇಳಿಸಿ ಇವುಗಳನ್ನು ಾಶಪಡಿಸಿ, ಇವುಗಳ ಆಸ್ತಿಗಳನ್ನು ಮೂರು ಕಾಸು, ಾಲ್ಕು ಕಾಸುಗಳಿಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಾರಾಟ ಮಾಡುವುದರ ಜೊತೆಗೆ, ಈ ಕ್ಷೇತ್ರದಲ್ಲಿ

...ಮ್ಮೆಟ್ಟಿಸಬೇಕು

ೂಡಗಿರುವ ಸುಮಾರು ಮೂರು ಕೋಟಿ ರ್ತಕರು, ಹಮಾಲರು, ಬೀದಿಬದಿಯ ಚಿಲ್ಲರೆ ್ಯಾಪಾರಸ್ಥರು, ನೌಕರರ ಉದ್ಯೋಗ, ದುಕುಗಳನ್ನು ನಾಶಪಡಿಸಲು ಇದೇ ಕೃಷಿ ುತ್ಪನ್ನಗಳ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಬೇಕೆನ್ನುವ ವಿಶ್ವವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಮತ್ತು ಶ್ವಬ್ಯಾಂಕ್‌ಗಳ ಆದೇಶವನ್ನು ಪಾಲಿಸುತ್ತಿವೆ.

...ದ್ದಿ

ಈ ಮಾದರಿ ಕಾನೂನಿನ ಅತ್ಯಂತ ಗಂಭೀರ ಂಶ 'ಕಾಂಟ್ರಾಕ್ಟ್ ಬೇಸಾಯ' ಪದ್ಧತಿ, ಈ ಪದ್ಧತಿಯಿಂದ ದೇಶದ ಅಗತ್ಯಗಳಿಗೆ ಪೂರಕವಾಗಿ ಕೃಷಿ ಉತ್ಪಾದನೆಯಾಗುವ ಬದಲಿಗೆ ಬಹುರಾಷ್ಟ್ರೀಯ ಕಂಪನಿಗಳ ಮತ್ತು ಆ ಕಂಪನಿಗಳ ಒಡೆತನದ ಮುಂದುವರಿದ ದೇಶಗಳ ಅಗತ್ಯಗಳಿಗೆ ಅನುಗುಣವಾಗಿ ಕೃಷಿ ಉತ್ಪಾದನಾ ಕ್ರಮಗಳು ಆರಂಭವಾಗುತ್ತವೆ. ಇದರಿಂದ ದೇಶದ 'ಕೃಷಿ ಅಭಿವೃದ್ಧಿ' 'ಆಹಾರಭದ್ರತೆ' ಅಪಾಯಕ್ಕೆ ಗುರಿಯಾಗುತ್ತದೆ. ಅಲ್ಲದೇ ಮತ್ತಷ್ಟು ಭೂಮಿಯ ಫಲವತ್ತತೆ ನಾಶ, ಅಂತರಜಲ ತೀವ್ರತರವಾಗಿ ಕುಸಿತ, ರೈತರ ಶೋಷಣೆ, ವಿಪರೀತ ಕೃಷಿ ಯಾಂತ್ರೀಕರಣದಿಂದ ಕೃಷಿ ಕೂಲಿಕಾರರಿಗೆ ನಿರುದ್ಯೋಗ, ಇತ್ಯಾದಿ ಸಮಸ್ಯೆಗಳು ಉಂಟಾಗುವುದಲ್ಲದೇ ಒಟ್ಟಾರೆ ರೈತರನ್ನು ಬಹುರಾಷ್ಟ್ರೀಯ ಕಂಪನಿಗಳ ಗುಲಾಮರನ್ನಾಗಿಸುತ್ತದೆ.

ಈ ಹಿನ್ನೆಲೆಯಲ್ಲಿ ದೇಶದ ಪ್ರಗತಿಪರ ಶಕ್ತಿಗಳು, ಎಡಪಕ್ಷಗಳು, ರೈತರ, ವರ್ತಕರ ಇತ್ಯಾದಿ ಜನಸಂಘಟನೆಗಳು ಉಗ್ರವಾಗಿ ಈ ಕಾನೂನುಗಳ ವಿರೋಧಿಸುತ್ತಿವೆ ಮತ್ತು ಈ ಜನವಿರೋಧಿ ಕಾನೂನಿನ ಆಧಾರದಲ್ಲಿ ರಾಜ್ಯಗಳ ಎಪಿಎಂಸಿ ಕಾಯ್ದೆಗೆ ತಿದ್ದುಪಡಿಗಳನ್ನು ತರಬಾರದೆಂದು ಹೋರಾಟಗಳು ದೇಶಾದ್ಯಂತ ಎದ್ದಿವೆ.

ಲೋಕಸಭೆಯಲ್ಲಿ ಪ್ರತಿಪಕ್ಷವಾಗಿರುವ ಬಿಜೆಪಿ ನಾಯಕತ್ವದ ಎನ್‌ಡಿಎ ಸರ್ಕಾರವೇ ಈ ಕಾನೂನ್ನನು ರಚಿಸಿರುವ ಕಾರಣದಿಂದ ಇದನ್ನು ಉಗ್ರವಾಗಿ ವಿರೋಧಿಸುವ ಸ್ಥಿತಿಯಲ್ಲಿ ಎನ್‌ಡಿಎ ಪಕ್ಷಗಳು ಇಲ್ಲ. ಇದನ್ನು ವಿರೋಧಿಸಬೇಕಾಗಿದ್ದು ಕಾಂಗ್ರೆ ನಾಯಕತ್ವದ ಯುಪಿಎ ಕೇಂದ್ರಸರ್ಕಾರ ಜಾರಿ ಮಾಡಲು ಪಣತೊಟ್ಟಿರುವ ಈ ಸಂದರ್ಭದಲ್ಲಿ ಸಿಪಿಐ(ಎಂ) ನಾಯಕತ್ವದ ಎಡಪಕ್ಷಗಳು ಮಾತ್ರ ಈ ಕಾನೂನನ್ನು ವಿರೋಧಿಸುತ್ತಿವೆ. ಈಗಾಗಲೇ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಇದರ ಅನ್ವಯ ರಾಜ್ಯದಲ್ಲಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿಗಳನ್ನು ತರುವುದಿಲ್ಲವೆಂದು ಘೋಷಿಸಿದೆ. ಬೇರೆ ಕೆಲವು ರಾಜ್ಯ ಸರ್ಕಾರಗಳು ಸಹ ಬೇರೆ ಬೇರೆ ಕಾರಣಗಳಿಂದ ಇದನ್ನು ವಿರೋಧಿಸುತ್ತಿವೆ.

ಹೀಗಾಗಿ ಜಾತೀಕರಣದ ನೀತಿಗಳ ಫಲವಾಗಿ ಜಾರಿಯಾಗುತ್ತಿರುವ ಈ ನೀತಿಗಳನ್ನು ಎದುರಿಸಲು ವಿಶಾಲವಾದ ಜನ ಚಳುಗಳಿಗಳಿಂದ ಮಾತ್ರ ಸಾಧ್ಯ.

ಈ ನಿಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತಸಂಘ(ಕೆಪಿಆರ್‌ಎಸ್) ಪ್ರಪ್ರಥಮವಾಗಿ, ಎಪಿಎಂಸಿ ಮಾದರಿ ಕಾನೂನು-2003 ವಿಷಯ್ನವನ್ನು ಕೈಗೆತ್ತಿಕೊಂಡು ಇದರ ವಿರುದ್ಧ ಕಳೆದ ಏಪ್ರಿಲ್ 7,2005 ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಸಂಘಟಿಸಿ, ಏಪ್ರಿಲ್ 24-30,05ರ ಪ್ರಚಾರಾಂದೋಲನ ನಡೆಸಿ, ಮೇ 3-6,05 ರವರೆಗೆ ಪ್ರತಿಭಟನಾ ಧರಣಿ, ಕಛೇರಿಗಳ ಮುತ್ತಿಗೆಯನ್ನು ಸಂಘಟಿಸಿ ರಾಜ್ಯದ ರೈತ ವರ್ತಕರು, ಇತ್ಯಾದಿ ಜನವಿಭಾಗಗಳಿಂದ ಭಾರಿ ಉತ್ತಮ ಪ್ರತಿಕ್ರಿಯೆ ದೊರೆಯಿತು.



ಸಭೆಯಲ್ಲಿ ಪಾಲ್ಗೊಂಡ ವರ್ತಕ ಮತ್ತು ರೈತ ಪ್ರತಿನಿಧಿಗಳು

ಮಾಧ್ಯಮಗಳು, ಮಂತ್ರಿಗಳು ಈ ಕುರಿತು ಪ್ರತಿಕ್ರಿಯಿಸಲು ಶುರು ಮಾಡಿದರು. ಬೆಂಗಳೂರಿನಲ್ಲಿ 'ಮೆಟ್ರೋ' ಕ್ಯಾಷ್ ಅಂಡ್ ಕ್ಯಾರಿಯ ಮಾರಾಟ ಮಳಿಗೆಗಳು ತನ್ನ ವ್ಯಾಪಾರವನ್ನು ಶುರು ಮಾಡಿದ ಸಂದರ್ಭದಲ್ಲಿ ಹೋರಾಟ ನಡೆಸಿದ್ದ ಬೆಂಗಳೂರಿನ ಯಶವಂತಪುರದ ಎಪಿಎಂಸಿ ಮಾರುಕಟ್ಟೆಯ ವರ್ತಕರು, ಇತ್ಯಾದಿಜನ ಸಂಘಟನೆಗಳು ಈ ಬಗ್ಗೆ ಹೋರಾಟಕ್ಕೆ ಸಿದ್ಧವಿರುವ ಹೇಳಿಕೆಗಳನ್ನು ನೀಡಿದರು.

ಇಂತಹ ಸಂದರ್ಭ ಮೇ 25, 05 ರಂದು ಬೆಂಗಳೂರಿನಲ್ಲಿ ರಾಜ್ಯ ವಿವಿಧ ರೈತ ಸಂಘಟನೆಗಳು, ವರ್ತಕರ ಸಂಘಗಳು, ಹಮಾಲರ ಸಂಘಗಳ ರಾಜ್ಯ ಪದಾಧಿಕಾರಿಗಳ ಸಮಾಲೋಚನಾ ಸಭೆಯೊಂದನ್ನು ಕರ್ನಾಟಕ ಪ್ರಾಂತ ರೈತ ಸಂಘ (KPRS) ಸಂಘಟಿಸಿತ್ತು.

ಈ ಸಭೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಎರಡು ಬಣಗಳ ಮುಖಂಡರಾದ ಕೆ.ಎಸ್.ಪುಟ್ಟಣ್ಣಯ್ಯ, ಕೋಡಿಹಳ್ಳಿ ಚಂದ್ರಶೇಖರ್, ವರ್ತಕರ ಸಂಘಗಳ ಮುಖಂಡರಾದ ಸುಬ್ಬರಾಜು ಶೆಟ್ಟಿ, ಮುರಳಿಧರ್, ಹಮಾಲರ ಸಂಘಟನೆಯ ರಾಜ್ಯ ಮುಖಂಡರಾದ ಎಸ್.ಪ್ರಸನ್ನಕುಮಾರ್, ಯಾರ್ಡ್‌ಗಳ ಗುಮಾಸ್ತರ ಸಂಘಟನೆಯ ಮುಖಂಡರಾದ ನಾಗರಾಜ್, ಪರಮೇಶ್ವರ್ ಇತ್ಯಾದಿ ಪ್ರಮುಖರು ಪಾಲ್ಗೊಂಡು ಯಶಸ್ವಿ ರೀತಿಯಲ್ಲಿ ಚರ್ಚೆಗಳನ್ನು ನಡೆಸಿ, ರಾಜ್ಯಾದ್ಯಂತ ಐಕ್ಯ ಪ್ರಬಲ ಚಳುವಳಿಯನ್ನು ಸಂಘಟಿಸಬೇಕೆಂದು ನಿರ್ಧರಿಸಲಾಯಿತು.

ಜೂನ್ 7, 2005 ರ ಮಂಗಳವಾರ ರಾಜ್ಯಾದ್ಯಂತ ಎಪಿಎಂಸಿಗಳ ಮಾರುಕಟ್ಟೆಗಳನ್ನು ಸಂಪೂರ್ಣ ಬಂದ್ ಮಾಡಿ ಅಂದು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಗಳ ಎದುರು ಬೃಹತ್ ಪ್ರತಿಭಟನಾ ಧರಣಿಗಳನ್ನು ಸಂಘಟಿಸಬೇಕೆಂದು ಸರ್ಕಾರ ಮಾತುಕತೆಗೆ ಕರೆದು ಸಮಸ್ಯೆಯನ್ನು ಪರಿಹಾರ ಮಾಡದಿದ್ದಲ್ಲಿ 'ಕರ್ನಾಟಕ ಬಂದ್' ಇತ್ಯಾದಿ ವ್ಯಾಪಕ ಹೋರಾಟಗಳಿಗೆ ಮುನ್ನಡೆಯಬೇಕೆಂದು ಅಭಿಪ್ರಾಯ ಪಡಲಾಯಿತು.

ಈ ಹೋರಾಟಗಳನ್ನು ವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಹೋಗಲು 15 ಜನ ಸಂಚಾಲಕರನ್ನು ಒಳಗೊಂಡ 'ಎಪಿಎಂಸಿ ಮಾದರಿ ಕಾನೂನು - 2005 ವಿರೋಧಿ ಹೋರಾಟ ಸಮಿತಿ' ರಚಿಸಲಾಗಿದೆ.

ಹೋರಾಟದ ಸಿದ್ಧತೆಗಳು ಭರದಿಂದ ನಡೆದಿವೆ. ಈ ಹೋರಾಟವನ್ನು ಪರಿಣಾಮಕಾರಿ ಹೋರಾಟವನ್ನಾಗಿ ಸಂಘಟಿಸುವುದರ ಮೂಲಕ ರೈತ ವಿರೋಧಿ, ಜನವಿರೋಧಿ ಜಾಗತೀಕರಣ ನೀತಿಗಳನ್ನು ಹಿಮ್ಮೆಟ್ಟಿಸಬೇಕಿದೆ.

18ನೇ ಮಹಾಧಿವೇಶನ

ಸಿಪಿಐ(ಎಂ)

ನಿರ್ಣಯಗಳು

ಬದಲಿ ಕೃಷಿ ನೀತಿಗಾಗಿ ಹೋರಾಟಕ್ಕೆ ಕರೆ

ಸಿಪಿಐ(ಎಂ)ನ 18ನೇ ಮಹಾಧಿವೇಶನ ಭಾರತದಲ್ಲಿ ಕಳೆದ ಐದುವರೆ ದಶಕಗಳಗಿಂತಲೂ ಹೆಚ್ಚಿನ ಅವಧಿಯಲ್ಲಿ ಭಾರತವನ್ನು ಬಾಧಿಸುತ್ತಿರುವ ಅಭೂತಪೂರ್ವ ಕಾರ್ಷಿಕ ಬಿಕ್ಕಟ್ಟು ಮುಂದುವರಿಯುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಜನರ ಬದುಕು ದುರ್ಭರವಾಗಿದೆ. ಸಾಲದ ಹೊರೆಯಲ್ಲಿ ಸೋತಿರುವ ಸಾವಿರಾರು ರೈತರು ಮತ್ತು ಕೃಷಿ ಕಾರ್ಮಿಕರು ಹೊಟ್ಟೆಗಿಲ್ಲದೆ ಸಾಯುತ್ತಿರುವುದು ಮತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಇದಕ್ಕೆ ಸಾಕ್ಷಿ. ಇದರ ಜತೆ ದೊಡ್ಡ ಪ್ರಮಾಣದಲ್ಲಿ ರೈತರು ಭೂಮಿ ಕಳೆದುಕೊಳ್ಳುತ್ತಿದ್ದಾರೆ. ಕಾರ್ಷಿಕ ಬಿಕ್ಕಟ್ಟು ಉಂಟು ಮಾಡಿದ ಆರ್ಥಿಕ ಮತ್ತು ಸಾಮಾಜಿಕ ಕಂಗಾಲು ದುಷ್ಟ ದರಿದ್ರರನ್ನು - ಅಂದರೆ ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರನ್ನು ಅತ್ಯಂತ ತೀವ್ರವಾಗಿ ತಟ್ಟಿದೆ. ಬಿಕ್ಕಟ್ಟು ಲಕ್ಷಾಂತರ ಕುಟುಂಬಗಳನ್ನು ಅಸ್ಥಿರಗೊಳಿಸಿದೆ. ಇನ್ನೂ ಲಕ್ಷಾಂತರ ಕುಟುಂಬ ಗಳನ್ನು ವಲಸೆ ಹೋಗುವಂತೆ ಮಾಡಿದೆ.

ಎಲ್ಲಾ ಆಹಾರಧಾನ್ಯಗಳ ಉತ್ಪಾದನೆಯು ಹೆಚ್ಚಳದ ದರ 80ರ ದಶಕದಲ್ಲಿ ಶೇಕಡಾ 2.85ರಿಂದ, 90ರ ದಶಕದಲ್ಲಿ ಶೇ.1.66ಕ್ಕೆ ಕುಸಿದಿದೆ. ಎಲ್ಲಾ ಬೆಳೆಗಳ ಉತ್ಪಾದನೆ ಶೇಕಡಾ 3.15 ರಿಂದ ಶೇಕಡಾ 1.73ಕ್ಕೆ ಕುಸಿದಿದೆ. 90 ದಶಕದಲ್ಲಿ ಜನಸಂಖ್ಯೆಯ ಹೆಚ್ಚಳದ ದರ ಶೇಕಡಾ 1.9ರಷ್ಟು ಇತ್ತು. 70ರ ದಶಕದ ನಂತರ ಮೊದಲ ಬಾರಿಗೆ ಆಹಾರಧಾನ್ಯ (ಮತ್ತು ಇತರ ಬೆಳೆ)ಗಳ ಉತ್ಪಾದನೆ ದರ, ಜನಸಂಖ್ಯಾ ಹೆಚ್ಚಳದ ದರಕ್ಕಿಂತ ಕಡಿಮೆಯಾಯಿತು.

90ರ ದಶಕದಲ್ಲಿ ಕೃಷಿಯಲ್ಲಿ ಸಾರ್ವಜನಿಕ ಹಂಚಿಕೆಯಲ್ಲಿ ತೀವ್ರ ಕುಸಿತ ಆಯಿತು. ಕೃಷಿಯಲ್ಲಿ ಒಟ್ಟು ಸಾರ್ವಜನಿಕ ಬಂಡವಾಳ ರಚನೆ ಸಹ, 80ರ ದಶಕಕ್ಕಿಂತ 90ರ ದಶಕದಲ್ಲಿ ಕುಸಿಯಿತು. 1993-94ರ ಬೆಲೆಗಳಲ್ಲಿ, 1980-81ರಲ್ಲಿ 7,300 ಕೋಟಿ ರೂ. ಇದ್ದ ಬಂಡವಾಳ, 90ರ ದಶಕದ ಕೊನೆ ಹೊತ್ತಿಗೆ 4,500 ಕೋಟಿ ರೂ.ಗೆ ಕುಸಿಯಿತು. ಈ ಬಂಡವಾಳ ರಚನೆ 79-80ರಲ್ಲಿ ಒಟ್ಟು ಕೃಷಿ ಉತ್ಪಾದನೆಯ ಶೇಕಡಾ 5 ರಷ್ಟಿದ್ದು 1990-91ರ ಹೊತ್ತಿಗೆ ಶೇಕಡಾ 2.2 ರಷ್ಟಿದೆ. 90ರ ದಶಕದ ಕೊನೆ ಹೊತ್ತಿಗೆ ಶೇಕಡಾ 1.5ಕ್ಕೆ ಕುಸಿಯಿತು. ಗ್ರಾಮೀಣ ಅಭಿವೃದ್ಧಿಗೆ ಮಾಡಿದ ಖರ್ಚು 7ನೇ ಯೋಜನೆ ಅವಧಿ (1985-90)ಯಲ್ಲಿ, ಒಟ್ಟು ಉತ್ಪದನೆಯ ಶೇಕಡಾ 14.5ರಷ್ಟಿತ್ತು. 1999-2000 ಅವಧಿಯ ಹೊತ್ತಿಗೆ ಅದು ಸೇಕಡಾ 6 ಕ್ಕಿಂತ ಕಡಿಮೆಯಾಗಿತ್ತು.

ಅಗತ್ಯಕ್ಕಿಂತ ಕಡಿಮೆ ಸಾರ್ವಜನಿಕ ಹೂಡಿಕೆ, ಸ್ಥಗಿತವಾಗಿರುವ ಬೆಳೆಗಳು, ಸಬ್ಸಿಡಿ ಕಡಿತದಿಂದಾಗಿ ವೆಚ್ಚ ಜಾಸ್ತಿಯಾಗಿರುವುದು ಮತ್ತು ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದು ಹಾಕಿರುವುದು ಹಾಗೂ ಬೇಕಾಬಿಟ್ಟಿ ಆಮದು ಉದಾರೀಕರಣಗಳಿಂದಾಗಿ ಬೆಳೆಗಳ ಮಾರುಕಟ್ಟೆ ಬೆಲೆ ಕುಸಿದಿರುವುದು - ಇವೆಲ್ಲಾ ಸೇರಿ ಬಡ ಮತ್ತು ಮಧ್ಯಮ ರೈತರ ಕೃಷಿ ಆದಾಯದ ಮೇಲೆ ತೀವ್ರ ಪ್ರಹಾರ ನಡೆಸಿವೆ. ಕೃಷಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಹೆಚ್ಚಿದ ಮಧ್ಯಪ್ರವೇಶ ಸಹ ಗಂಭೀರ ಪರಿಣಾಮ ಬೀರಿದೆ. ನೀರಾವರಿ ಮತ್ತು ವಿದ್ಯುತ್ ಖಾಸಗೀಕರಣದತ್ತ ಒಲವು ಹೆಚ್ಚಾಗಿದೆ.

90ರ ದಶಕದಲ್ಲಿ ಗ್ರಾಮೀಣ ಉದ್ಯೋಗಾವಕಾಶ ಬೆಳವಣಿಗೆ ಸದಾ ಪಾತಾಳ ಕಂಡಿದೆ. ಕೃಷಿ ಕಾರ್ಮಿಕರನ್ನು ಇದು ವಿಶೇಷವಾಗಿ ಕಾಡುತ್ತಿದೆ. ಇದು ಅತಿಯಾದ ಮಹಿಳೆಯ ಶೋಷಣೆಗೆ ಇನ್ನಷ್ಟು ಕಾರಣವಾಗಿದೆ. ಪುರುಷರು ಮಾಡುವ ಕೆಲಸಕ್ಕೇ ಕಡಿಮೆ ಕೂಲಿ ಪಡೆಯಬೇಕಾಗಿದೆ. ಕೃಷಿಯಲ್ಲಿ ಯಾಂತ್ರೀಕರಣದಿಂದ ಸಹ ಕೃಷಿ ಕಾರ್ಮಿಕರಿಗೆ ಉದ್ಯೋಗಾವಕಾಶ ಕಡಿಮೆಯಾಗಿದೆ. ಕೂಲಿದರ ಸಹ ಸ್ಥಗಿತವಾಗಿದ್ದು, ಗ್ರಾಮೀಣ ಕಾರ್ಮಿಕರ ಕೂಲಿ ಆದಾಯ ಕಡಿಮೆಯಾಗಿದೆ. ಇವೆಲ್ಲದರಿಂದ ವಲಸೆ ಹೋಗುವುದು ತೀವ್ರವಾಗಿ ಹೆಚ್ಚಿದೆ.

ಸರ್ಕಾರದ ನೀತಿ ಬರ, ನೆರೆ ಮತ್ತು ಇತರ ಪ್ರಾಕೃತಿಕ ವಿಕೋಪಗಳಿಂದ ಜನರ ಮೇಲೆ ಆಗುವ ಭಾರಿ ಪರಿಣಾಮಗಳನ್ನು ತಡೆಯಲು ವಿಫಲವಾಗಿದೆ.

ಭೂಸುಧಾರಣೆಗಳು ಮೂಲೆಗುಂಪಾಗಿವೆ. ಮಾತ್ರವಲ್ಲ, ಹಲವು ರಾಜ್ಯಗಳು ಸುಧಾರಣೆಗೆ ವಿರುದ್ಧವಾದ ಕಾನೂನುಗಳನ್ನು ಜಾರಿಗೆ ತಂದಿವೆ. ಈ ಕಾನೂನುಗಳು ಮಿತಿಯನ್ನು ಹೆಚ್ಚಿಸಿವೆ, ಇಲ್ಲವೆ ತೆಗೆದುಹಾಕಿವೆ. ಗೇಣಿದಾರರ ಹಕ್ಕುಗಳನ್ನು ಮೊಟಕುಗೊಳಿಸಿವೆ. ಭೂ ಒಡೆತನವನ್ನು ದೊಡ್ಡ ಕಂಪನಿಗಳು ಹೊಂದುವಂತೆ ಮಾಡಿದ್ದು ಭೂಮಿಯಿಂದ ಕೃಷಿಕರನ್ನು ದೂರ ಮಾಡುವ ಹುನ್ನಾರ ಹೊಂದಿದೆ. ಪಾರಂಪರಿಕ ಅರಣ್ಯ ಭೂಮಿಯಿಂದ ಅಲ್ಲಿ ವಾಸಿಸುತ್ತಿದ್ದ ಆದಿವಾಸಿಗಳನ್ನು ಹೊರದಬ್ಬಲಾಗಿದೆ.

ಪುಟ 10 ಕ್ಕೆ



ಜಗತ್ತಿನಲ್ಲಿ ಭಯೋತ್ಪಾದನೆಯನ್ನು ಹೋಗಲಾಡಿಸಲು ಹೋರಾಡುವುದಾಗಿ ಬಡಾಯಿ ಕೊಚ್ಚುವ ಅಮೆರಿಕಾ ತಾನೇ ನಿಜವಾದ ಭಯೋತ್ಪಾದಕನಂತೆ ವರ್ತಿಸುತ್ತಿದೆ. ಮೂರನೇ ಜಗತ್ತಿನ ದೇಶಗಳ ಮೇಲೆ, ಆಳುವ ಸರ್ಕಾರಗಳ ಮೇಲೆ ನಡೆಸಿದ ಧಾಳಿ ಅಪಾರ. ಇಂತಹ ಧಾಳಿಗಳ ವಿರುದ್ಧ ಪ್ರತಿರೋಧ ಹೆಚ್ಚುತ್ತಿದೆ, ಹೆಚ್ಚಬೇಕು.

ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಜಾಗತಿಕ ಭಯೋತ್ಪಾದನೆ

"ಪ್ರಪಂಚದಲ್ಲಿ ನಡೆಯುತ್ತಿರುವ ಕೊಲೆ, ಸುಲಿಗೆ, ದಗಾ, ವಂಚನೆ, ಮಿಲಿಟರಿ ಅಧಿಪತ್ಯ, ಸಮೂಹ ನಾಶ- ಈ ಎಲ್ಲ ಅಂಕಿ ಅಂಶಗಳನ್ನು ಅಮೇರಿಕಾದ ದೈನಂದಿನ ಚಟುವಟಿಕೆಗಳನ್ನು ಬದಿಗಿಟ್ಟು ನೀವು ನೋಡಿದಾಗ, ಅನಾಗರೀಕ ಮತ್ತು ನಾಚಿಕೆಗೆಟ್ಟ ಕ್ರೂರತೆಗೆ ಅಮೇರಿಕಾಗೆ ಸ್ಪರ್ಧೆಯೊಡ್ಡುವವರು ಯಾರೂ ಇಲ್ಲವೆಂದು ತಿಳಿಯುತ್ತದೆ"

- ಫ್ರೆಡರಿಕ್ ಡಗ್ಲಸ್

"ಪ್ರಪಂಚದಾದ್ಯಂತ ಪ್ರತಿದಿನ ಸರ್ಕಾರ ಅಥವಾ ಶಸ್ತ್ರಸಜ್ಜಿತ ರಾಜಕೀಯ ಗುಂಪುಗಳಿಂದ ಗಂಡಸು, ಹೆಂಗಸು ಅಥವಾ ಮಗು ಸ್ಥಳಾಂತರಗೊಂಡು ಹಿಂಸೆಗೀಡಾಗಿ, ಕೊಲ್ಲಲ್ಪಟ್ಟು ಅಥವಾ ಕಾಣೆಯಾಗುತ್ತವೆ. ಬಹುತೇಕ ವೇಳೆ ಇದಕ್ಕೆ ಅಮೇರಿಕಾವೇ ಕಾರಣ".

- ಅಮ್ನೆಸ್ಟಿ ಇಂಟರ್‌ನ್ಯಾಷನಲ್, 1996

ಫ್ರೆಡರಿಕ್ ಡಗ್ಲಸ್ ಮತ್ತು ಹಲವು ವೇಳೆ ಅಮೇರಿಕಾ ಪರ ವಹಿಸುವ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ವ್ಯಕ್ತಪಡಿಸಿರುವ ಮೇಲಿನ ಮಾತುಗಳಲ್ಲಿ ಅಮೇರಿಕಾದ ಸಂಸ್ಕೃತಿ ಸ್ಪುಟವಾಗಿ ಕಣ್ಣಿಗೆ ರಾಚುತ್ತದೆ. ಬರೇ ಕಳೆದ ಆರು ದಶಕಗಳ ಅವಲೋಕನ ಮಾಡಿದರೆ ಸಾಕು, ಸ್ಥಳೀಯ ಅಮೇರಿಕನ್ ಮೂಲನಿವಾಸಿಗಳ ನರಮೇಧದ ದಾಖಲೆ ಯಿರಬಹುದು. ಶತಮಾನದುದ್ದಕ್ಕೂ ಕಪ್ಪು ಆಫ್ರಿಕನ್ನರನ್ನು ಹಿಂಸಾತ್ಮಕವಾಗಿ ಶೋಷಿಸಿರುವುದು, ಪೋರ್ಟರಿಕಾ, ಹನೊಯಿ, ಸಮಾವೋ, ಕ್ಯೂಬಾಗಳನ್ನು ವಸಾಹತು ಮಾಡಿಕೊಳ್ಳಲು ದಬ್ಬಾಳಿಕೆ, ಫಿಲಿಫೈನ್ಸ್‌ನ್ನು ನುಂಗಿರುವುದು, ಹೈಟಿ, ನಿಕರಾಗುವಾ ಮತ್ತು ಡೊಮಿನಿಕನ್ ರಿಪಬ್ಲಿಕ್‌ಗಳ ಮೇಲೆ ಸರಣಿಯಾಗಿ ಮಿಲಿಟರಿ ಮಧ್ಯಸ್ಥಿಕೆ, ಮೆಕ್ಸಿಕೋದ ಅರ್ಧಭಾಗವನ್ನು ದಾಳಿ ನಡೆಸಿ ಬಲವಂತವಾಗಿ ಬಗಲಿಗೆ ಹಾಕಿಕೊಂಡಿರುವುದು - ಎಲ್ಲ ಬರೇ 1890 ಮತ್ತು 1912ರ ನಡುವೆ ನಡೆದ ಘಟನೆಗಳು.

ಈಗ ಬರೇ ಕಳೆದ ಆರು ದಶಕಗಳ ದಾಖಲೆಗಳ ಸಾರಾಂಶವನ್ನಷ್ಟೇ ನೋಡೋಣ.

ಅಮೆರಿಕಾವು 150 ಕ್ಕೂ ಹೆಚ್ಚು ರಾಷ್ಟ್ರಗಳ ಮೇಲೆ ದಾಳಿ ಮಾಡಿದೆ ಹಾಗೂ ಕನಿಷ್ಟ ಪ್ರಪಂಚದ 100 ವಿವಿಧ ಭಾಗಗಳಲ್ಲಿ ಮಿಲಿಟರಿ ನೆಲೆ ಸ್ಥಾಪಿಸಿದೆ. ಯುರೋಪ್‌ವೊಂದರಲ್ಲೇ 7 ಅಣ್ವಸ್ತ್ರ ಸಂಗ್ರಹಣಾಗಾರಗಳನ್ನು ಹೊಂದಿದೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ಜನಪ್ರಿಯ ನಾಯಕರನ್ನೂ ಒಳಗೊಂಡಂತೆ ಕನಿಷ್ಟ 70 ವಿದೇಶಿ ಸರ್ಕಾರಗಳನ್ನು ಉರುಳಿಸಿದೆ. ಅಸಹಿಷ್ಣುವಾದ ಆಳ್ವಿಕೆಗಳ ವಿರುದ್ಧದ ಕನಿಷ್ಟ 30 ಜನಪ್ರಿಯ-ರಾಷ್ಟ್ರೀಯ ಚಳುವಳಿಗಳನ್ನು ನಿರ್ನಾಮ ಮಾಡಿದೆ. ಇತ್ತೀಚಿಗಿನ ರಷ್ಯಾ ಸೇರಿದಂತೆ ಕನಿಷ್ಟ 30 ವಿದೇಶಿ ರಾಷ್ಟ್ರಗಳ ಚುನಾವಣೆಗಳನ್ನು ವಿರೂಪಗೊಳಿಸಿದೆ.

ಮಾನವ ಹಕ್ಕುಗಳ, ವಿಶ್ವ ಮತ್ತು ಪ್ರಾದೇಶಿಕ ಶಾಂತಿಯ, ಅಣ್ವಸ್ತ್ರ ನಿಷೇಧದ, ಆರ್ಥಿಕ ಮತ್ತು ವರ್ಣಭೇದ ನ್ಯಾಯದ, ಮೂಲನಿವಾಸಿ ಮತ್ತು ಪರಿಸರ ವಿಷಯಗಳಿಗೆ ಸಂಬಂಧಿಸಿದ 160 ಪ್ರಗತಿಪರ ವಿಶ್ವಸಂಸ್ಥೆಯ ನಿರ್ಣಯಗಳನ್ನು ವಿರೋಧಿಸಿರುವ ಕೀರ್ತಿ ಅಮೇರಿಕಾಗೆ ಸಲ್ಲುತ್ತದೆ. ನೆಲಬಾಂಬುಗಳನ್ನು ನಿಷೇಧಿಸುವ ಅಂತರರಾಷ್ಟ್ರೀಯ ಒಪ್ಪಂದವನ್ನಾಗಲಿ ಅಥವಾ ಅಂತರರಾಷ್ಟ್ರೀಯ ಅಪರಾಧಿ ನ್ಯಾಯಾಲಯಕ್ಕಾಗಲಿ ಸೊಪ್ಪು ಹಾಕುವುದಿಲ್ಲ. 40 ಕ್ಕೂ ಹೆಚ್ಚು ವಿದೇಶಿ ನಾಯಕರನ್ನು ಹತ್ಯೆಗೈಯ್ಯಲು ಹಲವಾರು ಬಾರಿ ಪ್ರಯತ್ನಿಸಿದ್ದು (ಫಿಡೆಲ್ ಕ್ಯಾಸ್ಟ್ರೊ ಒಬ್ಬರ ಮೇಲೆ 26 ಬಾರಿ) ಕೆಲವು ಅಮೇರಿಕಾದ ನಾಯಕರು (ರೇಗನ್, ಜಾರ್ಜ್ ಬುಶ್ ಸೀನಿಯರ್, ಕಾರ್ಟರ್ ಮತ್ತು ಫೋರ್ಡ್) ಅಧಿಕೃತವಾಗಿ "ಕೊಲ್ಲಲು ಪರವಾನಗಿ" ಮಂಜೂರು ಮಾಡುತ್ತಾರೆ.

ಲ್ಯಾಟಿನ್ ಮತ್ತು ದಕ್ಷಿಣ ಅಮೇರಿಕಾದ ಸಾವಿರಾರು ಪಾತಕಿಗಳಿಗೆ ಮತ್ತು ಹಿಂಸೆಕೋರರಿಗೆ ತನ್ನ ಕುಪ್ರಸಿದ್ಧ "ಅಮೇರಿಕಾ ಶಾಲೆಗಳಲ್ಲಿ" ತರಬೇತಿ ನೀಡಿದ ನಂತರ ತಮ್ಮ ಮೂಲ ನೆಲಕ್ಕೆ ಮರಳುವ ಪಾತಕರು ರಾಜಕೀಯ ಕೊಲೆಗಳು, ಹಿಂಸಾಕೃತ್ಯ, ಕಾಣೆ ಮಾಡುವುದು, ಆತ್ಮಹತ್ಯಾದಳ ಮತ್ತು ಹಲವು ಪ್ಯಾರಾ ಮಿಲಿಟರಿ ಪ್ರಕ್ರಿಯೆಗಳನ್ನು ನಡೆಸುತ್ತಾರೆ. ಸ್ಥಳೀಯರು ಈ 'ಅಮೇರಿಕಾ ಶಾಲೆ' ಯನ್ನು 'ದಂಗೆ ಶಾಲೆ' ಎಂದೂ ಕರೆಯುತ್ತಾರೆ.

ಕೋರಿಯಾದಲ್ಲಿ 20 ಲಕ್ಷ, ವಿಯೆಟ್ನಾಂನಲ್ಲಿ 30 ಲಕ್ಷ ಆಫ್ಘಾನಿಸ್ಥಾನದಲ್ಲಿ 5 ಲಕ್ಷ, ಇಂಡೋನೇಷ್ಯಾದಲ್ಲಿ 10 ಲಕ್ಷ, ಪೂರ್ವ ತೈಮೊರ್‌ನಲ್ಲಿ 2.5 ಲಕ್ಷ, ನಿಕರಾಗುವಾದಲ್ಲಿ 1.0 ಲಕ್ಷ ಮತ್ತು ಚಿಲಿಯಲ್ಲಿ 20,000 ಜನರನ್ನು ಅಮೇರಿಕಾ ಆಹುತಿ ತೆಗೆದುಕೊಂಡಿದೆ. ಆಫ್ಘಾನಿಸ್ತಾನದಲ್ಲಿ 2000 ದಲ್ಲಿ ಮಿಲಿಟರಿ ಕಾರ್ಯ ಆರಂಭವಾದಾಗಿನಿಂದ ಒಟ್ಟಾರೆ ನಾಗರೀಕರ ಸಾವು 30,000 ಮೀರಿದೆ. ನಿಕರಾಗುವಾದಲ್ಲಿ ಅಮೇರಿಕಾ ಸಾದರಪಡಿಸಿದ ಕೊಲೆಗಡುಕ ಶಕ್ತಿಗಳು 30,000 ಜನರನ್ನು ಕೊಂದಿವೆ, 9000 ಮಕ್ಕಳನ್ನು ಅನಾಥರಾಗಿಸಿವೆ, ಮತ್ತು 300 ಕೋಟಿ ಬೆಲೆಬಾಳುವ ಮನೆಗಳು, ಶಾಲೆಗಳು, ಆರೋಗ್ಯ ಕೇಂದ್ರಗಳು, ಬೆಳೆ ಮತ್ತು ಇತರೆ ಕೇಂದ್ರಗಳನ್ನು ನಾಶಗೊಳಿಸಿದೆ. 2 ಲಕ್ಷ ಪೂರ್ವ ತೈಮೋರ್ ಜನರನ್ನು ಅಮೇರಿಕಾ ಹಣವೊದಗಿಸಿದ ಇಂಡೋನೇಷ್ಯಾ ಮಿಲಿಟರಿ ಮಾರಣಹೋಮ ಮಾಡಿತು. 1991 ರ ಗಲ್ಫ್ ಯುದ್ಧದಿಂದೀಚೆಗೆ ಯುರೇನಿಯಂ ವಿಕಿರಣದಿಂದ, ಕಲುಷಿತ ಭೂಮಿ ಮತ್ತು ನೈರ್ಮಲ್ಯ ವ್ಯವಸ್ಥೆಯಿಂದ 2 ಲಕ್ಷ ಇರಾಕಿ ಜನರು ಮರಣವನ್ನಪ್ಪಿದ್ದಾರೆ. 2000 ನೇ ವರ್ಷದ ಹೊತ್ತಿಗೆ 11.2 ಲಕ್ಷ (8 ಲಕ್ಷ ಮಕ್ಕಳು) ಜನ ಸತ್ತಿದ್ದಾರೆ. 90 ರ ದಶಕದಲ್ಲಿ 35,000 ಜನರನ್ನು ಕೊಲಂಬಿಯಾದಲ್ಲಿ ಹತ್ಯೆಗೈಯ್ಯಲಾಗಿದ್ದು, 1,500 ಯೂನಿಯನ್ ಸದಸ್ಯರನ್ನು ಸಿಐಎ-ಬೆಂಬಲಿತ ಹತ್ಯಾದಳಗಳು ಕೊಲೆಗೈದಿವೆ.

80 ಲಕ್ಷ ಬಾಂಬ್‌ಗಳು, 180 ಲಕ್ಷ ಗ್ಯಾಲನ್ ರಾಸಾಯನಿಕ ವಸ್ತುಗಳನ್ನು ವಿಯೆಟ್ನಾಂ ಮೇಲೆ ಸುರಿಮಳೆಗೈದಿದ್ದರಿಂದ ಶೇ.40 ರಷ್ಟು ತೋಟಗಾರಿಕೆ ಮತ್ತು ಆರ್ಚರ್ಡ್‌ಗಳು, ಶೇ.40 ರಷ್ಟು ಅರಣ್ಯ ಭೂಮಿ, ಮೀನು ಮತ್ತು ಸಮುದ್ರ ಸಂಪನ್ಮೂಲಗಳು ನಾಶಗೊಂಡಿವೆ. ಅಮೇರಿಕಾದ ಮಿಲಿಟರಿ ನೀಡಿದ ರಾಸಾಯನಿಕ ವಸ್ತುಗಳು ಕೊಲಂಬಿಯಾದ ಪರಿಸರ ಮತ್ತು ಜನರ ಆರೋಗ್ಯವನ್ನು ಹಾಳುಗೆಡಿಸಿವೆ. ಕ್ಯೂಬಾದ ಸಕ್ಕರೆ ಬೆಳೆಯನ್ನು ಹಾಳುಮಾಡುವಂತಹ



ವಾತಾವರಣ- ಬದಲಾವಣಾ ತಂತ್ರಜ್ಞಾನವನ್ನು ಸಿಐಎ ಉಪಯೋಗಿಸಿದೆ. ಕ್ಯೂಬಾದಲ್ಲಿ ಆಫ್ರಿಕನ್ ಹಂದಿಜ್ವರ ಬರುವಂತಹ ವೈರಸ್ ಹರಡಿ 5 ಲಕ್ಷ ಹಂದಿಗಳನ್ನು ಕೊಲ್ಲುವಂತೆ ಮಾಡಿತು. 30,000 ಕ್ಯೂಬನ್ನರನ್ನು, 57 ಯುವಕರು ಮತ್ತು 100 ಮಕ್ಕಳನ್ನು ಸಾವಿಗೀಡು ಮಾಡಿದ ಸಾಂಕ್ರಾಮಿಕ ಡೆಂಗೆ ಜ್ವರ ಹರಡಲು ಸಿಐಎ ಕಾರಣವೆಂಬ ಆರೋಪವೂ ಇದೆ. ಅಮೇರಿಕಾ ಸರ್ಕಾರವು ಹಿಂಸಾ-ಉಪಕರಣಗಳನ್ನು ತಯಾರಿಸಲು ಮತ್ತು ರಫ್ತು ಮಾಡಲು ನಿರಂತರವಾಗಿ ಪರವಾನಗಿ ನೀಡುತ್ತದೆ.

ಅಮೇರಿಕಾ ಸರ್ಕಾರ ಮತ್ತು ಕೈಗಾರಿಕೋದ್ಯಮಿಗಳು ಎರಡನೇ ವಿಶ್ವ ಮಹಾಯುದ್ಧದ ವೇಳೆ ಬಹಿರಂಗವಾಗಿ ನಾಜಿಗಳ ಜೊತೆ ಒಳಸಂಚು ನಡೆಸಿದರು. ಯುದ್ಧಾನಂತರ ಕೈಗಾರಿಕೆ ಮತ್ತು ರಕ್ಷಣಾ ಕ್ಷೇತ್ರಗಳ ಮುಖ್ಯ ಹುದ್ದೆಗಳಿಗೆ ನಾಜಿಗಳನ್ನು ಕೂರಿಸಲಾಯಿತು.

65 ವರ್ಷದ ಯುದ್ಧ ವಿರೋಧಿ ಪ್ರದರ್ಶನಕಾರರ ಮಾತುಗಳಲ್ಲೇ ಹೇಳಬಹುದಾದರೆ (ದಿ ಬೋಸ್ಟನ್ ಗ್ಲೋಬ್, ಸೆಪ್ಟೆಂಬರ್, 2003) "ಕೆಂಬ್ರಿಜ್‌ನಲ್ಲಿ ಪೊಲೀಸ್ ರಾಜ್ಯ ತರಲೋಸುಗ ನನ್ನ ಮಗ ಇರಾಕ್‌ನಲ್ಲಿ ಯುದ್ಧ ಮಾಡುತ್ತಿದ್ದಾನೆ.

ವಾಕ್-ಸ್ವಾತಂತ್ರ್ಯ, ಧರ್ಮ, ಐಕ್ಯತೆಗಳ ಸುತ್ತ ಈ ರಾಷ್ಟ್ರವನ್ನು ಕಟ್ಟಲಾಗಿದೆ. ಆದಾಗ್ಯೂ ಈ ಹಕ್ಕನ್ನು ಯಾರಾದರೂ ಉಪಯೋಗಿಸಲೆತ್ನಿಸಿದರೆ ಅವರನ್ನು ಕಮ್ಯೂನಿಸ್ಟ್ ಎಂದೋ ಅಥವಾ ಇನ್ನೇನೋ ಹೆಸರಿನಲ್ಲಿ 'ಬ್ರ್ಯಾಂಡ್' ಮಾಡಲಾಗುತ್ತದೆ.

ಪ್ರಜಾಪ್ರಭುತ್ವದ ಹರಿಕಾರ ತಾವೆಂದು ಬಡಾಯಿ ಕೊಚ್ಚಿಕೊಳ್ಳುವ ಅಮೇರಿಕಾ ಪ್ರತಿಯೊಬ್ಬ ನಾಗರೀಕರ ಬಗ್ಗೆ ಅಂದಾಜು 9000 ರಹಸ್ಯ ಮಾಹಿತಿಯನ್ನು ನಿರ್ವಹಿಸುತ್ತದೆ. ಖಾಸಗಿ ಕಂಪನಿಗಳು ತಮ್ಮ ಕಾರ್ಮಿಕರ ಮೇಲೆ ಬೇಹುಗಾರಿಕೆ ನಡೆಸುತ್ತಾರೆ. ಹಲವು ಅಮೇರಿಕಾ ನಗರಗಳ ಬೀದಿಗಳಲ್ಲಿ ಸಾರ್ವಜನಿಕರ ಚಲನವಲನ ಅರಿಯಲು ವಿಡಿಯೋ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಅಮೇರಿಕಾದ ನ್ಯಾಯಾಲಯಗಳು 'ಕೂಲಿಗಾಗಿ ಹೋರಾಡುವ' ಕಾರ್ಮಿಕರನ್ನು ಮತ್ತು ಕಾರ್ಮಿಕ ಸಂಘಟನೆಗಳನ್ನು 'ಆಸ್ತಿಯ ಮತ್ತು ಸಂವಿಧಾನದ ವಿರುದ್ಧ ಪಿತೂರಿ' ನಡೆಸುತ್ತಾರೆಂದು ತೀರ್ಪು ನೀಡಿದೆ. 1940 ರಲ್ಲಿ ಅಮೇರಿಕಾದ ಕಾಂಗ್ರೆಸ್ ಅಂಗೀಕರಿಸಿರುವ ಕುಖ್ಯಾತ 'ಸ್ಮಿತ್ ಕಾಯಿದೆ'ಯು ಕ್ರಾಂತಿಕಾರಿ ಸಿದ್ಧಾಂತದ ಪ್ರತಿಪಾದನೆಯನ್ನು ಶಿಕ್ಷಿಸಲರ್ಹವಾದ ಅಪರಾಧವೆಂದು ತಿಳಿಸುತ್ತದೆ. 1984 ರಲ್ಲಿ ಅಮೇರಿಕಾದ ಕಾನೂನು ಏಜೆಂಟರು ವಿಚಾರವಾದಿ ಕಪ್ಪುಗುಂಪಿನ ಜನರನ್ನು ಬೆದರಿಸಲು ಫಿಲಿಡೆಲ್ಫಿಯಾ ನಗರದ ಪೂರ್ವ ಭಾಗದ ವಸತಿಗೃಹಗಳ ಮೇಲೆ ಮಿಲಿಟರಿ ಬಾಂಬನ್ನು ಹಾಕಿದ್ದರೆಂದರೆ ಓದುಗರು ವಿಸ್ಮಿತರಾಗಬಹುದು.

ಕೈಗಾರಿಕೋದ್ಯಮಿ - ರಾಜಕಾರಣಿಗಳ ದುಷ್ಟಕೂಟ ತನ್ನ ವರ್ಗದ ಹಿತಾಸಕ್ತಿಗಾಗಿ ದುರ್ಬಲ ರಾಷ್ಟ್ರಗಳನ್ನು ನಿರ್ನಾಮ ಮಾಡುತ್ತಿರುವುದಲ್ಲದೆ ತನ್ನ ನೆಲದಲ್ಲಿಯ ನಾಗರೀಕರನ್ನೇ ಯಕಶ್ಚಿತ್ ಹುಳುಗಳಂತೆ ಪರಿಗಣಿಸುತ್ತಿರುವುದು, ಅಗತ್ಯ ಬಿದ್ದರೆ ಹೊಸಕಿ ಹಾಕಿಬಿಡುವುದು- ಇವೆಲ್ಲವೂ ಅಮೇರಿಕಾದ ದುರುಳ ಮುಖವನ್ನು ತೋರುತ್ತವೆ.

ಇಂತಹ ಅಮೆರಿಕಾದ ವಿರುದ್ಧ ಜನರನ್ನು ಅಣಿನೆರೆಸುವುದು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪ್ರಮುಖ ಭಾಗ. ಆ ಕರ್ತವ್ಯದಿಂದ ನಾವು ವಿಮುಖರಾಗಬಾರದು.

(ಅಂಕಿ ಅಂಶಗಳನ್ನು : ಬ್ಲಾಕ್ ಕರ್ಟ್ಸ್ ಮತ್ತು ರೆಡ್ಸ್, ಮತ್ತು ಡೆಮೊಕ್ರಾಸಿ ಫಾರ್ ದಿ ಫ್ಯೂ - ಲೇಖಕರು ಎಂ.ಪೆಟೆಂಟಿ, 2002: ರೋಗ್ ಸ್ಟೇಟ್ ಲೇಖಕರು: ಡಬ್ಲು ಬ್ಲಮ್, 2000 : ರಾಮ್‌ಸೆ ಕ್ಲಾರ್ಕ್ ಮತ್ತು ಇತರರು : ಚಾಲೆಂಜ್ ಟು ಗೆನೊಸೈಡ್ : 2000: ಜೆ.ಗೆರಾಲ್ಡೊ, ಕೊಲಂಬಿಯಾ: ದಿ ಗೆನೊಸೈಡಲ್ ಡೆಮೊಕ್ರಸಿ, 1996)

ಡಿ.ರಾಯ್ ಮತ್ತು ಜಯ

ಪೊಲೀಸ್ ಬಾತ್ಮಿದಾರ ಎಂಬ ಕಾರಣಕ್ಕಾಗಿ ನಕ್ಸಲೀಯರು ಮೆಣಸಿನಹಾಡ್ಯದ ಶೇಷಪ್ಪನನ್ನು ಕೊಂದುಹಾಕಿದ್ದಾರೆ. ಇದರೊಂದಿಗೆ ಪಶ್ಚಿಮ ಘಟ್ಟದ ಗಿರಿಜನರಲ್ಲಿ ಅಳಿದುಳಿದಿದ್ದ ಅನುಕಂಪವೂ ಕೊಲ್ಲಲ್ಪಟ್ಟಿದೆ. ನಕ್ಸಲೀಯರಿಗೂ ವೀರಪ್ಪನ್‌ಗೂ ಏನೂ ವ್ಯತ್ಯಾಸ ಎಂದು ಜನ ಪ್ರಶ್ನಿಸುವಂತಾಗಿದೆ



ವೀರಪ್ಪನ್ ನೆನಪಿಸಿದ ಶೇಷಪ್ಪ ಹತ್ಯೆ!

ನಿತ್ಯಾನಂದಸ್ವಾಮಿ

ನರಹಂತಕ ವೀರಪ್ಪನ್ ಪೊಲೀಸ್ ಮಾಹಿತಿದಾರರನ್ನು ಕ್ಷಮಿಸುತ್ತಿರಲಿಲ್ಲ. ತನ್ನ ಹಾಗೂ ತನ್ನ ಸಹಚರರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುತ್ತಿರುವವರನ್ನು ಆತ ಗುರಿಯಿಟ್ಟು ಕೊಲ್ಲುತ್ತಿದ್ದ. ಅನೇಕ ಸಲ ಅಮಾಯಕರೂ ಆತನ ಸೇಡಿನ ಕ್ರಮಕ್ಕೆ ಬಲಿಯಾಗುತ್ತಿದ್ದರು. ಪೊಲೀಸರನ್ನು ಮತ್ತು ಪೊಲೀಸ್ ಮಾಹಿತಿದಾರರನ್ನು ಅಮಾನುಷವಾಗಿ ಕೊಲೆಗೈಯುತ್ತಾ ಬಂದ ಈ ಕಾಡುಗಳ್ಳನಿಗೆ "ನರಹಂತಕ" ಎಂಬ ಬಿರುದು ಪ್ರಾಪ್ತವಾಗಿತ್ತು. ಈತನ ದಾಳಿಯಿಂದ ತಪ್ಪಿಸಿಕೊಳ್ಳಲು ಕಾಡಿನ ಅಂಚಿನ ಗ್ರಾಮಗಳ ಜನ ಪೊಲೀಸರ ಚಲವಲನಗಳ ಕುರಿತು ವೀರಪ್ಪನ್ ಗೆ ಮಾಹಿತಿ ನೀಡುತ್ತಿದ್ದರು. ಹೀಗೆ ವೀರಪ್ಪನ್ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು ಮತ್ತು ಪೊಲೀಸರ ಬಗ್ಗೆ ವೀರಪ್ಪನ್ ಗೆ ಮಾಹಿತಿ ನೀಡುವುದು ನಿರಂತರವಾಗಿ ನಡೆಯುತಿತ್ತು. ವೀರಪ್ಪನ್ ಸಾವಿನೊಂದಿಗೆ ಈ ಜನ ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಿದ್ದರು. ಆದರೆ ಮೇ 17ರ ರಾತ್ರಿ ಮೆಣಸಿನಹಾಡ್ಯದಲ್ಲಿ ಶೇಷಪ್ಪ ಅಲಿಯಾಸ್ ಶೇಷೆಗೌಡ ಎಂಬುವವನನ್ನು 'ಪೊಲೀಸ್ ಮಾಹಿತಿದಾರ ' ಎಂಬ ಕಾರಣಕ್ಕಾಗಿ ನಕ್ಸಲೀಯರು ಬರ್ಬರವಾಗಿ ಕೊಂದು ಹಾಕಿದ್ದು "ವೀರಪ್ಪನ್ ಮತ್ತೆ ಅವತರಿಸಿ ಬಿಟ್ಟಿದ್ದಾನೆ" ಎಂದು ಜನ ಹೌಹಾರುವಂತಾಗಿದೆ.

ಯಾರು ಈ ಶೇಷಪ್ಪ?


ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಮೆಣಸಿನ ಹಾಡ್ಯ ಗ್ರಾಮದ ಹೋರಿಗಂಡಿಯ ಶೇಷಪ್ಪ ಒಬ್ಬ ಸಾಮಾನ್ಯ ಕೃಷಿಕ. ರಾಜ್ಯ ಪ್ರಶಸ್ತಿಗೆ ಪಾತ್ರವಾಗಿದ್ದ ಕರಿಮನೆ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕನಾಗಿ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದ. ಗಿರಿಜನರ ಅಭಿವೃದ್ಧಿಗಾಗಿ ರಚಿಸಲಗಿದ್ದ ಲ್ಯಾಂಪ್ ಸಮಿತಿಯ ಅಧ್ಯಕ್ಷ. ಗೌರಿಕಟ್ಟೆ ಕಾಲೋನಿಯಲ್ಲಿ ಒಂದು ಕಿರಾಣಿ ಅಂಗಡಿ ನಡೆಸುತ್ತಿದ್ದ. ಸ್ಥಳೀಯ ಕಾಂಗ್ರೆಸ್ ಮುಖಂಡನೂ ಆಗಿದ್ದ.

ಸಮೀಪದ ಚೌಡೇಶ್ವರಿ ದೇವಸ್ಥಾನದಲ್ಲಿ ಮರುದಿನ ನಡೆಯಲಿದ್ದ ಪೂಜಾ ಕಾರ್ಯದ ಸಿದ್ಧತೆಗಾಗಿ ತೆರಳಿದ್ದ ಶೇಷಪ್ಪ ಆಗಷ್ಟೇ ಮನೆಗೆ ಮರಳಿ ಬಂದು ಮಕ್ಕಳೊಂದಿಗೆ ಊಟಕ್ಕೆ ಕುಳಿತ್ತಿದ್ದ. 9 ಗಂಟೆ ರಾತ್ರಿ ಆಗಿತ್ತು. ಒಮ್ಮಿದೊಮ್ಮೆ 10-12 ಜನ ಶಸ್ತ್ರಸಜ್ಜಿತ ನಕ್ಸಲೀಯರ ಗುಂಪೊಂದು ಮನೆಯ ಬಾಗಿಲನ್ನು ಮುರಿದು, ಕಿಡಕಿಯ ಗಾಜುಗಳನ್ನು ಪುಡಿಮಾಡಿ ಒಳನುಗ್ಗಿದೆ. ಊಟ ಮಾಡುತ್ತಿದ್ದ ಶೇಷಪ್ಪನನ್ನು ದರದರನೆ ಹೊರಗೆಳೆದುಕೊಂಡು ಹೋಗಿ, ಕೈ ಕಾಲುಗಳನ್ನು ಕಟ್ಟಿಹಾಕಿ, ಮನಬಂದಂತೆ ಥಳಿಸಿದ್ದಾರೆ. ಬಿಡಿಸಲು ಹೋದ ಮಗ ಪ್ರವೀಣ್ ಕುಮಾರ್, ಮಗಳು ಗೋದಾವರಿ ಮತ್ತು ಇತರರನ್ನು ಬಂದೂಕ ತೋರಿಸಿ ಹಿಂದಕ್ಕೆ ಅಟ್ಟಿದ್ದಾರೆ. ನಂತರ ಬಂದೂಕಿನಿಂದ ಶೇಷಪ್ಪನ ತಲೆಯ ಬಲಭಾಗಕ್ಕೆ ಗುಂಡಿಕ್ಕಿ ಹತ್ಯೆಮಾಡಿ, ಕೇಕೆ ಹಾಕುತ್ತಾ ಕಾಡಿನಲ್ಲಿ ಪರಾರಿಯಾಗಿದ್ದಾರೆ. ಹೋಗುವ ಮೊದಲು ಕೆಲವು ಕರಪತ್ರಗಳನ್ನು ಅಂಗಳದಲ್ಲಿ ಇಟ್ಟು ಹೋಗಿದ್ದಾರೆ.

ಸಮರ್ಥನೆ:

ಶೇಷಪ್ಪನ ಹತ್ಯೆ ಮಾಡಿದ್ದನ್ನು ಕರ್ನಾಟಕದ ನಕ್ಸಲೀಯರು ಒಪ್ಪಿಕೊಂಡಿದ್ದಾರೆ. ಸಂಘಟನೆಯ ಪರವಾಗಿ ಗಂಗಾಧರ್ ಎಂಬ ಹೆಸರಿನಲ್ಲಿ ಬಿಡುಗಡೆ ಮಾಡಲಾದ ಹೇಳಿಕೆಯೊಂದರಲ್ಲಿ, "ಇದು ಪೊಲೀಸ್ ಮಾಹಿತಿದಾರರಿಗೆ ನೀಡುವ ಅಂತಿಮ ಎಚ್ಚರಿಕೆ!" ಎಂದಿದ್ದಾರೆ. ಶೇಷಪ್ಪ ವಿವಿಧ ಹುದ್ದೆಗಳನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದನಲ್ಲದೆ ಪೊಲೀಸರಿಗೆ ಮಾಹಿತಿದಾರನಾಗಿ ಕೆಲಸ ಮಾಡುತ್ತಿದ್ದ ಎಂದು ನಕ್ಸಲೀಯರು ಆರೋಪಿಸಿದ್ದು ಆತನಿಗೆ ಅನೇಕ ಬಾರಿ ಎಚ್ಚರಿಕೆ ನೀಡಲಾಗಿತ್ತು ಎಂದು ಹೇಳಿಕೊಂಡಿದ್ದಾರೆ. ಆದರೆ ಆತ ತನ್ನ ವರ್ತನೆಯನ್ನು ತಿದ್ದಿಕೊಳ್ಳದಕ್ಕಾಗಿ ಇದು ಆತನಿಗೆ ನೀಡಲಾದ ಶಿಕ್ಷೆ ಎಂದು ಸಮರ್ಥಿಸಿಕೊಂಡಿದ್ದಾರೆ. ಶೇಷಪ್ಪನನ್ನು ಪೊಲೀಸರು ಮಾಹಿತಿದಾರನಾಗಿ ಬಳಸುತ್ತಿದ್ದರು ಎಂಬುದು ಗುಟ್ಟಿನ ವಿಷಯ ಆಗಿರಲಿಲ್ಲ. ಇದರಿಂದ ತನಗೆ ಅಪಾಯ ತಪ್ಪಿದ್ದಲ್ಲ ಎಂದು ಶೇಷಪ್ಪನಿಗೆ ಗೊತ್ತಿರದೆ ಇರಲಿಲ್ಲ. ಆದರೂ ಶೇಷಪ್ಪ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪೊಲೀಸರಿಗೆ ಮಾಹಿತಿ ನೀಡುವುದನ್ನು ನಿಲ್ಲಿಸಿರಲಿಲ್ಲ.

ಫೆಬ್ರವರಿ 5 ರ ರಾತ್ರಿ ಸಾಕೇತ್‌ರಾಜ್ ನೇತೃತ್ವದ ನಕ್ಸಲೀಯರ ತಂಡ ಶೇಷಪ್ಪನ ಮನೆಗೆ ಬಂದಿತ್ತು. ಶೇಷಪ್ಪ ಅವರಿಗೆ ಊಟ ನೀಡಲು ನಿರಾಕರಿಸಿದಾಗ ಪಕ್ಕದ ಮನೆಯಲ್ಲಿ ಊಟಮಾಡಿ ಅಲ್ಲಿಯೇ ತಂಗಿದ್ದರು. ಸಾಕೇತ್ ತಂಡ ಮೆಣಸಿನಹಾಡ್ಯದಲ್ಲಿ ಉಳಿದು ಕೊಂಡಿದೆ ಎಂಬ ಮಾಹಿತಿಯನ್ನು ಶೇಷಪ್ಪ ಪೊಲೀಸರಿಂದ ಪಡೆದಿದ್ದ ಮೊಬೈಲ್ ಮೂಲಕ



ಕಾಂಗ್ರೆಸ್ ಮುಖಂಡ ನಾಗಭೂಷಣ ಅವರಿಗೆ ರವಾನಿಸಿದ್ದ. ನಾಗಭೂಷಣ ಅವರ ಮೂಲಕ ಮಾಹಿತಿ ದೊರಕಿಸಿಕೊಂಡ ಪೊಲೀಸರು ನಾಲ್ಕು ತಂಡಗಳಲ್ಲಿ ಕಾದು ಕುಳಿತು ಕೊನೆಗೆ ಸಾಕೇತ್‌ನನ್ನು ಮತ್ತು ಆತನ ಅಂಗರಕ್ಷಕ ಶಿವಲಿಂಗುರನ್ನು ಬೇಟೆಯಾಡಿದ್ದಾರೆ. ಜೊತೆಗಿದ್ದ ಕೃಷ್ಣಮೂರ್ತಿ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ. ಸಾಕೇತ್ ಹತ್ಯೆಯ ನಂತರ ಶೇಷಪ್ಪನಿಗೆ ನಕ್ಸಲೀಯರಿಂದ ಬೆದರಿಕೆ ಕರೆಗಳು ಬಂದಿದ್ದವು. ಇಂದಲ್ಲ ನಾಳೆ ನಕ್ಸಲೀಯರು ತನ್ನ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾರೆ ಎಂಬುದು ಶೇಷಪ್ಪನಿಗೆ ಚೆನ್ನಾಗಿಗೊತ್ತಿತ್ತು. ಆದರೆ ಸಾಕೇತ್ ಹತ್ಯೆಯ ನಂತರ ಚಿರಂಜೀವಿಸಿಂಗ್ ನಡೆಸಿದ ವಿಚಾರಣೆಯಲ್ಲಿ ನಕ್ಸಲೀಯರ ಬಗ್ಗೆ ಶೇಷಪ್ಪ ಮಾಹಿತಿ ನೀಡಲು ಹಿಂಜರಿಯಲಿಲ್ಲ. ತಾನು ಮಾಡುತ್ತಿರುವುದು ಅಪಾಯಕಾರಿ ಎಂದು ಗೊತ್ತಿದ್ದೂ ಶೇಷಪ್ಪ ತನ್ನ ಪ್ರವೃತ್ತಿಯನ್ನು ಬದಲಾಯಿಸದಿರುವುದು ಗಮನಾರ್ಹವಾಗಿದೆ. ಪೊಲೀಸರಿಗೆ ಬಾತ್ಮಿದಾರನಾಗಿ ಕೆಲಸ ಮಾಡುವುದು ಕರ್ತವ್ಯವೆಂದು ಆತ ಭಾವಿಸಿರಬಹುದೆ? ನಕ್ಸಲಿಯರ ಗುರಿ ಏನೇ ಇರಬಹುದು. ಆದರೆ ಶೇಷಪ್ಪನಿಗೆ ಅವರು ಭಯೋತ್ಪಾದಕರಾಗಿ ಕಂಡಿದ್ದರೆ ಆಶ್ಚರ್ಯವೇನಿದೆ ? ಶಾಂತವಾಗಿದ್ದ ತನ್ನ ಗ್ರಾಮದಲ್ಲಿ ನಕ್ಸಲಿಯರೆಂಬ ಅಪರಿಚಿತರು ಬಂದು ಬಂದೂಕು ತರಬೇತಿ ನಡೆಸುತ್ತಿದ್ದಾಗ ಗ್ರಾಮದ ವೃದ್ದೆಯೊಬ್ಬಳ ಕಾಲಿಗೆ ಗುಂಡು ತಾಕಿದ್ದು ಆತನಲ್ಲಿ ಆತಂಕ ಉಂಟುಮಾಡಿರಬಹುದು. ಗಿರಿಜನರ ಒಂದು ಮಟ್ಟದ ನಾಯಕನೇ ಆಗಿರುವ ಆತನಿಗೆ ತಮ್ಮ ಜನರ ಸಮಸ್ಯೆಗಳಿಗಾಗಿ ಬಂದೂಕಿನ ಹೋರಾಟ ಅಗತ್ಯವಿಲ್ಲ ಎಂದು ಅನಿಸಿರಬಹುದು. ತನ್ನ ಗ್ರಾಮದ ಜನರ ನೆಮ್ಮದಿಯ ದೃಷ್ಟಿಯಿಂದ ಆತ ಪೊಲೀಸ್ ಬಾತ್ಮಿದಾರನಾಗಿ ಕೆಲಸ ಮಾಡುತ್ತಿದ್ದಿರ ಬಹುದು.

ಗಿರಿಜನನೊಬ್ಬನನ್ನು ಕ್ರೂರವಾಗಿ ಕೊಲೆಮಾಡಿ ನಕ್ಸಲಿಯರು ಆ ಅಮಾಯಕ ಗಿರಜನರಿಗೆ ನೀಡುವ ಸಂದೇಶವಾದರೂ ಏನು?

ನಕ್ಸಲಿಯರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು, ಪೊಲೀಸರ ಬಗ್ಗೆ ನಕ್ಸಲಿಯರಿಗೆ ಮಾಹಿತಿ ನೀಡುವುದು ಇಂದು ಮಲೆನಾಡಿನಲ್ಲಿ ಮಾಮೂಲಾಗಿದೆ. ಸಮಾಜದಲ್ಲಿ ಒಂದು ಕ್ರಾಂತಿಕಾರಿ ಪರಿಸ್ಥಿತಿ ನಿರ್ಮಾಣವಾದಾಗ, ಶೋಷಕರ ವಿರುದ್ಧ ಶೋಷಿತರು ಪೊಲೀಸರ ಬಾತ್ಮಿದಾರರಾಗಲು ಸಿದ್ಧರಾಗುವುದಿಲ್ಲ. ಹೋರಾಟಕ್ಕೆ ನೇತೃತ್ವ ಕೊಡುವ ನಾಯಕರನ್ನು ಜನ ಬಚ್ಚಿಟ್ಟು ರಕ್ಷಿಸುತ್ತಾರೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಂತಹ ಪರಿಸ್ಥಿತಿ ಇಲ್ಲ. ಈಗಾಗಲೇ ಸಂಪೂರ್ಣವಾಗಿ ವಿಫಲವಾದ ಈ ನಕ್ಸಲೀಯ ಚಳುವಳಿಯಲ್ಲಿ ಅಳಿದುಳಿದವರು ಅಡಗಿಕೊಂಡಿರಲು ಸುರಕ್ಷಿತ ತಾಣಗಳನ್ನು ಹುಡುಕುತ್ತಾ ಪಶ್ಚಿಮ ಘಟ್ಟ ಪ್ರದೇಶಕ್ಕೆ ಕಾಲಿಟ್ಟಿದ್ದು ಕರಗುತ್ತಿರುವ ತಮ್ಮ ಪಡೆಗೆ ರಾಜ್ಯದ ಯುವಕ ಯುವತಿಯರನ್ನು ಸೆಳೆಯಲು ವಿವಿಧ ತಂತ್ರಗಳಲ್ಲಿ ಮಗ್ನರಾಗಿದ್ದಾರೆ. ಶೇಷಪ್ಪನ ಹತ್ಯೆಯೊಂದಿಗೆ ನಕ್ಸಲೀಯರ ಬಣ್ಣ ಬಯಲಾಗಿದೆ.

ಕೊಲೆಗಳಿಗೆ ಕೊನೆಯಿಲ್ಲ:

ಪೊಲೀಸ್ ಬಾತ್ಮಿದಾರನೆಂಬ ಆರೋಪ ಹೊರಿಸಿ ನಕ್ಸಲೀಯರು ಶೇಷಪ್ಪನನ್ನು ಕೊಂದುಹಾಕಿದ್ದಾರೆ. ನಕ್ಸಲೀಯರ ಬಾತ್ಮಿದಾರರೆಂದು ಪೊಲೀಸರು ಕೊಲ್ಲಲಾರಂಭಿಸಿದರೆ ಏನಾದಿತು? ಕೊನೆಯಿಲ್ಲದ ಕೊಲೆಗಳು! ನಕ್ಸಲೀಯರ ವಿರುದ್ಧ ಎಸ್.ಟಿ.ಎಫ್. ಕಾರ್ಯಾಚರಣೆಗೆ ಸರ್ಕಾರ ಮುಂದಾಗಿರುವುದು ಜನತೆಯಲ್ಲಿ ಸಹಜವಾಗಿ ಆತಂಕವನ್ನು ಉಂಟು ಮಾಡಿದೆ. ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ನಿಯೋಜಿಸಲಾಗಿದ್ದ ವಿಶೇಷ ಕಾರ್ಯ ಪಡೆ ಅಮಾಯಕರ ಮೇಲೆ ನಡೆಸಿದ ಅತಿರೇಕಗಳನ್ನು ಜನ ಇನ್ನೂ ಮರೆತಿಲ್ಲ. ನಕ್ಸಲೀಯರ ಅಟ್ಟ ಹಾಸವನ್ನು ಮಟ್ಟಹಾಕಲೇಬೇಕು ಎನ್ನುವುದಾದರೆ ಎಸ್.ಟಿ.ಎಫ್. ನಂತಹ ಕ್ರಮ ಅಗತ್ಯವೆಂದೇ ಹೇಳಬೇಕಾಗುತ್ತದೆ. ಆದರೆ ನಕ್ಸಲೀಯರ ಹೆಸರಿನಲ್ಲಿ ಅಮಾಯಕರ ಮೇಲೆ ಪೊಲೀಸರ ದೌರ್ಜನ್ಯಕ್ಕೆ ಅವಕಾಶವಾಗದಂತೆ ಎಚ್ಚರ ವಹಿಸುವುದು ಅಗತ್ಯ. ಆದರೆ ಎಸ್‌ಟಿಎಫ್ ವಿರುದ್ಧ ಟೀಕೆ ಮಾಡುವವರು ನಕ್ಸಲೀಯರು ಶಸ್ತ್ರ ತ್ಯಜಿಸಬೇಕು ಎಂದು ಒತ್ತಾಯಿಸದೆ ಇರುವುದು ಆಕ್ಷೇಪಾರ್ಹವಾಗಿದೆ. ನಕ್ಸಲೀಯರು ಶಸ್ತ್ರ ತ್ಯಜಿಸಿ ಜನಪರ ಚಳುವಳಿಯ ಮುಖ್ಯ ಪ್ರವಾಹಕ್ಕೆ ಸೇರುವಂತೆ ಒತ್ತಾಯಿಸುವುದು ಮುಖ್ಯವಾಗುತ್ತದೆ.

ಇನ್ ಸೈಡ್ ಸ್ಟೋರಿ:

ಗೌರಿಲಂಕೇಶರ ಜೂನ್ 1 ರ ಸಂಚಿಕೆಯು ಓದುಗರಿಗೆ ಒಂದು 'ರಂಜನೆ' ಯನ್ನು ನೀಡಿದೆ. 'ನಕ್ಸಲಿರ ಹೊಸ ನಾಯಕ ಯಾರೀ ಸುಧಾಕರ ರೆಡ್ಡಿ? ' ಎಂಬ ತಲೆಬರಹ ಹೊತ್ತಿರುವ ಈ 'ಇನ್ ಸೈಡ್ ಸ್ಟೋರಿ' ಪತ್ರಿಕೆಯ ಇನ್ ಸೈಡ್ ಸ್ಟೋರಿಯತ್ತ ಬೊಟ್ಟು ಮಾಡುವಂತಿದೆ. ಸಾಕೇತ್ ನಂತರ ಆ ಸ್ಥಾನಕ್ಕೆ ಆಂಧ್ರ ಮೂಲದ ಸುಧಾಕರ ರೆಡ್ಡಿ ಎಂಬಾತ ವಕ್ಕರಿಸಿದ್ದಾನೆ ಎಂಬುದನ್ನು ಇಲ್ಲಿ ಇಷ್ಟೊಂದು ನಿಖರವಾಗಿ ಅಲ್ಲಗಳೆಯುತ್ತಿರುವುದನ್ನು ಗಮನಿಸಿದರೆ ನಕ್ಸಲೀಯರ ಬಗ್ಗೆ ಪತ್ರಿಕೆಗೆ ಸಂಪೂರ್ಣವಾದ ಮಾಹಿತಿ ಇದ್ದಂತೆ ಕಂಡು ಬರುತ್ತದೆ. ಸಾವಂತ್ರಿ ಮೊದಲಾದ ಪೊಳ್ಳು ಹೆಸರುಗಳನ್ನು ಇಟ್ಟು ಕೊಂಡು ಬರೆಯುತ್ತಿರುವವರು ಇವರು ಯಾರಿರಬಹುದು ಎಂಬ ಗುಮಾನಿ ಓದುಗರನ್ನು ಕಾಡಲಾರಂಭಿಸಿದ್ದರೆ ಆಶ್ಚರ್ಯ ವೇನಿಲ್ಲ. ಒಂದು ಕಡೆ ನಕ್ಸಲೀಯರಿಗೂ ನಮಗೂ ಏನೂ ಸಂಬಂಧವಿಲ್ಲ ಎನ್ನುವ ಇವರು ಇನ್ನೊಂದು ಕಡೆ ನಕ್ಸಲೀಯರ ಸಶಸ್ತ್ರ ಹೋರಾಟದ ದುಸ್ಸಾಹಸವನ್ನು ಬಲವಾಗಿ ಸಮರ್ಥಿಸುತ್ತಾರೆ. ಗುಟ್ಟು ರಟ್ಟಾಗದೆ ಇರಲಾರದು.

ಬಂಗಾಳ ನಗರಸಭೆ ಚುನಾವಣೆ : ಎಡರಂಗಕ್ಕೆ ಮತ್ತೊಮ್ಮೆ ಭರ್ಜರಿ ವಿಜಯ

ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ರಾಜ್ಯಾದ್ಯಂತ ನಡೆದ ನಗರ ಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗವು ಭರ್ಜರಿ ಜಯಗಳಿಸುವುದರೊಂದಿಗೆ ತನ್ನ ಜನಬೆಂಬಲವನ್ನು ಇನ್ನಷ್ಟು ಕ್ರೋಢೀಕರಿಸಿಕೊಂಡಿದೆ.

ಒಟ್ಟು 79 ನಗರಸಭೆಗಳಿಗೆ ನಡೆದ ಚುನಾವಣೆಯಲ್ಲಿ 49 ನಗರ ಸಭೆಗಳು ಎಡರಂಗದ ಪಾಲಾಗಿದ್ದು, 12 ನಗರ ಸಭೆಗಳಲ್ಲಿ ತನ್ನ ಬಹುಮತವನ್ನು ಹೆಚ್ಚಿಸಿಕೊಂಡಿದೆ. ಅಂದರೆ 2000ನೇ ವರ್ಷದಲ್ಲಿ ನಡೆದ ಚುನಾವಣೆಯಲ್ಲಿ ಎಡರಂಗವು 37 ನಗರಸಭೆಗಳಲ್ಲಿ ಬಹುಮತ ಗಳಿಸಿತ್ತು.

ಪ್ರಮುಖ ವಿರೋಧ ಪಕ್ಷಗಳಾದ ತೃಣಮೂಲ ಕಾಂಗ್ರೆಸ್, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಹಲವಾರು ನಗರಸಭೆಗಳಲ್ಲಿ ಜಂಟಿಯಾಗಿ ಸ್ಪರ್ಧೆ ಮಾಡಿದ್ದರೂ ಫಲಕಾರಿಯಾಗಿಲ್ಲ. ಆ ಪಕ್ಷಗಳು ಜಂಟಿಯಾಗಿ 2000ರ ಚುನಾವಣೆಯಲ್ಲಿ 18 ನಗರಸಭೆಗಳಲ್ಲಿ ಅಧಿಕಾರ ನಡೆಸುತ್ತಿದ್ದವು. ಈಗ ಅದು 7 ನಗರಸಭೆಗಳಲ್ಲಿ ಮಾತ್ರ ಜಂಟಿಯಾಗಿ ಬಹುಮತ ಪಡೆದಿದೆ. ಈ ಮೂರು ಪಕ್ಷಗಳ ಏಕೈಕ ಉದ್ದೇಶ ಎಡರಂಗವನ್ನು ಸೋಲಿಸುವುದು. ಆದರೆ ಬಂಗಾಳದ ಮತದಾರ ಇದಕ್ಕೆ ಅವಕಾಶ ನೀಡಲಿಲ್ಲ. ಹುಲ್ಲಿನಿಂದ (ತೃಣಮೂಲ) ಎದ್ದುಬಂದ ತೃಣಮೂಲ ಕಾಂಗ್ರೆಸ್ ಮತ್ತೆ ಹುಲ್ಲಿನ ಬೇರಿನೆಡೆಗೆ ಸಾಗಿದೆ. ಮಣ್ಣು ಮುಕ್ಕಿದೆ.

ಹೇಗಾದರೂ ಮಾಡಿ ಎಡರಂಗವನ್ನು ಸೋಲಿಸಬೇಕೆಂದು ಬಯಸಿದ್ದ ಬಂಡವಾಳಶಾಹಿಗಳು ತಮ್ಮ ಮಾಧ್ಯಮಗಳ ಮೂಲಕ ಅಪಪ್ರಚಾರದ ಪರ್ವತವನ್ನೇ ಹೇರಿದ್ದರು. ಕೆಲವು ವರ್ಷಗಳ ಹಿಂದೆ ಮಮತಾಬ್ಯಾನರ್ಜಿ ಇನ್ನೇನು ಅಧಿಕಾರಕ್ಕೆ ಬಂದೇಬಿಟ್ಟರು ಎಂಬಂತೆ ಪ್ರತಿಪಾದಿಸಿದ್ದರು. ಸಮರಶೀಲ ಹೋರಾಟಗಳನ್ನು ನಡೆಸಿ, ಸೈದ್ಧಾಂತಿಕ ಪ್ರಜ್ಞೆಯನ್ನು ಹೆಚ್ಚಿಸಿಕೊಂಡ ಬಂಗಾಳದ ಮತದಾರರು ವಾಸ್ತವತೆಗೆ ಓಗೊಟ್ಟು ಎಡರಂಗಕ್ಕೆ ಬಹುಮತ ನೀಡಿದ್ದಾರೆ.

ಪ್ರಭಾವ ವಿಸ್ತರಣೆ :

ಎಡರಂಗ ಸರಕಾರದ ಜನಪ್ರಿಯತೆ ಹಳ್ಳಿಗಳಿಗೆ ಸೀಮಿತ ಎನ್ನುವ ಪ್ರಚಾರ ಅಪಾರವಾಗಿತ್ತು. ಈ ಅಪಪ್ರಚಾರವನ್ನು ಚುನಾವಣಾ ಪಲಿತಾಂಶ ಸುಳ್ಳಾಗಿಸಿದೆ. ಗ್ರಾಮೀಣ ಪ್ರದೇಶದ ರೈತಾಪಿ ಜನತೆ ಎಡರಂಗದ ಭದ್ರನೆಲೆ ಎನ್ನುವುದಕ್ಕೆ ಎರಡು ಮಾತಿಲ್ಲ. ಸಮಗ್ರ ಭೂಸುಧಾರಣೆಯ ಮೂಲಕ ಭೂಮಿ ಇಲ್ಲದ ಬಡವರಿಗೆ, ದಲಿತರಿಗೆ ಭೂಮಿ ವಿತರಣೆ, ಭೂಮಾಲಿಕರ ವಿರುದ್ಧ ನಡೆದ ಹೋರಾಟದಲ್ಲಿ ಗೇಣಿದಾರರಿಗೆ ಪೂರ್ಣ ರಕ್ಷಣೆ, 'ಆಪರೇಷನ್ ಬರ್ಗಾದಾರ್' ಮೂಲಕ ಲಕ್ಷಗಟ್ಟಲೆ ಗೇಣಿದಾರರ ನೋಂದಣಿ, ಗ್ರಾಮಪಂಚಾಯತಿಗಳ ಮೂಲಕ ಅಧಿಕಾರ ವಿಕೇಂದ್ರೀಕರಣ, ಬಡರೈತರು, ಕೂಲಿಕಾರರು, ಪ್ರಗತಿಪರ ಚಿಂತಕರು ಚುನಾಯಿತ ಸಂಸ್ಥೆಗಳಿಗೆ ಆಯ್ಕೆ ಇತ್ಯಾದಿ ಜನಪರ ಕಾರ್ಯಕ್ರಮಗಳ ಮೂಲಕ ಎಡರಂಗವು ಗ್ರಾಮೀಣ ಪ್ರದೇಶದಲ್ಲಿ ಆಳವಾಗಿ ಬೇರು ಬಿಟ್ಟಿರುವುದು ನಿಜ. ಅದೇ ಸಂದರ್ಭದಲ್ಲಿ ಕಾರ್ಮಿಕರ, ನೌಕರರ ನ್ಯಾಯಯುತವಾದ ಬೇಡಿಕೆಗಳನ್ನು ಕೈಗೆತ್ತಿಕೊಂಡು ಆಳುವ ಪಕ್ಷಗಳ ವಿರುದ್ಧ ನಡೆಸಿದ ಹೋರಾಟದ ಫಲವಾಗಿ ನಗರ ಪ್ರದೇಶದಲ್ಲೂ ಸಿಪಿಐ(ಎಂ) ಮತ್ತು ಎಡರಂಗ ಬಲಿಷ್ಠವಾಗಿದೆ. ಆಡಳಿತದಲ್ಲಿ ಚುರುಕು, ಸ್ಥಿರತೆ, ಹೊಸ ಕೈಗಾರಿಕೆಗಳ ಸ್ಥಾಪನೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಸುಧಾರಣೆ, ನೀರು ನೈರ್ಮಲ್ಯದ ಸಮಸ್ಯೆಗೆ ಪರಿಹಾರದ ಕ್ರಮಗಳು ಇತ್ಯಾದಿಗಳ ಮೂಲಕ ಎಡರಂಗದ ಪ್ರಭಾವ ನಗರ ಪ್ರದೇಶದ ಹೊಸ ವಿಭಾಗವನ್ನು ಆಕರ್ಷಿಸಲು ಸಾದ್ಯವಾಗಿದೆ. ಬಂಗಾಳ ಸರಕಾರದ ಜನಪರ ನೀತಿಗಳಿಗೆ ನಗರಸಭಾ ಚುನಾವಣೆಗಳು ಪ್ರತ್ಯಕ್ಷ ಸಾಕ್ಷಿ.

ವಿವಿಧ ಪಕ್ಷಗಳು / ರಂಗಗಳು ಬಹುಮತ ಪಡೆದ ನಗರಸಭೆಗಳ ಸಂಖ್ಯೆ ಈ ರೀತಿ ಇದೆ.

	2005	2000
ಚುನಾವಣೆ ನಡೆದ		
ಒಟ್ಟು ಮುನಿಸಿಪಾಲಿಟಿಗಳು	79	79
ಎಡರಂಗ	(12 ಹೆಚ್ಚಳ) 49	37
ಪ್ರದೇಶ ಕಾಂಗ್ರೆಸ್ (ಕಾಂಗ್ರೆಸ್-ಐ)	(4 ಕಡಿಮೆ) 12	16
ತೃಣಮೂಲ ಕಾಂಗ್ರೆಸ್	(4 ಕಡಿಮೆ) 03	07
ಜಿ.ಎನ್.ಎಲ್.ಎಫ್	01	01
ಕಾಂಗ್ರೆಸ್ ಮತ್ತು ತೃಣಮೂಲ ಮತ್ತು ಬಿಜೆಪಿಒಕ್ಕೂಟ	07(11 ಕಡಿಮೆ)	18
ಯಾವುದೇ ರಂಗಕ್ಕೆ ಬಹುಮತವಿಲ್ಲ	07	-

ಕೋಮುವಾದಿ ಪಕ್ಷಕ್ಕೆ ತಿರಸ್ಕಾರ :

ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವ ತತ್ವಗಳಿಗೆ ಬದ್ಧವಾಗಿರುವ ಪಶ್ಚಿಮ ಬಂಗಾಳದಲ್ಲಿ ಕೋಮುವಾದಿ ಪಕ್ಷವಾದ ಬಿಜೆಪಿಯನ್ನು ಜನತೆ ತಿರಸ್ಕರಿಸಿದ್ದಾರೆ. ಯಾವುದೇ ನಗರಸಭೆಯಲ್ಲಿ ಬಹುಮತ ಪಡೆಯಲು ಬಿಜೆಪಿ ವಿಫಲವಾಗಿದೆ. ಹಿಂದೆ ತೃಣಮೂಲ ಕಾಂಗ್ರೆಸ್ಸಿನ ಬೆಂಬಲದಿಂದ ಒಮ್ಮೆ ಲೋಕಸಭಾ ಸ್ಥಾನಗಳಿಸಿದ್ದರೂ ಅದರ ನೆಲೆ ಶಿಥಿಲವಾಗುತ್ತದೆ. ಆದ್ದರಿಂದಲೇ 'ಚಡ್ಡಿ' ಲೇಖಕರೆಂದೇ ಖ್ಯಾತಿ ಪಡೆದಿರುವ ಎಂ.ವಿ.ಕಾಮತ್‌ರಂತಹ ಲೇಖಕರು ಲಂಗುಲಗಾಮಿಲ್ಲದೆ, ಕಮ್ಯೂನಿಸ್ಟರನ್ನು ವಿಶೇಷವಾಗಿ ಸಿಪಿಐ(ಎಂ)ನ್ನು ಹಲುಬುತ್ತಿದ್ದಾರೆ. ಉದಯವಾಣಿಯಲ್ಲಿ ಮೇ 22ರಂದು ಬರೆದ ಲೇಖನದಲ್ಲಿ ಪಶ್ಚಿಮ ಬಂಗಾಳದಲ್ಲಿ ಸತತವಾಗಿ ಎಡರಂಗ ಗೆಲ್ಲುತ್ತಿರುವುದು ಗೂಂಡಾಗಿರಿಯ ಮೂಲಕ ಎಂದು ಪ್ರತಿಪಾದಿಸುತ್ತಿದ್ದಾರೆ. ಕರ್ನಾಟಕದಂತಹ ರಾಜ್ಯದಲ್ಲೇ ಕಾಂಗ್ರೆಸ್ ನೇತೃತ್ವದ ಗುಂಡೂರಾಯರ ಗೂಂಡಾಗಿರಿ ಸರಿಯಾಗಿ 3 ವರ್ಷ ಬಾಳಲಿಲ್ಲ. 28 ವರ್ಷದಿಂದ ಅಧಿಕಾರ ನಡೆಸುತ್ತಿರುವ ಎಡರಂಗ ಸರ್ಕಾರ ಗೂಂಡಾಗಿರಿಯಿಂದ ಅಧಿಕಾರ ನಡೆಸುತ್ತಿದೆ ಎಂದರೆ ಯಾರು ನಂಬಬೇಕು? ಆಳುವ ವರ್ಗದ ಎಂಜಲು ತಿನ್ನುವ ಕಾಮತರಿಗೆ, ಬಂಗಾಳದಲ್ಲಿ ಜಾತ್ಯಾತೀತ ಪರಂಪರೆಯನ್ನು ರಕ್ಷಿಸಲು, ಪ್ರಜಾಪ್ರಭುತ್ವವನ್ನು ಕಟ್ಟಿ ಬೆಳೆಸಲು ಎಷ್ಟೊಂದು ಜನ ತ್ಯಾಗ ಬಲಿದಾನ ಮಾಡಿದ್ದಾರೆನ್ನುವುದು ಗೊತ್ತಿದೆಯೇ?

ಮುನಿಸಿಪಾಲಿಟಿಯ ಒಟ್ಟು ವಾರ್ಡುಗಳ ಪೈಕಿ ಶೇ60ರಷ್ಟನ್ನು ಗೆದ್ದುಕೊಂಡಿರುವ ಎಡರಂಗ 19 ಹೊಸ ಮುನಿಸಿಪಾಲಿಟಿಗಳಲ್ಲಿ ಆಡಳಿತ ತನ್ನದಾಗಿಸಿಕೊಂಡಿದೆ. ಹೆಚ್ಚಿನ ಅಧಿಕಾರಗಳು ಕೇಂದ್ರ ಸರ್ಕಾರದಲ್ಲಿ ಕೇಂದ್ರೀಕೃತಗೊಂಡಿದ್ದರೂ ತನ್ನ ಇತಿಮಿತಿಗಳ ನಡುವೆ ಪ್ರಾಮಾಣಿಕವಾಗಿ ಸಾಮಾನ್ಯ ಜನರ ಪರವಾದ ನೀತಿಗಳನ್ನು ಜಾರಿ ಮಾಡುತ್ತಿರುವುದರಿಂದಾಗಿ ಈ ಚುನಾವಣಾ ವಿಜಯದ ಪುನರಾವರ್ತನೆಯಾಗಿದೆ.

ಬದಲಿ ಕೃಷಿ ನೀತಿಗಾಗಿ ಹೋರಾಟಕ್ಕೆ ಕರೆ

ಪುಟ 7ರಿಂದ

ಆರ್ಥಿಕ ಉದಾರೀಕರಣ ಗ್ರಾಮೀಣ ಪ್ರದೇಶಗಳಿಗೆ ಸಿಗುತ್ತಿದ್ದ ಸಂಘಟಿತ-ಔಪಚಾರಿಕ ಕ್ಷೇತ್ರದ ಸಾಲವನ್ನು ಕಡಿತ ಮಾಡಿದೆ. ಬ್ಯಾಂಕಿಂಗ್ ನೀತಿ ಸಹ ಬಡವರ ಸಾಲದ ಹೊರೆ ಹೆಚ್ಚಿ, ಅವರು ಲೇವಾದೇವಿಯವರ ಬಳಿ ದುಬಾರಿ ಬಡ್ಡಿದರದಲ್ಲಿ ಸಾಲಕ್ಕೆ ಮೊರೆ ಹೋಗುವಂತೆ ಮಾಡಿದೆ.

1996ರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆ (ರೇಶನ್)ಯನ್ನು ಕುಗ್ಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದ್ದು ದೇಶದ ಅರ್ಧ ಜನ ಈಗಾಗಲೇ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

ಈಗಿನ ಜಾಗತಿಕ ವಾಣಿಜ್ಯ ಸೂತ್ರಗಳು - ಭೂಮಿಯ ಬಳಕೆ, ಬೆಳೆಯುವ ಬೆಳೆಗಳ ಪ್ರಮಾಣ, ಆಹಾರ ಮತ್ತು ಪೌಷ್ಟಿಕ ಭದ್ರತೆ ಮತ್ತು ಸ್ವಾವಲಂಬನೆ- ಮೇಲೆ ತೀವ್ರ ಗಂಭೀರ ಪರಿಣಾಮ ಬೀರಲಿವೆ. ಬೀಜ ಕಾನೂನು ರೈತ ತನ್ನ ಬೀಜ ತಾವೇ ಉತ್ಪಾದನೆ ಮಾಡುವ ಅಥವಾ ಇತರ ರೈತರ ಜತೆ ಬೀಜ ವಿನಿಮಯ ಮಾಡುವುದನ್ನು ಹೆಚ್ಚು ಕಡಿಮೆ ಪ್ರತಿಬಂಧಿಸುತ್ತವೆ. ಬೀಜ ಉತ್ಪಾದನೆಯು ಖಾಸಗಿ ಕಂಪನಿಗಳಿಗೆ ಅದರಲ್ಲೂ, ಕೃಷಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪೂರ್ತಿಯಾಗಿ ಕೊಟ್ಟುಬಿಡುವ ಹುನ್ನಾರ ಹೊಂದಿವೆ. ಇದೇ ರೀತಿಯಲ್ಲಿ ಕೃಷಿ ಉತ್ಪನ್ನಗಳ ಮಾರಾಟ, ವಿತರಣೆಯಲ್ಲಿಯೂ ಸಾರ್ವಜನಿಕ ಮಧ್ಯಪ್ರವೇಶ, ಸಾರ್ವಜನಿಕ ಕ್ಷೇತ್ರದ ಮಂಡಿಯನ್ನು ಮುಗಿಸಿ ಅದನ್ನು ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಟ್ಟುಬಿಡುವ ಪ್ರಯತ್ನ ನಡೆದಿದೆ. ಸಾಕಷ್ಟು ನಿಜವಾದ ಸಮಸ್ಯೆಗಳಿಂದ ಬಾಧಿತವಾಗಿರುವ ಸಹಕಾರಿ ಸಾಲ ವ್ಯವಸ್ಥೆಯನ್ನು ಸುಧಾರಿಸುವ ನೆಪದಲ್ಲಿ ಅದನ್ನು ಮೂಲೆಗುಂಪು ಮಾಡುವ ಮುಗಿಸಿ ಬಿಡುವ, ಅದರಲ್ಲಿ ರಾಜ್ಯ ಸರ್ಕಾರಗಳ ಪಾತ್ರ ಮುಗಿಸುವ ತೀವ್ರ ಪ್ರಯತ್ನಗಳು ನಡೆದಿವೆ.

ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ನಮೂದಿಸಿರುವ ಕೆಲವು ಕ್ರಮಗಳನ್ನು ಕೈಗೊಂಡಿದೆ, ಗ್ರಾಮೀಣ ಜನತೆಗೆ ಸ್ವಲ್ಪ ಪರಿಹಾರ ಸಿಗುವ ಸಾಧ್ಯತೆ ಇದೆ. ಆದರೆ ಬಜೆಟ್ ಸೇರಿದಂತೆ, ಪ್ರಸಕ್ತ ಯುಪಿಎ ಸರ್ಕಾರದ ನೀತಿಗಳು ಮೂಲಭೂತ ದಿಕ್ಕನ್ನು ಬದಲಾಯಿಸಿಲ್ಲ. ಬಿಜೆಪಿ ನಾಯಕತ್ವದ ಎನ್‌ಡಿಎ ಸರ್ಕಾರಕ್ಕೂ, ಕಾಂಗ್ರೆಸ್ ನಾಯಕತ್ವದ ಯುಪಿಎ ಸರ್ಕಾರದ ಆರ್ಥಿಕ ನೀತಿಗಳಲ್ಲಿ ಯಾವುದೇ ಮೂಲಭೂತ ವ್ಯತ್ಯಾಸ ಇಲ್ಲ. ಪಾರ್ಲಿಮೆಂಟಿನ ಒಳಗೆ ಮತ್ತು ಹೊರಗೆ ತೀವ್ರ ಒತ್ತಡ ಹಾಕಿದರೆ, ಜನರ ಕಾಳಜಿಗೆ ಅನುಗುಣವಾದ ಕೆಲವು ಬದಲಾವಣೆಯನ್ನು ತರುವುದು ಸಾಧ್ಯ ಎಂಬುದು ಪೇಟೆಂಟ್ ಕಾನೂನು ಕೆಲವು ತಿದ್ದುಪಡಿಯ ಸಂದರ್ಭದಲ್ಲಿ ವ್ಯಕ್ತವಾಗಿದೆ. ಇದೇ ರೀತಿ ರಾಜಸ್ತಾನದಲ್ಲಿ ರೈತರ ಹೋರಾಟ ಅಲ್ಲಿ ಬಿಜೆಪಿ ರಾಜ್ಯ ಸರ್ಕಾರ ಹರಿಯಬಿಟ್ಟ ದಮನಚಕ್ರದ ಮಧ್ಯೆಯೂ ರೈತರ ಕೆಲವು ತಕ್ಷಣದ ಬೇಡಿಕೆಗಳನ್ನು ಒಪ್ಪಬೇಕಾಗಿ ಬಂದಿದೆ.

ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಎಡರಂಗ ಸರ್ಕಾರಗಳು ಮಾತ್ರ ತಕ್ಕ ಬದಲಿ ರೂಪಿಸಿವೆ. ಈಗಿನ ವ್ಯವಸ್ಥೆಯ ಎಲ್ಲಾ ನೀತಿಗಳ ಒಳಗೂ ಭೂಮಿ ಮತ್ತು ಇತರ ಕೃಷಿ ಸಂಪನ್ಮೂಲಗಳೂ ಬಡರೈತರಿಗೆ ಪಂಚಾಯತಗಳ ಮೂಲಕ ಒದಗಿಸುವುದರಿಂದ ಕೃಷಿ, ಆಹಾರ ಉತ್ಪಾದನೆ ಹೆಚ್ಚಿಸುವುದು, ಬಡತನ ಕಡಿಮೆ ಮಾಡುವುದು ಸಾಧ್ಯವಿದೆ ಎಂದು ಸರ್ಕಾರಗಳು ತೋರಿಸಿಕೊಟ್ಟಿವೆ.

ಇಂದಿನ ಕಾರ್ಷಿಕ ಪರಿಸ್ಥಿತಿಯಲ್ಲಿ ಎರಡು ಪ್ರಮುಖ ವೈರುಧ್ಯಗಳು ಕಾಣುತ್ತಿವೆ. ಭೂಮಾಲಿಕರು ದೊಡ್ಡ ಬಂಡವಾಳಶಾಹಿ ಭೂಮಾಲಕರು, ದೊಡ್ಡ ವ್ಯಾಪಾರಿಗಳು ಲೇವಾದೇವಿಗಳು ಮತ್ತು ಅವರ ಸಹಚರರು - ಒಂದುಕಡೆ ಮತ್ತು ಕೃಷಿ ಕೂಲಿಕಾರರು, ಬಡ ಮತ್ತು ಮಧ್ಯಮ ರೈತರು ಮತ್ತು ಗ್ರಾಮೀಣ ಕೈಕಸುಬುದಾರರು ಇನ್ನೊಂದು ಕಡೆ. ಇವರ ನಡುವೆ ಮೊದಲನೆಯ ವೈರುಧ್ಯ, ಇನ್ನೊಂದು ವೈರುಧ್ಯ ಸಾಮ್ರಾಜ್ಯಶಾಹಿ- ಬೆಂಬಲಿತ ಸರ್ಕಾರಿ ನೀತಿಗಳು ಮತ್ತು ಅವನ್ನು ಬಡ, ಮಧ್ಯಮ ರೈತರು, ಕೃಷಿ ಕೂಲಿಕಾರರು ಮಾತ್ರವಲ್ಲ, ಶ್ರೀಮಂತ ರೈತರ ವಿಭಾಗಗಳು ಸಹ ವಿರೋಧಿಸುತ್ತಿರುವುದು.

ಇವರಡೂ ವೈರುಧ್ಯಗಳು ತೀವ್ರಗೊಳ್ಳುತ್ತಿರುವುದನ್ನು ಗಮನಿಸಿರುವ ಸಿಪಿಐ(ಎಂ)ನ 18ನೇ ಮಹಾಧಿವೇಶನ ಎಲ್ಲಾ ಎಡ, ಪ್ರಜಾಸತ್ತಾತ್ಮಕ ಮತ್ತು ದೇಶಪ್ರೇಮಿ ಶಕ್ತಿಗಳುಬದಲಿ ಕೃಷಿ ನೀತಿಗೆ ದೇಶದಾದ್ಯಂತ ಹೋರಾಟ ಸಂಘಟಿಸಬೇಕು ಎಂದು ಕರೆ ನೀಡಿದೆ.

ಬದಲಿ ಕೃಷಿ ನೀತಿಯ ಮುಖ್ಯ ಅಂಶಗಳು

ಭೂಸುಧಾರಣೆ ಕಾನೂನುಗಳಲ್ಲಿರುವ ಎಲ್ಲಾ ಹುಳುಕುಗಳನ್ನು ಮುಚ್ಚಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು. ಅರಣ್ಯ ಜಮೀನನ್ನು ಸಾಗುವಳಿ ಮಾಡುವ ರೈತರು ಅದರಲ್ಲೂ ವಿಶೇಷವಾಗಿ ಆದಿವಾಸಿಗಳ ಹೆಸರಿಗೆ ಮಾಡುವುದು.

ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ದುಡಿಯುವ ಜನರಿಗೆ ಉದ್ಯೋಗ ಖಾತರಿ ಒದಗಿಸಲು ಸಮಗ್ರ ಕೇಂದ್ರೀಯ ಕಾನೂನು ತರುವುದು.

ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ವಿರುದ್ಧ ತಾರತಮ್ಯ ಮತ್ತು ದೌರ್ಜನ್ಯಗಳ ವಿರುದ್ಧ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ

ನೀರಾವರಿ ಮತ್ತು ವಿದ್ಯುತ್ ಮುಂತಾದವುಗಳಲ್ಲಿ ಸಾರ್ವಜನಿಕ ಹೂಡಿಕೆ ಹೆಚ್ಚಿಸುವುದು ಮತ್ತು ಆರೋಗ್ಯ ಸೇವೆ ಸಾರ್ವತ್ರಿಕ ಉಚಿತ ಕಡ್ಡಾಯ ಶಾಲಾ ಶಿಕ್ಷಣದಂತಹ ಸಾಮಾಜಿಕ ಮೂಲಭೂತಸೇವೆಗಳನ್ನು ಸ್ಥಾಪಿಸುವುದು.

ಕೃಷಿಗೆ ಅಗತ್ಯವಾದ ಬೀಜ, ಗೊಬ್ಬರ ಮತ್ತು ಕೀಟನಾಶಕಗಳಿಗೆ ಸಬ್ಸಿಡಿ ಹೆಚ್ಚಿಸುವುದು ಮತ್ತು ಅವುಗಳ ಗುಣಮಟ್ಟ ಕಾಯಲು ಗಂಭೀರ ಕ್ರಮಗಳು, ನೀರಿನಂತಹ ಸಂಪನ್ಮೂಲಗಳ ಸಮಾನ ಹಂಚಿಕೆಯ ಮೇಲೆ ಸಾಮಾಜಿಕ ನಿಯಂತ್ರಣ

ಸಾಮಾಜಿಕ ಮತ್ತು ಬೆಳವಣಿಗೆ ಬ್ಯಾಂಕಿಂಗ್ ಪುನಃ ಆರಂಭಿಸುವುದು ಸಹಕಾರಿ ವ್ಯವಸ್ಥೆ ಬಲಪಡಿಸುವುದು; ಸಮಗ್ರ ಬೆಳೆ ವಿಮೆ ಯೋಜನೆ ಜಾರಿ ಮಾಡುವುದು. ಸಾಲದ ಹೊರೆಯಿಂದ ಜರ್ಜರವಾಗಿರುವ ರೈತರಿಗೆ ಪರಿಹಾರ ಕ್ರಮಗಳು.

ಕನಿಷ್ಠ ಬೆಂಬಲ ಬೆಲೆಯನ್ನು ಎಲ್ಲಾ ಬೆಳೆಗಳಿಗೆ ವಿಸ್ತರಿಸುವುದು ಮತ್ತು ಸಾರ್ವಜನಿಕ ಖರೀದಿಯನ್ನು ದೇಶದ ಎಲ್ಲಾ ಭಾಗಗಳಿಗೆ ವಿಸ್ತರಿಸುವುದು.

ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ; ಪರಿಸರ ವೈಜ್ಞಾನಿಕ ಭೂಬಳಕೆ ನೀತಿಯ ಜಾರಿ; ಪರಸರದ ರಕ್ಷಣೆ.

ಬರ ನೆರೆ ಮತ್ತು ಇತರ ಪ್ರಾಕೃತಿಕ ವಿಕೋಪಗಳ ನಿಯಂತ್ರಣಕ್ಕೆ ಸಾಕಷ್ಟು ಸಂಪನ್ಮೂಲಗಳು; ನೊಂದ ಜನತೆಗೆ ಪರಿಹಾರ.

ರಾಷ್ಟ್ರೀಯ ಕೃಷಿ ಸಂಶೋಧನೆ, ಅಭಿವೃದ್ಧಿ ಮತ್ತು ವಿಸ್ತರಣೆ ವ್ಯವಸ್ಥೆಯ ಪಾತ್ರಕ್ಕೆ ಪುನಃ ಒತ್ತು ಕೊಡುವುದು.

ಕೃಷಿ ಮತ್ತು ಗ್ರಾಮೀಣ ಬೆಳವಣಿಗೆ ಬಗೆಗಿನ ವ್ಯಾಪಕ ಅಧಿಕಾರಗಳನ್ನು ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ವರ್ಗಾಯಿಸುವುದು; ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವುದು.

ಡಬ್ಲ್ಯೂಟಿಒ ಸಂಬಂಧಿತ ವಿಷಯಗಳ ಬಗ್ಗೆ ದ್ವಂದ್ವ ನೀತಿ; ಕೃಷಿ ಒಪ್ಪಂದದ ಅಸಮಾನತೆ ಹೆಚ್ಚಿನ ಮತ್ತು ಅನ್ಯಾಯವಾದ ಅಂಶಗಳನ್ನು ತೆಗೆದುಹಾಕಲು ಎಲ್ಲಾ ಬಡದೇಶಗಳನ್ನು ಅಣಿನೆರೆಸಲು ಪ್ರಯತ್ನಿಸಲು ಭಾರತ ಸರ್ಕಾರದ ಮೇಲೆ ಒತ್ತಡ ಹೇರುವುದು.

ಹಣಾಹಣಿಯ ಉಪಚುನಾವಣೆಗಳು


ಬಿಜೆಪಿ ಸೋಲಿಸಲು ಮತ್ತೊಂದು ಅವಕಾಶ

ಕರ್ನಾಟಕದಲ್ಲೀಗ ಚುನಾವಣೆಗಳ ಸರಣಿ. ಗ್ರಾಮ ಪಂಚಾಯತ್ ಚುನಾವಣೆಗಳು ಮುಗಿದು ನೂತನ ಪಂಚಾಯತ್‌ಗಳು ಕಾರ್ಯಾರಂಭ ಮಾಡಿದವು. ಇನ್ನು ತಾಲ್ಲೂಕು ಪಂಚಾಯತ್- ಜಿಲ್ಲಾ ಪಂಚಾಯತ್ ಚುನಾವಣೆಗಳು ಜೂನ್‌ನಲ್ಲಿ ಮುಗಿದು ಜುಲೈನಲ್ಲಿ ಹೊಸ ಪಂಚಾಯತ್ ರಚನೆಯಾಗುವ ಪ್ರಕ್ರಿಯೆ ಕ್ಷೇತ್ರಗಳ ಸ್ಥಾನ ಮೀಸಲಾತಿ ಪ್ರಕಟಣೆಯೊಂದಿಗೆ ಆರಂಭಗೊಂಡಿದೆ. ಈ ನಡುವೆ ಘೋಷಿತವಾದ ಎರಡು ಕ್ಷೇತ್ರಗಳ ಉಪ ಚುನಾವಣೆಗಳ ಪ್ರಕ್ರಿಯೆ ಏರಿಸಿರುವ ಕಾವು ಬಿಸಿಲಿನ ತಾಪವನ್ನು ನಾಚಿಸುವಂತಿದೆ!

ಜೂನ್ 2 ರ ಶಿವಮೊಗ್ಗ, ಚಾಮರಾಜಪೇಟೆ ಉಪ ಚುನಾವಣೆಯಲ್ಲಿ ಬಿಜೆಪಿಯನ್ನು ಯಾಕೆ ಸೋಲಿಸಲೇಬೇಕು? ಜಾತಿ-ಹಣದ ಹಣಾಹಣಿ ನಡುವೆ ರಾಜಕೀಯ ನೀತಿಗಳು ಹೂತುಹೋಗಬಾರದು....

ಸಮರಸ್ವರೂಪ - ಪ್ರಚಾರ

ಶಿವಮೊಗ್ಗ ಲೋಕಸಭೆ ಹಾಗೂ ಬೆಂಗಳೂರಿನ ಚಾಮರಾಜ ಪೇಟೆ ವಿಧಾನಸಭೆಗೆ ಜೂನ್ 2 ರಂದು ಮತದಾನ. ಕೇದ್ರದಲ್ಲಾಗಲೀ, ರಾಜ್ಯದಲ್ಲಾಗಲೀ ಅಧಿಕಾರರೂಢ ಸರ್ಕಾರದ ಮೇಲೆ ಸಂಖ್ಯಾ ದೃಷ್ಟಿಯ ಅಂತಹ ಗಂಭೀರ ಪರಿಣಾಮವನ್ನೇನೂ ಉಂಟು ಮಾಡುವುದಿಲ್ಲವಾದರೂ ಫಲಿತಾಂಶವು ರಾಜಕೀಯ ಪರಿಣಾಮಗಳ ಬಗ್ಗೆ ಕುತೂಹಲ ಕೆರಳಿಸಿವೆ. ಅಭ್ಯರ್ಥಿಗಳು - ಆಯಾ ಪಕ್ಷಗಳ ನಾಯಕರು ಕೆಕ್ಕರಗೊಂಡು ಚುನಾವಣೆಯ ಪ್ರಚಾರಕ್ಕಿಳಿದಿರುವುದು, ಮತದಾರರನ್ನು ಸೆಳೆಯಲು ನಡೆಸಿರುವ ಕಸರತ್ತುಗಳು ಚುನಾವಣೆಯನ್ನು ಸಮರ ಸ್ವರೂಪಕ್ಕೆ ತಿರುಸಿದೆ. ಎಲ್ಲರಲ್ಲೂ ಗೆಲ್ಲುವ ಪ್ರಬಲ



ಬಯಕೆ, ಆದರೆ ಸಲ್ಲುವುದು ಒಂದು ಅಭ್ಯರ್ಥಿಗೆ ಮಾತ್ರವಲ್ಲವೇ? ಹೀಗಾಗಿ ಸ್ಪರ್ಧೆಯ ಹಣಾಹಣಿ. ಇದು ನಾಮಪತ್ರ ಸಲ್ಲಿಸುವ ಪ್ರಕ್ರಿಯಯೆಯಿಂದನಿತ್ಯವೂ ನಡೆದಿದೆ.

2004 ರ ಸಾರ್ವತ್ರಿಕ ಚುನಾವಣೆಯಲ್ಲಿ ಶಿವಮೊಗ್ಗ ಲೋಕಸಭಾಕ್ಷೇತ್ರದಿಂದ ಬಿಜೆಪಿ ಸಾವಿರಾರು ಜನರನ್ನು ಜಮಾಯಿಸಿ ಷೋ ತೋರಿಸಿತು. ಬಂಗಾರಪ್ಪ ಏನು ಎಂದು ಸಾಬೀತು ಪಡಿಸಿದ್ದು 25,000 ಕ್ಕೂ ಹೆಚ್ಚಿನ ಜನರನ್ನು ನೆರೆಸಿದಾಗಲೇ ಹೀಗೆ ಹಣ, ಜನ ಪ್ರದರ್ಶನವಿದ್ದೇ ಇದೆ. ಎಸ್.ಬಂಗಾರಪ್ಪ ಗೆದ್ದಿದ್ದು ಬಿಜೆಪಿ ಪಕ್ಷದಿಂದ. ಹಿಂದೆ ಆಯ್ಕೆಯಾಗಿದ್ದವರೂ ಅವರೇ ಆಗ ಕಾಂಗ್ರೆಸ್‌ನಿಂದ. 'ಭಾರತ ಪ್ರಕಾಶಿಸುತ್ತಿದೆ', 'ವಾಜಪೇಯಿಯೇ ಪ್ರಧಾನಿ' ಎಂಬಂತಹ ಕಣ್ಣು ಕೋರೈಸುವ ಘೋಷಣೆಗಳಿಗೆ ಮರುಳಾಗಿದ್ದು, ತನ್ನಂತಹ ನಾಯಕ ಬಿಜೆಪಿ ಪ್ರವೇಶಿಸುವುದರಿಂದ ಬಿಜೆಪಿಯೂ ಜಯಭೇರಿ ಹೊಡೆಯಬಹುದೆಂಬ ಲೆಕ್ಕಾಚಾರದಿಂದ' ಕೇಂದ್ರದಲ್ಲಿ ಮಂತ್ರಿ, ಇತ್ಯಾದಿ ಸ್ಥಾನಗಳ ನಿರೀಕ್ಷೆಯಿಂದ ಕಾಂಗ್ರೆಸ್ ತೊರೆದಿದ್ದರು ಬಂಗಾರಪ್ಪ. ಆಗ ಬಿಜೆಪಿ ಪಕ್ಷಕ್ಕೆ ಸೇರಿಕೊಳ್ಳುವಾಗ ರಾಜ್ಯ-ರಾಷ್ಟ್ರದ ನಾಯಕರು ನೀಡಿದ ಆಮಿಷ- [illegible] ಈಡೇರದೆ, ಬಿಜೆಪಿಯ

ಕಾರ್ಯವೈಖರಿ-ನಾಯಕರ ಮೇಲಾಟ -ಬಡಿದಾಟಗಳು' ಮತ್ತೆ ವಿವಿಧ ರಾಜ್ಯಗಳು ಹಾಗೂಉಪ ಚುನಾವಣೆಗಳಲ್ಲಿ ನೆಲಕಚ್ಚುತ್ತಿದ್ದ ರೀತಿಯಿಂದ ಭ್ರಮನಿರಸನಗೊಂಡ ಈ ಮಾಜಿ ಮುಖ್ಯಮಂತ್ರಿ ಪಕ್ಷ ತೊರೆಯುವುದಾಗಿ ಪ್ರಕಟಿಸಿದರು. ಕೊನೆಗೆ ಮುಲಾಯಂ ಸಿಂಗ್ ರ ಸಮಾಜವಾದಿ ಪಕ್ಷ ಸೇರಿಕೊಂಡರು. ಬಿಜೆಪಿ ಎಂ.ಪಿ.ಯಾಗಿದ್ದ ಬಂಗಾರಪ್ಪನವರು ಸಂಸತ್ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದ್ದಾಯಿತು.

ಹುಟ್ಟೂರು ಜಿಲ್ಲೆ ಮಂಡ್ಯದಿಂದ ಆಯ್ಕೆಯಾಗುವ ಬಗ್ಗೆ ಅನುಮಾನವಿದ್ದ ಅಂದಿನ ಮುಖ್ಯಮಂತ್ರಿ ಕೃಷ್ಣರವರು ಮೊನ್ನಿನ ಸಾರ್ವತ್ರಿಕ ಚುನಾವಣೆಯಲ್ಲಿ ಚಾಮರಾಜ ಪೇಟೆಯನ್ನು ಆರಿಸಿಕೊಂಡರು. ಹಿಂದೆ ಶಾಸಕರಾಗಿದ್ದ ಕಾಂಗ್ರೆಸ್‌ನ ದೇವರಾಜ್ ಕೃಷ್ಣರಿಗಾಗಿ ಸ್ಥಾನ 'ತ್ಯಾಗ' ಮಾಡಿದ್ದರು! ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅಧಿಕಾರ ಹಂಚಿಕೆಯ ಒಪ್ಪಂದದಂತೆ ಕೃಷ್ಣರವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ಮುಂಬೈಗೆ ಹೋದರು. ಆಗ ರಾಜ್ಯಪಾಲರ ಹುದ್ದೆ 'ಅಲಂಕರಿ'ಸುವ ಎರಡು ದಿನಗಳು ಮೊದಲು ಶಾಸಕತ್ವಕ್ಕೆ ರಾಜೀನಾಮೆ ನೀಡಿದ್ದರು. ಇವೆರೆಡೂ ಕ್ಷೇತ್ರಗಳೂ ಮಾಜಿ ಮುಖ್ಯಮಂತ್ರಿಗಳಿಂದ ತೆರವಾದ ಕ್ಷೇತ್ರಗಳು.

ಎಸ್.ವೈ.ಗುರುಶಾಂತ್


ಶತಾಯ ಗತಾಯ ಯತ್ನ

ಶಿವಮೊಗ್ಗ ಕ್ಷೇತ್ರವನ್ನು ಬಿಜೆಪಿ ಕೈಯಿಂದ ಕಿತ್ತುಕೊಳ್ಳಲು ಕಾಂಗ್ರೆಸ್ ತೀವ್ರ ಪ್ರಯತ್ನದಲ್ಲಿದ್ದರೆ, ಇಬ್ಬರಿಗೂ ಸಿಗದಂತೆ ಮತ್ತೆ ತಮ್ಮ ಪಾಲಿಗೆ ದಕ್ಕಿಸಿಕೊಳ್ಳಲು ಬಂಗಾರಪ್ಪ ಶತಾಯ ಗತಾಯ ಯತ್ನಕ್ಕೆ ಇಳಿದಿದ್ದಾರೆ. ಇವರಿಗೆ ಪಕ್ಷಕ್ಕಿಂತ ವೈಯಕ್ತಿಕ ಪ್ರಭಾವ- ಸಂಬಂಧಗಳೇ ಪ್ರಧಾನ ಆಧಾರವಾಗಿರುವುದು ಕಾಣುತ್ತದೆ. ಕಾಂಗ್ರೆಸ್ ಆಯನೂರು ಮಂಜುನಾಥ್ ರವರನ್ನು ಅಭ್ಯರ್ಥಿಯನ್ನಾಗಿಸಿದೆ. ಬಿಜೆಪಿ ಆರ್‌ಎಸ್‌ಎಸ್ ಕಟ್ಟಾಳು ಭಾನು ಪ್ರಕಾಶರನ್ನು ಅಭ್ಯರ್ಥಿ ಯಾಗಿಸಿದೆ. ಜೆಡಿ(ಎಸ್) ಹಿರಿಯ ರಾಜಕಾರಣಿ ತಿಮ್ಮಪ್ಪ ಹೆಗಡೆಯವರನ್ನು ಅಭ್ಯರ್ಥಿಯಾಗಿಸಿದೆ. ಚಾಮರಾಜಪೇಟೆಯಲ್ಲಿ ಕಾಂಗ್ರೆಸ್‌ಗೆ ಮತ್ತೆ ದೇವರಾಜ್, ಬಿಜೆಪಿಗೆ ಪ್ರಮೀಳಾ ನೇಸರ್ಗಿ, ಅಲ್ಲದೇ ಜೆಡಿ(ಎಸ್), ಸಮಾಜವಾದಿ ಪಕ್ಷವೂ ಅಭ್ಯರ್ಥಿಯನ್ನು ನಿಲ್ಲಿಸಿದೆ.

ನೀತಿಯನ್ನಲ್ಲ ಜಾತಿಯನ್ನು

ಈ ಎರಡೂ ಕ್ಷೇತ್ರಗಳಲ್ಲಿಯೂ ಬಹುತೇಕ ಎಲ್ಲಾ ಪಕ್ಷಗಳ ಅಭ್ಯರ್ಥಿಗಳು ಗೆಲುವಿನ ಲೆಕ್ಕಾಚಾರದಲ್ಲಿ ಬಹಳಷ್ಟು ಆಧರಿಸಿರುವುದು ನೀತಿಯನ್ನಲ್ಲ - ಜಾತಿಯನ್ನೇ. ಶಿವಮೊಗ್ಗಕ್ಕೆ ಭೇಟಿ ನೀಡಿದಾಗ ಅಲ್ಲಿ ಮಾತನಾಡಿದ ಬಹಳಷ್ಟು ಮತದಾರರು ಒಬ್ಬೊಬ್ಬರ ಗೆಲುವು-ಸೋಲಿಗೆ ಜಾತಿಗಳ ಬಲಾಬಲ-ಜಾತಿಗಳ ಸಮೀಕರಣವನ್ನೇ ಹೇಳುತ್ತಿದ್ದರು.

ಅಭ್ಯರ್ಥಿಗಳು ಪ್ರಬಲ ಜಾತಿಗಳಲ್ಲಿ [illegible] ತಾಳಿರುವುದು, ಅದಕ್ಕೆ ಇನ್ನೊಂದು ಜಾತಿ [illegible] ಗೆಲುವು ತಪ್ಪದೇ ಎಂದು [illegible] ಕ್ಷೇತ್ರದಲ್ಲಿ ಲಿಂಗಾಯತರು, ಬ್ರಾಹ್ಮಣರು, ಈಡಿಗರು ಒಂದುವರೆ ಲಕ್ಷ ಸಂಖ್ಯೆಯಲ್ಲಿ ಮೀರಿದವರಿದ್ದು ಇನ್ನೊಂದು ಜಾತಿಯನ್ನು ಸೇರಿಸಿಕೊಳ್ಳಲು ಹವಣಿಸುತ್ತಿದ್ದಾರಂತೆ. ಇವರಲ್ಲಿ ಯಾರಾದರೂ ಗೆದ್ದರೆ ಅಥವಾಸೋತರೆ ಕೊನೆಗೆ ದೂರಬಹುದಾದ್ದು ಅಲ್ಪಸಂಖ್ಯಾತ ಮುಸ್ಲಿಂರನ್ನು. ಯಾಕೆಂದರೆ ಇವರ ಮತಗಳು ಯಾರಿಗೆ ಹೋಗುತ್ತೆ ಅವರೇ ಗೆಲ್ಲುವುದು ಎಂಬ ಪ್ರಚಾರ ಎಲ್ಲೆಡೆಯಂತೆ ಇಲ್ಲೂ ಇದೆ. ಇದು ಪೂರ್ಣ ಸತ್ಯವಲ್ಲ. ಇತರ ಮತದಾರರಂತೆ ಇವರು ಎಂಬುದು ಹಲವು ಚುನಾವಣೆಗಳಲ್ಲಿ ಸ್ಪಷ್ಟವಿದೆ. ಯಾವುದೇ ಜಾತಿಗಳಲ್ಲಿನ ಜನ ತಮ್ಮದೇ ಜಾತಿ ಕುರಿತೇ ಆಲೋಚಿಸುತ್ತಾರೆ ಎಂಬುದು ತಪ್ಪು. ಅವರ ಬೆಂಬಲ ಗಳಿಸಲು ಜಾತಿವಾದವನ್ನು ಉದ್ರೇಕಗೊಳಿಸುವುದೇ ಕ್ಷೇತ್ರದಲ್ಲಿ ಅಂತಹ ಅಭ್ಯರ್ಥಿಗಳ - ಪಕ್ಷದ ಸಾಧನೆ ಯಾಗಿದೆ! ಚುನಾವಣೆಯಲ್ಲಿ ಅದರಲ್ಲೂ ಶಿವಮೊಗ್ಗದಂತಹ ಕೃಷಿ ಪ್ರದಾನವಾದ ಜಿಲ್ಲೆಯಲ್ಲಿ, ತೀವ್ರ ಬಿಕ್ಕಟ್ಟು ಅನುಭವಿಸುತ್ತಾ, ರೈತ ಉರುಳಿಗೆ ಕೊರಳು ಒಡ್ಡಿದ, ವಿಷ ಸೇವಿಸಿ ಆತ್ಮಹತ್ಯೆಗೀಡಾದ, ಬೆಲೆ ಕಾಣದೆ ನೆಲೆ ತಪ್ಪಿದ, ಕೈಗಾರಿಕೆ ಕುಸಿಯುತ್ತಿರುವ, ಗಂಭೀರವಾದ ಸಮಸ್ಯೆಗಳಿರುವಲ್ಲಿ ಇಂತಹ ಪ್ರಶ್ನೆಗಳು ಚುನಾವಣೆಯ ಕೇಂದ್ರ ವಿಷಯಗಳಾಗುತ್ತಿಲ್ಲ. ಇದನ್ನೇ ಎಲ್ಲರೂ ಮರೆಸುತ್ತಿರುವುದು ಈ ನೀತಿಗಳನ್ನು ಬೆಂಬಲಿಸುತ್ತಿರುವುದರಿಂದಲೇ. ಇಂತಹವರು ಸಂಸತ್ತಿನಲ್ಲಿ ಏನು ಧ್ವನಿ ಎತ್ತಿಯಾರು?



ಸ್ಥಿತಿ ಹೀಗೆ ಮೇಲ್ನೋಟಕ್ಕೆ ಕಾಣುತ್ತಿದ್ದರೂ ಆಯ್ಕೆಯಾಗುವ ಅಭ್ಯರ್ಥಿ, ಜನರನ್ನು ಪ್ರತಿನಿಧಿಸುವ ಪಕ್ಷ ಪ್ರಸಕ್ತ ರಾಜಕೀಯ ಸಂದರ್ಭದಲ್ಲಿ ವಹಿಸುವ ಪಾತ್ರವು ಮುಖ್ಯವಾದುದು.

ಸಂಘಪರಿವಾರದ ಆವುಟಗಳು

ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬರನ್ನುಳಿದು ಬಹುತೇಕ ಶಾಸಕರೂ ಬಿಜೆಪಿಯವರೇ. ಲೋಕಸಭೆಗೂ ಹಿಂದೆ ಅಭ್ಯರ್ಥಿ ಗೆದ್ದು, ಬಿಜೆಪಿಗೆ ಹೊಸ ಶಕ್ತಿ ನೀಡಿದಂತಾಗಿತ್ತು. ಜನರಲಿದ್ದ ಕಾಂಗ್ರೆಸ್ ವಿರೋಧಿ ಮನೋಭಾವ, ಇನ್ನೊಂದು ಜಾತ್ಯತೀತ ಪರ್ಯಾಯವಿಲ್ಲದ ಸಂದರ್ಭವನ್ನು ಬಿಜೆಪಿ ಕೋಮುವಾದಿ ರಾಜಕಾರಣದಿಂದ ಬಳಸಿತು.



ಈ ರಾಜಕೀಯ ಬಲ ಬಳಸಿ ಶಿವಮೊಗ್ಗ, ಸಾಗರ, ತೀರ್ಥಹಳ್ಳಿ, ಭದ್ರಾವತಿ ಮುಂತಾದೆಡೆ ಕೋಮುಗಲಭೆಗಳನ್ನೆಬ್ಬಿಸುವ ಮೂಲಕ (ಎನ್‌ಡಿಎ [illegible] ಜೊತೆಗೆ 'ಕರಸೇವಕ'ರನ್ನು ಚಿಕ್ಕಮಗಳೂರಿಗೆ ಜಮಾಯಿಸಲಾಗುತ್ತಿದ್ದುದ್ದು ಶಿವಮೊಗ್ಗದಿಂದಲೇ. ಯಡಿಯೂರಪ್ಪ, ಶಂಕರಮೂರ್ತಿಯಂತಹ ನಾಮಕಾವಸ್ಥೆ 'ಅಧಿಕೃತ ವಿರೋಧ' ಪಕ್ಷದ ನಾಯಕರ ಹೋರಾಟಕ್ಕೆ ನೆಲೆಯೂ ಇದೆ ಆಗಿದೆ ಹೀಗಾಗಿ ರಾಜ್ಯದ ರಾಜಕಾರಣದಲ್ಲಿ ಕೋಮುವಾದಿಗಳ ನೆಲೆಯನ್ನು ಅಲುಗಾಡಿಸುವುದು, ಅಲ್ಲಿಂದ ಬೇರು ಕೀಳುವಂತಾಗುವುದು ಅತೀ ಅಗತ್ಯವಿದೆ. ಆದ್ದರಿಂದಲೇ ಈ ಚುನಾವಣೆಯಲ್ಲಿ ಕೋಮುವಾದೀ ಬಿಜೆಪಿಯನ್ನು ಸೋಲಿಸುವುದು ಅತೀ ಅಗತ್ಯವಿದೆ.

ಚಾಮರಾಜಪೇಟೆಯಲ್ಲಿಯೂ ಬಿಜೆಪಿ ಕೃತ್ಯಗಳು ಸ್ವಾಸ್ಥ್ಯಕ್ಕೆ ಜನರ ಒಗ್ಗಟ್ಟಿಗೆ ಭಂಗ ತಂದಿದೆ. ಆದ್ದರಿಂದ ಇಲ್ಲೂ ಬಿಜೆಪಿ ಸೋಲುವುದು ಅತ್ಯಗತ್ಯ.

ಬಿಜೆಪಿ ಸೋಲಲೇಬೇಕು

ಈ ಎರಡೂ ಕ್ಷೇತ್ರಗಳ ಫಲಿತಾಂಶಗಳು ತಕ್ಷಣವೇ ಸರ್ಕಾರಗಳ ಮೇಲೆ ಗಂಭೀರ ಪರಿಣಾಮ ಬೀರುವುದಿಲ್ಲ. ನಿಜ, ಆದರೆ ಬೀದರ್ ಲೋಕಸಭಾ ಸ್ಥಾನದಲ್ಲಿ ಬಿಜೆಪಿ ಸೋತಂತೆ ಇಲ್ಲಿಯೂ ಸೋತರೆ ರಾಷ್ಟ್ರಮಟ್ಟದಲ್ಲಿ ಹಿಂದುತ್ವ ಅಜೆಂಡಾವನ್ನೇ ಹಿಡಿದು ಹೊರಟಿರುವ, ಜನರ ತೀರ್ಪಿಗೆ ಅವಮಾನ ಮಾಡುತ್ತಾ, ಪ್ರಜಾಪ್ರಭುತ್ವ ವಿರೋಧಿಯಾಗಿರುವ ಭ್ರಷ್ಟ ಬಿಜೆಪಿ-ಎನ್‌ಡಿಎ ಕೂಟಕ್ಕೆ ಇದು ಜನತೆ ಕೊಡುವ ಮತ್ತೊಂದು ಪ್ರಹಾರವಾಗುತ್ತದೆ.

ರಾಜ್ಯದಲ್ಲಿಯೂ ಜನತೆ ಕೋಮುವಾದೀ ಶಕ್ತಿಗಳಿಗೆ ಮಣೆ ಹಾಕುವುದಿಲ್ಲ, ನೆಲೆಗೊಡುವುದಿಲ್ಲ, ದೇಶದ್ರೋಹಿ-ಜನದ್ರೋಹಿ ಬಿಜೆಪಿ-ಎನ್‌ಡಿಎ ಮೈತ್ರಿಕೂಟದ ವಿರುದ್ಧ ಮತದಾರರ ಆಕ್ರೋಶ- ರಾಜಕೀಯ ಪ್ರಜ್ಞಾವಂತಿಕೆ ಮಂಕಾಗಿಲ್ಲ ಎಂಬ ಸ್ಪಷ್ಟ ಸಂದೇಶ ಹೋಗುತ್ತದೆ.

ಈ ದಿಕ್ಕಿನಲ್ಲಿ ಸೆಕ್ಯುಲರ್ ಶಕ್ತಿಗಳು ಯೋಚಿಸಿ ಕಾರ್ಯವೆಸಗಬೇಕಿದೆ. ಉಪ ಚುನಾವಣೆಗಳಿಂದ [illegible] ನಿರ್ಲಕ್ಷಿಸುವಂತಿಲ್ಲ. ಆದ್ದರಿಂದ ಕೋಮುವಾದಿ ಬಿಜೆಪಿ ಸೋಲಿಸುವುದರತ್ತ ಲಕ್ಷ್ಯವಿರಬೇಕು.

ಶೇಷಪ್ಪ ಹತ್ಯೆಗೆ ಸಿಪಿಐ(ಎಂ) ಖಂಡನೆ

ಚಿಕ್ಕಮಗಳೂರು ಜಿಲ್ಲೆಯ ಮೆಣಸಿನ [illegible] ನಿರ್ದೇಶಕನಾದ ಶೇಷಪ್ಪನವರನ್ನು [illegible] ನಕ್ಸಲೀಯರ ಕೃತ್ಯವನ್ನು ಭಾರತ [illegible] ಕಾರ್ಯದರ್ಶಿ ಮಂಡಳಿಯು ಖಂಡಿಸಿದೆ

ಇಂತಹ ವೈಯಕ್ತಿಕ ಕೊಲೆಗಳನ್ನು ತಡೆಯಲು ಸರ್ಕಾರ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ

ಯುಪಿಎ ಸರ್ಕಾರದ ಒಂದು ವರುಷ ಮೌಲ್ಯಮಾಪನ - ಸಾಗಬೇಕಾದ ಹಾದಿ ಏನು?


ಕೇಂದ್ರದಲ್ಲಿನ ಯುಪಿಎ ಸರಕಾರದ ಒಂದು ವರ್ಷದ ಆಳ್ವಿಕೆಯ ಪರಾಮರ್ಶೆ ನಡೆಸಿದೆ. ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಳಲ್ಲಿ, ವಿದೇಶಾಂಗ ವಲಯದಲ್ಲಿ ಅದು ಕೈಗೊಂಡ ಕೆಲವು ಕ್ರಮಗಳನ್ನು ಪ್ರಶಂಸಿಸುತ್ತಾ, ಆದರೆ ಒಟ್ಟಾರೆಯಾಗಿ ಯುಪಿಎ ಸರಕಾರ ವಿದೇಶಿ ಹಣಕಾಸು ಬಂಡವಾಳ ಮತ್ತು ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳಿಗೆ ಅನುಗುಣವಾದ ಕ್ರಮಗಳನ್ನು ಹೇಗಾದರೂ ತರುವಲ್ಲಿ ಆತುರವನ್ನು ತೋರಿಸುತ್ತಾ, ಅತ್ತ ಕೋಟ್ಯಾಂತರ ರೈತರು, ಕಾರ್ಮಿಕರು ಮತ್ತು ಇತರ ಶ್ರಮಜೀವಿ ವಿಭಾಗಗಳಿಗೆ ಪರಿಹಾರ ಒದಗಿಸಬಹುದಾದ, ಅವರ ಬದುಕಿಗೆ ಆಸರೆ ನೀಡಬಹುದಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ನಿರಾಸಕ್ತಿಯನ್ನು ತೋರಿಸಿದೆ. ಮುಂಬರುವ ದಿನಗಳಲ್ಲಿ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿನ ಜನಪರ ಕ್ರಮಗಳು ಜ್ಯಾರಿಯಾಗುವಂತೆ ಯುಪಿಎ ಸರಕಾರ ನೋಡಿಕೊಳ್ಳಬೇಕಾಗಿದೆ ಹಾಗೂ ಬಿಜೆಪಿ ನೇತೃತ್ವದ ಸರಕಾರಕ್ಕಿಂತ ಭಿನ್ನವಾದ ಒಂದು ಹಾದಿಯನ್ನು ಹಿಡಿಯುಬೇಕಾಗಿದೆ.

ಯುಪಿಎ ಸರಕಾರ ಮೇ 22, 2005 ರಂದು ಅಧಿಕಾರ ವಹಿಸಿ ಒಂದು ವರ್ಷವನ್ನು ಪೂರ್ಣಗೊಳ್ಳುತ್ತಿದೆ. ಯುಪಿಎ ಸರಕಾರ ಮೇ 2004ರಲ್ಲಿ ನಡೆದ 14ನೇ ಲೋಕಸಭಾ ಚುನಾವಣೆಗಳಲ್ಲಿ ಜನತೆ ಬಿಜೆಪಿ ನೇತೃತ್ವದ ಸರಕಾರವನ್ನು ತಿರಸ್ಕರಿಸಿದ ನಂತರ ಅಧಿಕಾರ ವಹಿಸಿಕೊಂಡಿತು. ಭಾರತದ ಜನತೆ ಜಾತ್ಯಾತೀತ ನೀತಿಯನ್ನು ಎತ್ತಿ ಹಿಡಿಯುವ, ಕೋಮುವಾದವನ್ನು ತಿರಸ್ಕರಿಸುವ ಹಾಗೂ ಬಿಜೆಪಿ ಆಳ್ವಿಕೆಯ ಆರು ವರ್ಷಗಳಲ್ಲಿ ಬೆಳವಣಿಗೆಯ ಪ್ರಯೋಜನಗಳಿಂದ ವಂಚಿಸಲಾದ ಕೋಟ್ಯಾಂತರ ಜನಗಳ ಅಗತ್ಯಗಳನ್ನು ಪೂರೈಸುವ ಅಭಿವೃದ್ಧಿ ದಾರಿಯನ್ನು ಹಿಡಿಯುವ ಒಂದು ಸರಕಾರಕ್ಕಾಗಿ ಮತ ನೀಡಿದ್ದಾರೆ. ವಿಶ್ವವ್ಯವಹಾರಗಳಲ್ಲಿ ಭಾರತ ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಮಣಿಯದೆ ನಮ್ಮ ಪಾರಂಪರಿಕ ಅಲಿಪ್ತ ನೀತಿಗೆ ಅನುಗುಣವಾಗಿ ಒಂದು ಸ್ವತಂತ್ರ ಪಾತ್ರವನ್ನು ವಹಿಸಬೇಕು ಎಂದು ಅವರು ಬಯಸಿದರು.

ಯುಪಿಎ ಒಂದು ಸಮಾನ ಕನಿಷ್ಟ ಕಾರ್ಯಕ್ರಮ (ಸಿಎಂಪಿ)ಯನ್ನು ಅಂಗೀಕರಿಸಿತು. ಸಿಪಿಐ(ಎಂ) ಮತ್ತು ಕಾಂಗ್ರೆಸ್ ನಡುವೆ ಧೋರಣೆಗಳ ವಿಷಯಗಳಲ್ಲಿ ಮೂಲಭೂತ ಭಿನ್ನಾಭಿಪ್ರಾಯಗಳಿವೆ. ಇವು ವಿಭಿನ್ನ ವರ್ಗ ದೃಷ್ಟಿಕೋನಗಳಿಂದ ಹೊಮ್ಮುವ ಭಿನ್ನಾಭಿಪ್ರಾಯಗಳು. ಅದೇನೇ ಇದ್ದರೂ, ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ಕಾರ್ಯಕ್ರಮದ ಕೆಲವು ಅಂಶಗಳ ಬಗ್ಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಲೇ ಅದನ್ನು ಅನುಮೋದಿಸಿದವು. ಸಿಎಂಪಿಯಲ್ಲಿನ ಜನ-ಪರ ಕ್ರಮಗಳನ್ನು ಯುಪಿಎ ಜ್ಯಾರಿಗೆ ತಂದರೆ ಹಾಗೂ ಬಿಜೆಪಿ ನೇತೃತ್ವದ ಸರಕಾರದ ಕಂಟಕಕಾರೀ ನೀತಿಗಳನ್ನು ಸರಿಪಡಿಸಲು ಸಾಧ್ಯ ಎಂಬುದು ನಮ್ಮ ದೃಷ್ಟಿಯಾಗಿತ್ತು.

ಯುಪಿಎ ಸರಕಾರ ಪ್ರಜಾಪ್ರಭುತ್ವ ಹಕ್ಕುಗಳನ್ನು ಬಲಪಡಿಸಲು ಅಗತ್ಯವಾದ ಕೆಲವು ಕ್ರಮಗಳನ್ನು ಕೈಗೊಂಡಿದೆ. ಪೋಟಾ ಕಾಯ್ದೆಯನ್ನು ಅದು ರದ್ದುಪಡಿಸಿದೆ, ಮಾಹಿತಿ ಹಕ್ಕು ಕಾನೂನನ್ನು ಅಂಗೀಕರಿಸಿದೆ. ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಸೇರಿಸಿದ ಕೋಮುವಿಷವನ್ನು ತೆಗೆಯಲು ಮತ್ತು ಬಿಜೆಪಿ ನೇತೃತ್ವದ ಸರಕಾರ ರದ್ದು ಮಾಡಿದ ಇತಿಹಾಸದ ಪಠ್ಯಪುಸ್ತಕಗಳನ್ನು ಮತ್ತೆ ತರಲು ಕೆಲವು ಕ್ರಮಗಳನ್ನು ಸರಕಾರ ಕೈಗೊಂಡಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅಲ್ಪಸಂಖ್ಯಾತರಲ್ಲಿ ಹೆಚ್ಚಿನ ಸುರಕ್ಷಿತತೆಯ ಭಾವನೆಯಿದೆ. ಸಾಮಾಜಿಕ ವಲಯದಲ್ಲಿ ಮಾಡುವ ಖರ್ಚು ಈಗಲೂ ಅಗತ್ಯಕ್ಕಿಂತ ಬಹಳ ಕಮ್ಮಿಯೇ ಇದ್ದರೂ ಹಿಂದಿನದಕ್ಕಿಂತ ಹೆಚ್ಚಿದೆ. 'ಪ್ರಾಥಮಿಕ ಶಿಕ್ಷಣ ಕೋಶ'ಕ್ಕೆ ಹೋಗಬೇಕಾದ ಶೇಕಡಾ 2 ಶಿಕ್ಷಣ ಸುಂಕ ಇನ್ನು ರಚನೆಗೊಂಡಿರದಿದ್ದರೂ ಶಿಕ್ಷಣದ ಬಜೆಟ್ಟಿಗೆ ಹೆಚ್ಚಿನ ಹಣ ದೊರೆತಿದೆ. ಮಧ್ಯಾಹ್ನದ ಊಟದ ಯೋಜನೆ ಮತ್ತು ಅಂಗನವಾಡಿ ನೌಕರರ ಕಾರ್ಯಕ್ರಮದ ವಿಸ್ತರಣೆಯಾಗಿದೆ.

> ***ಕೇಂದ್ರದಲ್ಲಿ ಸಂಯುಕ್ತ ಪ್ರಗತಿಪರ ರಂಗದ ಸರ್ಕಾರ ರಚನೆಯಾಗಿ ಒಂದು ವರುಷವಾಗುತ್ತಿದೆ. ಈ ಸರ್ಕಾರ ರಚನೆಯ ಹಾಗೂ ಆ ಸಂದರ್ಭದಲ್ಲಿನ ಉದ್ದೇಶ ಹಾಗೂ ಜನತೆ ನೀಡಿದ ತೀರ್ಪು, ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಿದೆಯೇ? ಈ ಸಂದರ್ಭದಲ್ಲಿ ವಸ್ತುನಿಷ್ಠ ಮೌಲ್ಯಮಾಪನ***



ಗ್ರಾಮೀಣ ಉದ್ಯೋಗ ಭರವಸೆ ಮಸೂದೆಯನ್ನು ಬಿಜೆಪಿಯ ಬಹಿಷ್ಕಾರದಿಂದಾಗಿ ಸಂಸತ್ತಿನಲ್ಲಿ ಕೈಗೆತ್ತಿಕೊಳ್ಳಲಾಗಿಲ್ಲ. ಇದೊಂದು ಮಹತ್ವದ ಶಾಸನ. ಆದರೆ ಈ ಮಸೂದೆ ಸಿಎಂಪಿಯಲ್ಲಿ ನೀಡಿದ ಮೂಲಭರವಸೆಯ ಕೆಲವು ಮುಖ್ಯ ಅಂಶಗಳನ್ನು ದುರ್ಬಲಗೊಳಿಸಿದೆ. ಅದನ್ನು ಅಂಗೀಕರಿಸುವ ಮೊದಲು ಬಲಗೊಳಿಸಬೇಕಾಗಿದೆ. ನವೆಂಬರ್ 2004ರಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಆರಂಭಿಸಲಾಯಿತು. ಇದರಲ್ಲಿನ ಹಣ ಮತ್ತು ಆಹಾರಧಾನ್ಯಗಳನ್ನು ಸೂಕ್ತರೀತಿಯಲ್ಲಿ ಬಳಸಲಾಗುತ್ತಿದೆಯೇ ಎಂಬ ಬಗ್ಗೆ ಉಸ್ತುವಾರಿ ಅಗತ್ಯ.

ಕೃಷಿಯ ಹೂಡಿಕೆಗಳಲ್ಲಿ ಗಮನಾರ್ಹ ಹೆಚ್ಚಳವೇನೂ ಆಗಿಲ್ಲ. ಗ್ರಾಮೀಣ ಸಾಲ ನೀಡಿಕೆಯಲ್ಲಿ ಹೆಚ್ಚಳ ಆಗಬೇಕಾಗಿದೆ. ಮಹಿಳಾ ಮೀಸಲಾತಿ ಮಸೂದೆಗೆ ಆದ್ಯತೆ ನೀಡಬೇಕಾಗಿದೆ. ಯುಪಿಎ ಅದನ್ನು ಮಂಡಿಸಲು ತನ್ನ ಎಲ್ಲಾ ಭಾಗೀದಾರರ ಬೆಂಬಲವನ್ನು ಪಡೆಯಬೇಕು.

ವಿದೇಶಾಂಗ ನೀತಿಯ ವಲಯದಲ್ಲಿ, ಯುಪಿಎ ಸರಕಾರ ಪಾಕಿಸ್ತಾನದೊಡನೆ ಇನ್ನಷ್ಟು ಮಾತುಕತೆಗಳಿಗೆ, ವಿಶ್ವಾಸ ಕುದುರಿಸುವ ಕ್ರಮಗಳನ್ನು ಆರಂಭಿಸಲು ಹಾಗೂ ಎರಡೂ ದೇಶಗಳ ಜನಗಳ ನಡುವಿನ ಸಂಪರ್ಕಗಳನ್ನು ಪ್ರೋತ್ಸಾಹಿಸಲು ಪ್ರಶಂಸಾರ್ಹ ಕ್ರಮಗಳನ್ನು ಕೈಗೊಂಡಿದೆ. ಚೀನಾ ಪ್ರಧಾನಮಂತ್ರಿ ವೆನ್ ಜಿಯಾಬೋರವರ ಭೇಟಿ ಭಾರತ-ಚೀನಾ ಸಂಬಂಧಗಳನ್ನು ಮೇಲಟ್ಟಕ್ಕೆ ಒಯ್ದಿದೆ. ಭಾರತ ಸರಕಾರ ಭಾರತ, ರಶ್ಯಾ ಮತ್ತು ಚೀನಾದ ನಡುವೆ ತ್ರಿಪಕ್ಷೀಯ ಸಹಕಾರವನ್ನು ಬೆಳೆಸಲು ಕೆಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೆ ವಾಜಪೇಯಿ ಸರಕಾರ ಅಮೇರಿಕಾದೊಂದಿಗೆ ನಿಕಟ ಸಾಮರಿಕ ಭದ್ರತೆ ಮತ್ತು ಮಿಲಿಟರಿ ಸಹಕಾರವನ್ನು ಹೆಚ್ಚಿಸುವಲ್ಲಿ ಕೈಗೊಂಡ ಹಾನಿಕಾರಕ ಕ್ರಮಗಳನ್ನು ರದ್ದುಮಾಡಲು ಯುಪಿಎ ಸರಕಾರ ಹಿಂದೇಟು ಹಾಕುತ್ತಿದೆ. ಅದು ವಿಮರ್ಶೆಯನ್ನೇನೂ ಮಾಡದೆ ಇಸ್ರೇಲ್ ಮಿಲಿಟರಿ ಸಾಧನಗಳ ಒಂದು ಪ್ರಮುಖ ಪೂರೈಕೆದಾರ ಎಂದು ಈಗಲೂ ಕಾಣುತ್ತಿದೆ; ಅದರಿಂದ ಅರಬ್ ಜಗತ್ತಿನಲ್ಲಿ ಹಾಗೂ ಪ್ಯಾಲೆಸ್ಟೇನ್ ಗುರಿಸಾಧನೆಗೆ ಸಂಬಂಧಪಟ್ಟಂತೆ ಭಾರತದ ಸ್ಥಾನಮಾನಕ್ಕೆ ಎಂತಹ ಹಾನಿಯುಂಟಾಗುತ್ತಿದೆ ಎಂದು ಕಾಣುತ್ತಿಲ್ಲ.

ಸಿಪಿಐ(ಎಂ)ನ ಒಂದು ಮೂಲಭೂತ ಆತಂಕವೆಂದರೆ ಯುಪಿಎ ಸರಕಾರದ ಈ ಒಂದು ವರ್ಷದಲ್ಲಿ ನಮ್ಮ ದೇಶದ ಬಡವಿಭಾಗಗಳ ವಿಶಾಲ ಸಮೂಹಗಳ ಅಗತ್ಯಗಳನ್ನು ಪರಿಶೀಲಿಸುವ ಒಂದಾದರೂ ಶಾಸನವನ್ನು ಸಂಸತ್ತಿನಲ್ಲಿ ಮಂಡಿತವಾಗಿಲ್ಲ ಎಂಬ ಸಂಗತಿ. ನಿಜ, ಬಿಜೆಪಿ ಮೈತ್ರಿಕೂಟದ ವಿಚ್ಛಿದ್ರಕಾರಿ ಪಾತ್ರ ಸಂಸತ್ತಿನ ಕೆಲಸವನ್ನು ಪ್ರತಿಬಂಧಿಸಿದೆ. ಆದರೂ ಸರಕಾರ ನವ - ಉದಾರವಾದಿ ಚೌಕಟ್ಟಿನೊಳಗಿನ ನೀತಿಗಳನ್ನು ಮುಂದೊತ್ತಲು ಎಷ್ಟು ಚುರುಕಾಗಿ ಶಾಸನಗಳನ್ನು ಮಂಡಿಸಿತೋ, ತದ್ವಿರುದ್ಧವಾಗಿ ಜನಗಳ ಮೂಲ ಅಗತ್ಯಗಳನ್ನು ಪರಿಶೀಲಿಸುವಲ್ಲಿ ಅದರ ವಿಫಲತೆ ಕಳವಳಕಾರಿ.

ನಮ್ಮ ಜನಸಮೂಹಗಳಿಗೆ ಒಂದು ನಿರ್ಣಾಯಕವಾದ, ಕೆಲವೊಮ್ಮೆ ಸಾವು ಬದುಕಿನ ನಡುವಿನ ವ್ಯತ್ಯಾಸದ ಪ್ರಶ್ನೆಯೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮತ್ತು ಅಗ್ಗದ ಆಹಾರಧಾನ್ಯಗಳನ್ನು ಪಡೆಯುವ ಪ್ರಶ್ನೆ. ಎನ್‌ಡಿಎ ಆಳ್ವಿಕೆಯಲ್ಲಿ ಈ ವ್ಯವಸ್ಥೆಯ ಕುಸಿತವನ್ನು ಸರಿಪಡಿಸುವ ಭರವಸೆ ಸಿಎಂಪಿಯಲ್ಲಿದ್ದರೂ ಈ ಬಗ್ಗೆ ಏನನ್ನು ಮಾಡಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ತೆಯನ್ನು ಸಾರ್ವತ್ರಿಕಗೊಳಿಸುವ ಮತ್ತು ರೇಶನ್ ವ್ಯವಸ್ಥೆಯಲ್ಲಿ ಆಹಾರಧಾನ್ಯಗಳ ಬೆಲೆಗಳನ್ನು ಇಳಿಸುವತ್ತ ಯಾವುದೇ ಹೆಜ್ಜೆಯಿಟ್ಟಿಲ್ಲ.

ಸಿಎಂಪಿಯಲ್ಲಿ ದುಡಿಯುವ ಜನಗಳಿಗೆ ಆಶ್ವಾಸನೆ ನೀಡದಿದ್ದರೂ ಇದುವರೆಗೂ ಜಾರಿಯಾಗದೆ ಉಳಿದಿರುವ ಮುಖ್ಯ ಪ್ರಶ್ನೆಗಳೆಂದರೆ ಅಸಂಘಟಿತ ಕಾರ್ಮಿಕರಿಗೆ ಶಾಸನ, ಕೃಷಿ ಕಾರ್ಮಿಕರಿಗೆ ಶಾಸನ ಹಾಗೂ ಎಲ್ಲಕ್ಕೂ ಮುಖ್ಯವಾಗಿ ಭೂಸುಧಾರಣೆಯ ಬಗ್ಗೆ ನೀಡಿದ ಭರವಸೆಯ ಜಾರಿಯ ಬಗ್ಗೆ ಯಾವುದೇ ಕಾಳಜಿಯ ಅಭಾವ. ಸರಕಾರ ಪೆನ್ಶನ್ ಫಂಡ್‌ಗಳ ಖಾಸಗೀಕರಣವನ್ನು ಹೇಗಾದರೂ ಮಾಡಲು ಪ್ರಯತ್ನಿಸುತ್ತಿದೆ. ಎನ್‌ಡಿಎ ಸರಕಾರ ಅಂಗೀಕರಿಸಿದ ವಿದ್ಯುಚ್ಛಕ್ತಿ ಕಾನೂನು 2003ನ್ನು ಪರಾಮರ್ಶಿಸಲು ನಿರಾಕರಿಸುತ್ತಿರುವುದರಿಂದಾಗಿ ಖಾಸಗೀಕರಣದಿಂದ ಹೆಚ್ಚಿನ ದರಗಳನ್ನು ತೆರಬೇಕಾಗಿ ಬಂದಿರುವ ಬಳಕೆದಾರರ ನಡುವೆ ಹಾಗೂ ಈ ವಲಯದ ಕಾರ್ಮಿಕರು ಮತ್ತು ನೌಕರರ ನಡುವೆಯೂ ವ್ಯಾಪಕ ಅಸಂತೃಪ್ತಿ ಉಂಟಾಗುತ್ತಿದೆ.

ಆತಂಕದ ಒಂದು ಪ್ರಮುಖ ಅಂಶವೆಂದರೆ ಕೆಲವು ಸೂಕ್ಷ್ಮ ವಲಯಗಳಲ್ಲಿ ವಿದೇಶೀ ನೇರ ಹೂಡಿಕೆಯ (ಎಫ್‌ಡಿಐ) ಬಗ್ಗೆ ಸರಕಾರದ ನಿಲುವು. ಸರಕಾರ ಖಾಸಗೀ ಭಾರತೀಯ ಬ್ಯಾಂಕುಗಳಲ್ಲಿ 74 ಶೇಕಡಾ ಎಫ್‌ಡಿಐ ಹಾಗೂ ಗಣಿಗಾರಿಕೆ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ಬಗ್ಗೆ ಪ್ರಕಟಿಸಿದೆ. ಇದಕ್ಕೆ ಮೊದಲು ಟೆಲಿಕಾಂ ವಲಯದಲ್ಲಿ ಎಫ್‌ಡಿಐನ್ನು 74 ಶೇಕಡಕ್ಕೆ ಏರಿಸಲಾಯಿತು. ಇಂತಹ ಕ್ರಮಗಳು ರಾಷ್ಟ್ರೀಯ ಸಾರ್ವಭೌಮತೆಯನ್ನು ಕುಂಠಿತಗೊಳಿಸುತ್ತವೆ ಹಾಗೂ ಚಿಲ್ಲರೆ ವ್ಯಾಪಾರದ ಸಂದರ್ಭದಲ್ಲಿ ಉದ್ಯೋಗಾವಕಾಶಗಳಲ್ಲಿ ದೊಡ್ಡ ನಷ್ಟ ಉಂಟು ಮಾಡಿ ಲಕ್ಷಾಂತರ ಸಣ್ಣ ವ್ಯಾಪಾರಿಗಳು ಮತ್ತು ಅಂಗಡಿ ವಹಿವಾಟುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.


ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಸತತ ಬೆಲೆಯೇರಿಕೆಗಳು ಜನಸಾಮಾನ್ಯರ ಮೇಲೆ ಹೊರೆ ಹಾಕುತ್ತಿವೆ. ಅವು ಹಣದುಬ್ಬರಕ್ಕೆ. ತುಪ್ಪ ಸುರಿಯುತ್ತವೆ. ಈ ಸನ್ನಿವೇಶವನ್ನು ಎದುರಿಸಲು ಸಿಪಿಐ(ಎಂ) ಮುಂದಿರುವ ಪ್ರಸ್ತಾವಗಳಿಗೆ ಯುಪಿಎ ಸರಕಾರ ಗಮನ ನೀಡಬೇಕು.

ಒಟ್ಟಾರೆಯಾಗಿ ಯುಪಿಎ ಸರಕಾರ ವಿದೇಶೀ ಹಣಕಾಸು ಬಂಡವಾಳ ಮತ್ತು ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳಿಗೆ ಅನುಗುಣವಾದ ಕ್ರಮಗಳನ್ನು ಹೇಗಾದರೂ ತರುವಲ್ಲಿ ಆತುರವನ್ನು ತೋರುತ್ತಾ, ಅತ್ತ ಕೋಟ್ಯಾಂತರ ರೈತರು, ಕಾರ್ಮಿಕರು ಮತ್ತು ಇತರ ಶ್ರಮಜೀವಿ ವಿಭಾಗಗಳಿಗೆ ಪರಿಹಾರ ಒದಗಿಸಬಹುದಾದ, ಅವರ ಬದುಕಿಗೆ ಆಸರೆ ನೀಡಬಲ್ಲ ಕ್ರಮಗಳನ್ನು ಕೈಗೆತ್ತಿಕೊಳ್ಳುವಲ್ಲಿ ನಿರಾಸಕ್ತಿಯನ್ನು ತೋರಿಸಿದೆ.

ಯುಪಿಎ ಸರಕಾರ ಅಪಕೀರ್ತಿಗೊಳಗಾದ ಹಿಂದಿನ ಧೋರಣೆಗಳಿಂದ ತನ್ನನ್ನು ದೂರವಿರಿಸಿಕೊಳ್ಳುವ ಅಗತ್ಯದ ಬಗ್ಗೆ ಸಾಕಷ್ಟು ಕಾಳಜಿ ವಹಿಸುತ್ತಿಲ್ಲ. ನವ ಉದಾರವಾದಿ ಸುಧಾರಣೆಗಳು ಮಾತ್ರವೇ ದೇಶವನ್ನು ಮುಂದೊಯ್ಯಬಲ್ಲ ದಾರಿ ಎಂದು ನಂಬಿರುವ ವಿಚಾರದ ಮತ್ತು ಸಿಬ್ಬಂದಿಯ ಒಂದು ವ್ಯವಸ್ಥೆ ಬೇರುಬಿಟ್ಟಿದೆ. ಸಿಪಿಐ(ಎಂ) ಈ ನಿಲುವಿಗೆ ಸವಾಲು ಹಾಕುತ್ತದೆ ಹಾಗೂ **ಪರ್ಯಾಯ ನೀತಿಗಳನ್ನು ಮುಂದಿಡುವುದನ್ನು ಮತ್ತು ಅವುಗಳ ಅಂಗೀಕಾರಕ್ಕಾಗಿ ಜನಗಳನ್ನು ಅಣಿನೆರೆಸುವುದನ್ನು ಮುಂದುವರೆಸುತ್ತದೆ.**

ಎಡಪಕ್ಷಗಳ ದೃಢ ನಿಲುವು ಮತ್ತು ಒತ್ತಡದಿಂದಾಗಿ ನೌಕರರ ಭವಿಷ್ಯನಿಧಿಯ ಬಡ್ಡಿದರವನ್ನು ಮತ್ತೆ 9.5ಕ್ಕೆ ತರಲಾಯಿತು.

ಪುಟ 16 ಕ್ಕೆ



ಗ್ರಾಮೀಣ ಸಾಲದ ಸಮಸ್ಯೆ

ಗ್ರಾಮೀಣ ಕುಟುಂಬಗಳಿಗೆ ಬೇರೆ ಬೇರೆ ಕಾರಣಗಳಿಗಾಗಿ ಸಾಲ ಬೇಕಾಗುತ್ತದೆ. ಒಂದು ರೈತ ಕುಟುಂಬಕ್ಕೆ ಬೀಜ, ಗೊಬ್ಬರ, ಕ್ರಿಮಿನಾಶಕದಂತಹ ಕೃಷಿ ಲಾಗವಾಡುಗಳನ್ನು ಕೊಂಡುಕೊಳ್ಳಲು ಅಲ್ಪಾವಧಿಯ (ದುಡಿಯುವ ಬಂಡವಾಳ) ಸಾಲ ಬೇಕಾಗುತ್ತದೆ, ಮಾತ್ರವಲ್ಲ ಕೃಷಿಯಲ್ಲಿ ದೀರ್ಘಾವಧಿ ಹೂಡಿಕೆಗಾಗಿ ಸಾಲದ ಸೌಲಭ್ಯ ಬೇಕಾಗುತ್ತದೆ. ಕೃಷಿ ಆದಾಯ ಸೀಸನಲ್ ಆಗಿರುವುದರಿಂದ ಕೃಷಿಯಿಂದ ಆದಾಯ ಬರುವವರೆಗಿನ ಅವಧಿಯ ಖರ್ಚುವೆಚ್ಚಗಳನ್ನು ಸರಿದೂಗಿಸಲು ಸಾಲ ಮಾಡಬೇಕಾಗುತ್ತದೆ. ಉಚಿತ ಶಿಕ್ಷಣ ವ್ಯವಸ್ಥೆ, ಉಚಿತ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಬಲಿಷ್ಠವಾದ ಸಾರ್ವಜನಿಕ ವಿತರಣಾ ವ್ಯವಸ್ಥೆ ಇಲ್ಲದಿರುವ ಈ ನಮ್ಮ ಸಮಾಜದಲ್ಲಿ ಮಕ್ಕಳ ಶಿಕ್ಷಣಕ್ಕಾಗಿ, ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚಗಳಿಗಾಗಿ, ಮನೆಕಟ್ಟುವುದಕ್ಕಾಗಿ ಮಾತ್ರವಲ್ಲ ಹೊಟ್ಟೆಗೆ ಹಿಟ್ಟು ಕೊಂಡುಕೊಳ್ಳುವುದಕ್ಕಾಗಿಯೂ ಸಾಲ ಮಾಡಬೇಕಾದ ಪರಿಸ್ಥಿತಿ ಇದೆ. ಮದುವೆ ಮುಂಜಿಯಂತಹ ಸಾಮಾಜಿಕ ಕಾರ್ಯಕ್ರಮಗಳಿಗಾಗಿ ಹಾಗೂ ಹಬ್ಬ ಹರಿದಿನಗಳಲ್ಲಿ ಮಾಡಲಾಗುತ್ತಿರುವ ಆಚರಣೆಗಳಿಗಾಗಿ ಸಾಲ ಮಾಡಬೇಕಾಗುತ್ತದೆ. ಗ್ರಾಮೀಣ ಕುಟುಂಬಗಳ, ಅದರಲ್ಲೂ ಮುಖ್ಯವಾಗಿ ಬಡಕುಟುಂಬಗಳ ಇಂತಹ ಸಹಜ ಆವಶ್ಯಕತೆಗಳನ್ನು ಪೂರೈಸಲು ಸುಲಭ ಬಡ್ಡಿ ದರಗಳಲ್ಲಿ ಸಾಲವನ್ನು ಒದಗಿಸುವ ವ್ಯವಸ್ಥೆ ಇರಬೇಕಾದ್ದು ನ್ಯಾಯವಾಗಿದೆ. ಗ್ರಾಮೀಣ ಕುಟುಂಬಗಳಿಗೆ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಸಾಂಸ್ಥಿಕಸಾಲ ಸುಲಭವಾಗಿ ದೊರೆಯುದಿದ್ದಾಗ ಗ್ರಾಮೀಣ ಜನತೆ ಅನಿವಾರ್ಯವಾಗಿ ಲೇವಾದೇವಿಗಾರರನ್ನು ಅವಲಂಬಿಸಬೇಕಾಗುತ್ತದೆ. ಯಾವದೇ ಕಾನೂನಿನ ನಿಯಂತ್ರಣವಿಲ್ಲದ ಈ ಲೇವಾದೇವಿಗಾರರು ಹೇರುವ ದುಬಾರಿ ಬಡ್ಡಿ ದರಗಳಿಂದಾಗಿ, ವಸೂಲಿಗಾಗಿ ಅನುಸರಿಸುವ ಅಮಾನವೀಯ ಕ್ರಮಗಳಿಂದಾಗಿ ಗ್ರಾಮೀಣ ಕುಟುಂಬಗಳು ತಮ್ಮ ಹೊಲ ಮನೆಗಳನ್ನು ಕಳೆದುಕೊಂಡು ಭಿಕ್ಷೆ ಬೇಡುವಂತಾದ ಉದಾಹರಣೆಗಳು ಗ್ರಾಮೀಣ ಭಾರತದಲ್ಲಿ ಸಾಮಾನ್ಯವಾಗಿವೆ.

ಗ್ರಾಮೀಣ ಸಾಲದ ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು, ಸ್ವಾತಂತ್ರ್ಯಾ ನಂತರ ಗ್ರಾಮೀಣ ಸಾಲ ನೀತಿಯನ್ನು ರೂಪಿಸಲಾಗಿತ್ತು, ಈ ಸಾಲ ನೀತಿಯ ಮುಖ್ಯ ಉದ್ದೇಶವು, ರಿಸರ್ವ್ ಬ್ಯಾಂಕಿನ (1996) ಗವರ್ನರ್ ರಂಗರಾಜನ್ ಅವರ ಮಾತುಗಳಲ್ಲೇ ಹೇಳುವುದಾದರೆ, ಗ್ರಾಮೀಣ ಜನತೆಯ ಆದಷ್ಟು ದೊಡ್ಡ ವಿಭಾಗಕ್ಕೆ ಸಾಕಷ್ಟು ಹಾಗೂ ಸಕಾಲಿಕ ಸಾಲವನ್ನು ನ್ಯಾಯವಾದ ಬಡ್ಡಿ ದರಗಳಲ್ಲಿ ಒದಗಿಸುವುದು ಆಗಿತ್ತು. ಈ ಉದ್ದೇಶದ ಜಾರಿಗಾಗಿ, ಸಾಲ ಒದಗಿಸುವ ಸಂಸ್ಥೆಗಳನ್ನು ವಿಸ್ತರಿಸುವುದು, ನೇರವಾಗಿ ಸಾಲ ಒದಗಿಸುವುದು ಮತ್ತು ಸಬ್ಸಿಡಿ ಸಹಿತದ ಸಾಲ ನೀಡುವುದು ಮೊದಲಾದ ಕ್ರಮಗಳನ್ನು ಕೈಗೊಳ್ಳಲಾಯಿತು. ಗ್ರಾಮೀಣ ಸಾಲ ಮಾರುಕಟ್ಟೆಯಿಂದ ಖಾಸಗಿ ಲೇವಾದೇವಿಗಾರರನ್ನು ಹೊರತಳ್ಳುವುದು ಈ ನೀತಿಯ ಉದ್ದೇಶವಾಗಿತ್ತು.

ಬ್ಯಾಂಕುಗಳ ರಾಷ್ಟ್ರೀಕರಣ

1969 ರಲ್ಲಿ 14 ಪ್ರಮುಖ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣದಿಂದಾಗಿ ಗ್ರಾಮೀಣ ಸಾಲ ನೀತಿಗೆ ಭಾರೀ ಬಲ ಬಂದಂತಾಯಿತು. ಇದು 'ಹಸಿರು ಕ್ರಾಂತಿ'ಯ ಆರಂಭದ ಕಾಲವಾಗಿತ್ತು. ಗ್ರಾಮೀಣ ಪ್ರದೇಶದ ಶ್ರೀಮಂತ ರೈತರಿಗೆ ಸಾಲ ಸೌಲಭ್ಯ ಒದಗಿಸುವುದು ಬ್ಯಾಂಕುಗಳ ರಾಷ್ಟ್ರೀಕರಣದ ಉದ್ದೇಶಗಳಲ್ಲಿ ಒಂದಾಗಿತ್ತು, ಇದರಿಂದಾಗಿ ವಾಣಿಜ್ಯ ಬ್ಯಾಂಕುಗಳ ಗುರಿ ಹಾಗೂ ಕಾರ್ಯಾಚರಣೆಯಲ್ಲಿ ಗಣನೀಯ ಬದಲಾವಣೆ ಬರುವಂತಾಯಿತು. ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಣಿಜ್ಯ ಬ್ಯಾಂಕುಗಳ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಶಾಖೆಗಳ ಹಾಗೂ ಸಹಕಾರಿ ಸಂಸ್ಥೆಗಳ ಸ್ಥಾಪನೆಯಾಯಿತು. ಕೃಷಿ ಹಾಗೂ ಕೃಷಿ ಸಂಬಂದಿತ ಚಟುವಟಿಕೆಗಳು ಹಾಗೂ ಸಣ್ಣ ಹಾಗೂ ಗೃಹ ಕೈಗಾರಿಕೆಗಳನ್ನು ಆಧ್ಯತೆಯ ಕ್ಷೇತ್ರಗಳೆಂದು ಪರಿಗಣಿಸಿ ವಾಣಿಜ್ಯ ಬ್ಯಾಂಕುಗಳು ಈ ಕ್ಷೇತ್ರಗಳಿಗೆ ಶೇ.40 ರಷ್ಟು ಮುಂಗಡವನ್ನು ಒದಗಿಸಬೇಕೆಂಬ ಗುರಿಯನ್ನು ನೀಡಲಾಯಿತು.

ಗ್ರಾಮೀಣ ಕುಟುಂಬಗಳ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಸಾಂಸ್ಥಿಕಸಾಲ ಸುಲಭವಾಗಿ ದೊರೆಯುದಿದ್ದಾಗ ಗ್ರಾಮೀಣ ಜನತೆ ಅನಿವಾರ್ಯವಾಗಿ ಲೇವಾದೇವಿಗಾರರನ್ನು ಅವಲಂಬಿಸಬೇಕಾಗುತ್ತದೆ. ಯಾವದೇ ಕಾನೂನಿನ ನಿಯಂತ್ರಣವಿಲ್ಲದ ಈ ಲೇವಾದೇವಿಗಾರರು ಹೇರುವ ದುಬಾರಿ ಬಡ್ಡಿ ದರಗಳಿಂದಾಗಿ, ವಸೂಲಿಗಾಗಿ ಅನುಸರಿಸುವ ಅಮಾನವೀಯ ಕ್ರಮಗಳಿಂದಾಗಿ ಗ್ರಾಮೀಣ ಕುಟುಂಬಗಳು ತಮ್ಮ ಹೊಲ ಮನೆಗಳನ್ನು ಕಳೆದುಕೊಂಡು ಭಿಕ್ಷೆ ಬೇಡುವಂತಾದ ಉದಾಹರಣೆಗಳು ಗ್ರಾಮೀಣ ಭಾರತದಲ್ಲಿ ಸಾಮಾನ್ಯವಾಗಿವೆ.

1970 ರಿಂದ 1980 ರ ನಡುವಿನ ಅವಧಿಯಲ್ಲಿ ಗ್ರಾಮೀಣ ಉದ್ಯೋಗ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಲಾಯಿತು. ಐಆರ್‌ಡಿಪಿ ಯೋಜನೆಯ ಮೂಲಕ ಗ್ರಾಮೀಣ ಉದ್ಯೋಗ ಹಾಗೂ ಸ್ವಯಂ ಉದ್ಯೋಗ ಕಾರ್ಯಕ್ರಮಗಳಿಗಾಗಿ ಸಬ್ಸಿಡಿ ಸಹಿತದ ಸಾಲವನ್ನು ಒದಗಿಸಲಾಯಿತು. ಈ ಅವಧಿಯಲ್ಲಿ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆ ವಿಸ್ತಾರಗೊಂಡಿತು. ಆದರೆ ಭೂ ಸುಧಾರಣಾ ಕ್ರಮಗಳ ಕೊರತೆಯಿಂದಾಗಿ ಬರಲಿಲ್ಲ.

ಉದಾರೀಕರಣದ ಯುಗದಲ್ಲಿ :

1991 ರಲ್ಲಿ ಭಾರತ ಸರ್ಕಾರ ಉದಾರೀಕರಣದ ದೋರಣೆಗಳನ್ನು ಅಂಗೀಕರಿಸುವುದರೊಂದಿಗೆ ಇದುವರೆಗಿನ ಗ್ರಾಮೀಣ ಸಾಲ ನೀತಿ ಸಂಪೂರ್ಣವಾಗಿ ಬದಲಾಯಿತು. ರೈತ ಪರ ನೀತಿಯ ಬದಲಾಗಿ ಮಾರುಕಟ್ಟೆ -ಪರ, ಲಾಭ ಆಧಾರಿತ ನೀತಿ ಆರಂಭವಾಯಿತು. ಇದರ ಪರಿಣಾಮವಾಗಿ ಗ್ರಾಮೀಣ ಸಾಲ ಮುಖ್ಯವಾಗಿ ಕೃಷಿ ಸಾಲವನ್ನು ಗಣನೀಯವಾಗಿ ಕಡಿತಮಾಡಲಾಯಿತು. ಗ್ರಾಮೀಣ ಸಾಲ ಠೇವಣಿ ಅನುಪಾತ ಶೇಕಡಾ 51.04 ರಿಂದ ಶೇಕಡಾ 31.95 ಕ್ಕೆ ಇಳಿಯಿತು. ಗ್ರಾಮೀಣ ಪ್ರದೇಶದಲ್ಲಿದ್ದ ವಾಣಿಜ್ಯ ಬ್ಯಾಂಕುಗಳ ಸಾವಿರಾರು ಶಾಖೆಗಳಲ್ಲಿ ಮುಚ್ಚಲ್ಪಟ್ಟವು.

ಗ್ರಾಮೀಣ ಶಾಖೆಗಳು ನೀಡಿದ ಸಾಲದ ಪ್ರಮಾಣವು ಶೇ. 15(1990) ರಿಂದ ಶೇ. 10(2002) ಕ್ಕೆ ಇಳಿಯಿತು

ಗ್ರಾಮೀಣ ಸಾಲ ನೀತಿಯಲ್ಲಿ ಆದ ಅವರ ಈ ಹಠಾತ್ ಬದಲಾವಣೆಯಿಂದಾಗಿ ಗ್ರಾಮೀಣ ಲೇವಾದೇವಿಗಾರರು ಮತ್ತೆ ಎದ್ದು ಕುಳಿತರು. ಅವರ ಕಪಿಮುಷ್ಠಿ ಇನ್ನಷ್ಟು ಭದ್ರವಾಯಿತು. ರೈತರು ಹಾಗೂ ಗ್ರಾಮೀಣ ಜನತೆ ಅನಿವಾರ್ಯವಾಗಿ ಇವರನ್ನೇ ಅವಲಂಬಿಸುವಂತಾಯಿತು. ಬೆಳೆಹಾನಿ, ಬೆಲೆ ಕುಸಿತದಿಂದಾಗಿ ಸಾಲ ತೀರಿಸಲಾಗದ ರೈತರು ಸಾಲು ಸಾಲಾಗಿ ಆತ್ಮಹತ್ಯೆ ಮಾಡಿಕೊಂಡರು.

ಉದಾರೀಕರಣ ನೀತಿಗಳನ್ನು ಜಾರಿಗೆ ತಂದು ಗ್ರಾಮೀಣ ಪ್ರದೇಶಗಳಿಗೆ ಸಂಕಷ್ಟಗಳನ್ನು ಹರಿಸಿದ



ಕಾಂಗ್ರೆಸ್ ಸರ್ಕಾರದ ದೋರಣೆಗಳನ್ನೇ 1998 ರ ನಂತರ ಬಿಜೆಪಿ ಸರ್ಕಾರ ಮುಂದುವರೆಸುತ್ತಾ ಹೋದುದರ ಪರಿಣಾಮವಾಗಿ ದೇಶದ ವಿವಿಧ ಭಾಗಗಳಲ್ಲಿ ಸಾವಿರರು ರೈತರು ಆತ್ಮಹತ್ಯೆ ಮಾಡಿಕೊಂಡರು. ರೈತರ ಭಾಷೆಯಲ್ಲೇ ಹೇಳುವುದಾದರೆ, ಬಿಜೆಪಿಗೆ ರೈತರ ಶಾಪ ತಟ್ಟಿತು. 2004 ಚುನಾವಣೆಯಲ್ಲಿ ಗ್ರಾಮೀಣ ಜನತೆ ಬಿಜೆಪಿಯನ್ನು ಕಸ ಗುಡಿಸಿದಂತೆ ಗುಡಿಸಿ ತಿಪ್ಪೆಗೆ ಹಾಕಿದರು.

ಯು.ಪಿ.ಎ. ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ

2004 ರ ಜನಾದೇಶವನ್ನು ಗಮನದಲ್ಲಿಟ್ಟುಕೊಂಡು, ಮತ್ತು ಮುಖ್ಯವಾಗಿ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುತ್ತಿರುವ ಎಡ ಪಕ್ಷಗಳ ಸಲಹೆಗಳನ್ನು ಒಪ್ಪಿಕೊಂಡು ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರವು ಅಂಗೀಕರಿಸಿದ ಸಾಮಾನ್ಯ ಕನಿಷ್ಠ ಕಾರ್ಯ ಕ್ರಮದಲ್ಲಿ ಗ್ರಾಮೀಣ ಸಾಲನೀತಿಗೆ ವಿಶೇಷ ಆಧ್ಯತೆ ನೀಡಲಾಗಿದೆ. ಗ್ರಾಮೀಣ ಸಹಕಾರಿ ಸಾಲ ವ್ಯವಸ್ಥೆಯನ್ನು ಬಲಪಡಿಸುವುದು, ಮೂರು ವರ್ಷಗಳಲ್ಲಿ ಗ್ರಾಮೀಣ ಸಾಲದ ಹರಿವನ್ನು ದ್ವಿಗುಣಗೊಳಿಸುವುದು, ಗ್ರಾಮೀಣ ಸಾಲ ವಿತರಣಾ ವ್ಯವಸ್ಥೆಯನ್ನು ಪುನರ್ ಪರಶೀಲಿಸುವುದು ಮೊದಲಾದ ಭರವಸೆಗಳನ್ನು ನೀಡಲಾಗಿದೆ ಅಲ್ಲದೆ ಕೇಂದ್ರ ಬಜೆಟ್‌ಗಳನ್ನು ಅಗತ್ಯ ಹಣವನ್ನು ತೆಗೆದಿರಿಸಲಾಗಿದೆ.

ಈ ಭರವಸೆಗಳು, ಇನ್ನುಳಿದ ಭರವಸೆಗಳಂತೆ ತನ್ನಷ್ಟಕ್ಕೆ ಜಾರಿಯಾಗುವ ಸಾಧ್ಯತೆಯಿಲ್ಲ. ರೈತರ ಮತ್ತು ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುತ್ತಿರುವ ಸಂಘಟನೆಗಳು ಗ್ರಾಮೀಣ ಜನರನ್ನು ಸಂಘಟಿಸಿ ಭರವಸೆಗಳ ಜಾರಿಗಾಗಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ಕೃಷಿ ಕೂಲಿಕಾರರಿಗೆ ಗೃಹ ಬಳಕೆಗಾಗಿ ಹಾಗೂ ಹೈನುಗಾರಿಕೆಯಂತಹ ಉಪ ಕಸುಬುಗಳಿಗಾಗಿ ಬ್ಯಾಂಕುಗಳು ಸಾಲ ನೀಡುವಂತಾಗಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮುಚ್ಚಲಾದ ಬ್ಯಾಂಕ್ ಶಾಖೆಗಳನ್ನು ಪುನರಾರಂಭಿಸ ಬೇಕಾಗಿದೆ. ಆದ್ಯತೆಯ ಕ್ಷೇತ್ರಗಳಿಗೆ ಶೇ. 40 ರಷ್ಟು ಮತ್ತು ಕೃಷಿ ಕ್ಷೇತ್ರಕ್ಕೆ ಶೇ. 18 ರಷ್ಟು ಮುಂಗಡವನ್ನು ಒದಗಿಸುವ ನೀತಿಯನ್ನು ಪುನಃ ಜಾರಿಗೆ ತರಬೇಕು. ಬಡ್ಡಿ ದರಗಳನ್ನು ಶೇ .6ಕ್ಕೆ ಇಳಿಸಬೇಕು. ಸಹಕಾರಿ ಬ್ಯಾಂಕುಗಳನ್ನು ಬಲಪಡಿಸಬೇಕು. ಖಾಸಗಿ ಲೇವಾದೇವಿಗರರನ್ನು ನಿಯಂತ್ರಿಸಲು ದೃಢವಾದ ಕ್ರಮಗಳನ್ನು ಅನುಸರಿಸಬೇಕು.



ಕೋಲಾರದಲ್ಲಿ ಪ್ರಾಂತ ರೈತ ಸಂಘದ ಆಶ್ರಯದಲ್ಲಿ 'ಬ್ಯಾಂಕುಗಳ ಅಗತ್ಯ ಕೃಷಿ ಸಾಲ' ಕುರಿತ ಸಮಾವೇಶ ನಡೆಯಿತು. ಕೆನರಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಎಂ.ರತ್ನಾಕರ ಶೆಣೈ ಮಾತನಾಡಿದರು. ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಮುಖಂಡ ಜಿ.ಸಿ.ಬಯ್ಯಾರೆಡ್ಡಿ ಮೊದಲಾದವರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರವು ಅಸಲು ಸಂದಾಯ ಮಾಡುವ ರೈತರಿಗೆ ಬಡ್ಡಿ ಮನ್ನಾ ಸೌಲಭ್ಯವನ್ನು ಘೋಷಿಸಿದೆ. ಆದರೆ ಕಳೆದ ಮೂರು ನಾಲ್ಕು ವರ್ಷಗಳ ಸತತ ಬರಗಾಲ, ಬೆಳೆಹಾನಿ, ಬೆಲೆ ಕುಸಿತದಿಂದಾಗಿ ರೈತರು ಅಸಲನ್ನು ಸಂದಾಯ ಮಾಡುವ ಪರಿಸ್ಥಿತಿ ಇಲ್ಲ, ಆದ್ದರಿಂದ ಒಂದು ಸಲದ ಸೌಲಭ್ಯವಾಗಿ ಬಡ ರೈತರ ಸಾಲ- ಅಸಲು ಸಹಿತವಾಗಿ ಮನ್ನ ಮಾಡುವುದು ಅಗತ್ಯವಾಗಿದೆ.


ಗ್ರಾಮೀಣ ಸಾಲ ನೀತಿಗಾಗಿ ಹೋರಾಟ

ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟ ಎಲ್ಲಾ ಗ್ರಾಮೀಣ ಸಾಲ ನೀತಿಯ ಕುರಿತಾದ ಯು.ಪಿ.ಎ.ಸರ್ಕಾರದ ಭರವಸೆಗಳ ಜಾರಿಗಾಗಿ ದೇಶಾದ್ಯಂತ ಹೋರಾಟ ನಡೆಸಲು ಅಖಿಲ ಭಾರತ ಕಿಸಾನ್ ಸಭಾ ತನ್ನ ರಾಜ್ಯ ಘಟಕಗಳಿಗೆ ಕರೆ ನೀಡಿದೆ. ಅಖಿಲ ಭಾರತ ಕಿಸಾನ್ ಸಭಾಕ್ಕೆ ಸೇರಿರುವ ಕರ್ನಾಟಕ ಪ್ರಾಂತ ರೈತ ಸಂಘವು ಈ ಬ್ಯಾಂಕುಗಳಿಂದ ಅಗತ್ಯ ಕೃಷಿ ಸಾಲಕ್ಕಾಗಿ ರೈತರ ರಾಜ್ಯ ಮಟ್ಟದ ಸಮಾವೇಶವೊಂದನ್ನು ಎಪ್ರಿಲ್ 15 ರಂದು ಕೋಲಾರದಲ್ಲಿ ಏರ್ಪಡಿಸಿತ್ತು. ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ಅಧ್ಯಕ್ಷ ಎಂ. ರತ್ನಾಕರ್ ಶೆಣೈ ಅವರು "ಭಾರತ ಸರ್ಕಾರವು ವಿಶ್ವ ಬ್ಯಾಂಕ್ ಒತ್ತಡಗಳಿಗೆ ಮಣಿದು ಅನುಸರಿಸುತ್ತಿರುವ ಉದಾರೀಕರಣದ ಧೋರಣೆಗಳಿಂದಾಗಿ ಕೃಷಿ ಕ್ಷೇತ್ರಕ್ಕೆ ನೇರವಾಗಿ ಹೆಚ್ಚೆಚ್ಚು ಸಾಲವನ್ನು ನೀಡುವ ಬದಲು ಕೃಷಿ ಹೆಸರಿನಲ್ಲಿ ಶೀಥಲ ಕೇಂದ್ರಗಳಿಗೆ, ಫಾರಂಗಳಿಗೆ, ಹೂವಿನಂತಹ ಬೆಳೆಗಳನ್ನು ಬೆಳೆಯಲು ನೀಡುತ್ತಿದೆ" ಎಂದು ಆರೋಪಿಸಿದರು. ಕೃಷಿ ಕ್ಷೇತ್ರವನ್ನು ಪ್ರವೇಶಿಸಿರುವ ದೊಡ್ಡ ದೊಡ್ಡ ಕಂಪನಿಗಳು ಆದ್ಯತಾ ವಲಯಕ್ಕೆ ನೀಡಲಾಗುವ ಸಾಲವನ್ನು ಕಬಳಿಸುತ್ತಿವೆ ಎಂದ ಅವರು ಇದರಿಂದಾಗಿ ಬಡ ರೈತರಿಗೆ ಸಾಲ ಸಿಗದಂತಾಗಿದೆ ಎಂದರು. ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯರೆಡ್ಡಿಯವರು, 'ರೈತರು ಸಾಲ ವಾಪಸ್ ಮಾಡುವುದಿಲ್ಲ ಎಂಬ ನೆಪವೊಡ್ಡಿ ರೈತರಿಗೆ ಸಾಲ ನೀಡುವುದನ್ನು ಕಡಿಮೆ ಮಾಡಲಾಗುತ್ತಿದೆ' ಎಂದು ಹೇಳಿದರು. ಆದರೆ ವಾಸ್ತವಿಕವಾಗಿ ರೈತರಿಂದ ಬರಬೇಕಾದ ಬಾಕಿ ಕೇವಲ ಶೇ. 13 ರಷ್ಟಿದ್ದು ದೊಡ್ಡ ದೊಡ್ಡ ಬಂಡವಾಳಶಾಹಿ ಉದ್ಯಮಿಗಳಿಂದ ಬ್ಯಾಂಕುಗಳಿಗೆ ಕೋಟ್ಯಾಂತರ ರೂಪಾಯಿ ಬಾಕಿ ಇರುವುದನ್ನು ಮುಚ್ಚಿಡಲಾಗುತ್ತಿದೆ ಎಂದು ಹೇಳಿದರು. ರೈತರ ಫಸಲಿಗೆ ನ್ಯಾಯವಾದ ಬೆಲೆ ಸಿಗುವಂತಾದರೆ ಅವರು ಸಾಲಗಾರರಾಗಿ ಇರುವುದಿಲ್ಲ ಎಂದು ಹೇಳಿದರು. ಸಮಾವೇಶದ ಅಧ್ಯಕ್ಷತೆವಹಿಸಿದ್ದ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಅವರು ಮಾತನಾಡಿ ಕೃಷಿ ಕ್ಷೇತ್ರಕ್ಕೆ ಸಾರ್ವಜನಿಕ ಹೂಡಿಕೆಯನ್ನು ಕಡಿಮೆ ಮಾಡಿ ಬರಲಾಗುತ್ತಿರುವುದರಿಂದ ಬ್ಯಾಂಕುಗಳು ರೈತರಿಗೆ ಸಾಲ ನೀಡಲು ಹಿಂದೇಟು ಹಾಕುತ್ತಿವೆ. ಸರ್ಕಾರದ ಧೋರಣೆಗಳನ್ನು ರೈತರ ಪರವಾಗಿ ಬದಲಾಯಿಸುವಂತೆ ಬಲಿಷ್ಠವಾದ ಹೋರಾಟಗಳು ನಡೆಯಬೇಕಾಗಿದೆ ಎಂದು ಅವರು ಹೇಳಿದರು. ರೈತ ಮುಖಂಡರಾದ ಕೆ.ಎಂ.ವೆಂಕಟೇಶ್, ಎನ್.ವೆಂಕಟಾಚಲಯ್ಯ, ಪಿ.ಆರ್.ಸೂರ್ಯನಾರಾಯಣ, ಹೋಳೂರು ಶಂಕರ, ಉಮೇಶ್, ಜಿ.ಸಿದ್ದಗಂಗಪ್ಪ ಮತ್ತು ಮಾಜಿ ಶಾಸಕ ಸೂರಂ ರಾಮಯ್ಯ ಮೊದಲಾದವರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಮೇ ತಿಂಗಳಲ್ಲಿಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಗಳು ಜಂಟಿಯಾಗಿ ರಾಜ್ಯಾದ್ಯಂತ ನಡೆಸಿದ ಪ್ರಚಾರಾಂದೋಲನ ಮತ್ತು ತಾಲ್ಲೂಕು ಕಚೇರಿಗಳ ಮತ್ತಿಗೆ ಚಳುವಳಿಯಲ್ಲಿ ಗ್ರಾಮೀಣ ಸಾಲದ ಪ್ರಶ್ನೆಯನ್ನು ಪ್ರಮುಖವಾಗಿ ಎತ್ತಿಕೊಳ್ಳಲಾಗಿತ್ತು. ಈ ಹೋರಾಟವನ್ನು ಮುಂದಿನ ದಿನಗಳಲ್ಲಿ ಇನ್ನೂ ತೀವ್ರ ಗೊಳಿಸುವುದು ಅಗತ್ಯವಿದೆ.

- ನಿತ್ಯಾನಂದಸ್ವಾಮಿ

ಪೆಟ್ರೋಲಿಯಂ ದರ ಹೆಚ್ಚಳ ಬೇಡ ಸಿಪಿಐ(ಎಂ) ಆಗ್ರಹ



ದೇಶದ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಪೊಲಿಟ್‌ಬ್ಯೂರೋ ಚರ್ಚಿಸಿದ ಸಿಪಿಐ(ಎಂ)ನ ಪ್ರಮುಖ ವಿಶ್ಲೇಷಣೆ ಹಾಗೂ ನಿಲುವುಗಳು

ಜನಸಾಮಾನ್ಯರ ಮೇಲೆ ಹೊರೆ ಬೀಳುವುದನ್ನು ತಪ್ಪಿಸುವುದಕ್ಕಾಗಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಬಾರದೆಂದು ಸಿಪಿಐ(ಎಂ) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಮೇ 14 ಮತ್ತು 15 ರಂದು ನವದೆಹಲಿಯಲ್ಲಿ ಸಭೆ ಸೇರಿದ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಕೇಂದ್ರ ಬಜೆಟ್‌ನಲ್ಲಿ ಹೇರಿದ ಅಬಕಾರಿ ಸುಂಕದಿಂದಾಗಿ ಪೆಟ್ರೋಲ್ ಲೀಟರಿಗೆ ರೂ. 1.70 ಮತ್ತು ಡೀಸೆಲ್ ರೂ. 1.15 ರಷ್ಟು ದರ ಹೆಚ್ಚಳವಾಗಿದ್ದು ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬಜೆಟ್‌ನಲ್ಲಿ ಈ ತೆರಿಗೆಯನ್ನು ಹೇರುವಾಗ, ಯಾವುದೇ ದರ ಹೆಚ್ಚಳವಾಗುವುದಿಲ್ಲವೆಂದು ಹಣಕಾಸು ಸಚಿವರು ಹೇಳಿದ್ದರು. ಆದರೆ ಇದು ಹುಸಿಯಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಹೆಚ್ಚಿಸಿದರೆ, ಎಲ್ಲಾ ವಿಭಾಗದ ಜನರ ಮೇಲೆ ತೀವ್ರ ಹೊಡೆತ ಬೀಳಲಿದ್ದು ಔಷಧಿ, ತರಕಾರಿ, ಸಾಮಾನುಗಳ ಬೆಲೆ ಹೆಚ್ಚಳವಾಗಲಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಹೆಚ್ಚಳವಾಗುತ್ತಿರುವುದು ನಿಜ. ಆದರೆ ಅದರ ಹೊರೆಯನ್ನು ಜನರ ಮೇಲೆ ವರ್ಗಾಯಿಸದೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಬೇಕು. ಪೆಟ್ರೋಲಿಯಂ ಖಾತೆಯ ಸಚಿವರಿಗೆ ನೀಡಿದ ಮನವಿಯಲ್ಲಿ 4 ಪರಿಹಾರ ಸೂತ್ರಗಳನ್ನು ಸೂಚಿಸಲಾಗಿತ್ತು.

1. ಚಿಲ್ಲರೆ ದರ ಹೆಚ್ಚಳವಾಗದಂತೆ ಅಬಕಾರಿ ಸುಂಕವನ್ನು ಹಾಕುವುದು.

2. ರಸ್ತೆ ನಿರ್ಮಾಣ ಮಾಡುವ ಹೆಸರಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ನ ಮೇಲೆ ಹೇರಿರುವ ಲೀಟರಿಗೆ 50 ಪೈಸೆ ಸೆಸ್‌ನ್ನು ವಾಪಾಸು ತೆಗೆದುಕೊಳ್ಳುವುದು. ಈಗಾಗಲೇ ಲೀಟರಿಗೆ ರೂ. 1.50 ಸೆಸ್ ಇದೆ ಎಂಬುದನ್ನು ಗಮನಿಸಬೇಕು.

3. ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವಾಗ ವಿಧಿಸುವ 'ಆಮದು ಸಮತೋಲನ'(Import Farity) ಸೂತ್ರದಿಂದಾಗಿ ತೈಲ ಶುದ್ಧೀಕರಿಸುವ ಖಾಸಗಿ ಕಂಪನಿಗಳಿಗೆ ಅನುಕೂಲವಾಗುತ್ತದೆ. ಅದನ್ನು ತಡೆಯಬೇಕು.

4. ಜಾಗತಿಕ ಮಟ್ಟದಲ್ಲಿ ಪೆಟ್ರೋಲ್ ಬೆಲೆಯ ಏರಿಳಿತವನ್ನು ಸರಿದೂಗಿಸಲು 'ಬೆಲೆ ನಿಯಂತ್ರಣ ನಿಧಿ'ಯನ್ನು ಸ್ಥಾಪಿಸಬೇಕು. ಭಾರತದಲ್ಲೇ ಉತ್ಪಾದಿಸಿದ ಪೆಟ್ರೋಲ್ ಉತ್ಪನ್ನಗಳ ಮೇಲೆ ವಿಧಿಸಿದ ತೆರಿಗೆಯಿಂದ ವರ್ಷಕ್ಕೆ 5400 ಕೋಟಿ ರೂ. ಸಂಗ್ರಹವಾಗುತ್ತಿದ್ದು, ಇದನ್ನು ಬೆಲೆ ನಿಯಂತ್ರಣ ನಿಧಿಗೆ ವರ್ಗಾಯಿಸಬೇಕು.

ಮೇಲೆ ಹೇಳಿದ ಅಂಶಗಳನ್ನು ಕೇಂದ್ರ ಸರ್ಕಾರ ಜಾರಿ ಮಾಡಿದ್ದೇ ಆದಲ್ಲಿ ಪೆಟ್ರೋಲ್, ಡೀಸೆಲ್ ಚಿಲ್ಲರೆ ಮಾರಾಟದ ಬೆಲೆಯನ್ನು ಹೆಚ್ಚಿಸುವ ಪ್ರಮೇಯವೇ ಬರುವುದಿಲ್ಲ ಎಂದು ಸಿಪಿಐ(ಎಂ) ಒತ್ತಾಯಿಸಿದೆ. ಇದೇ ಸಂದರ್ಭದಲ್ಲಿ ಇನ್ನೂ ಹಲವಾರು ಪ್ರಸಕ್ತ ಪರಿಸ್ಥಿತಿಯ ಬಗ್ಗೆ ದೇಶದ, ಜನತೆಯ ಗಮನ ಸೆಳೆದಿದೆ.

ವಿದೇಶಾಂಗ ನೀತಿ

ಚೀನಾದ ಪ್ರಧಾನಿ ವೆನ್ ಜಿಯಾಬೊ ಮತ್ತು ಪಾಕಿಸ್ತಾನಿ ಅಧ್ಯಕ್ಷ ಮುಷರಫ್ ಅವರ ಭಾರತ ಭೇಟಿಯನ್ನು ಸ್ವಾಗತಿಸಿದ್ದು, ಇದು ನೆರೆಯ ದೇಶಗಳ ನಡುವೆ ಬಾಂಧವ್ಯ ಹೆಚ್ಚಿಸಲು ಅನುಕೂಲವಾಗಲಿದೆ.

ಅಲಿಪ್ತ ನೀತಿಗೆ ತಳಹದಿಯಾಗಿದ್ದ ಬಂಡುಂಗ್ ಸಮ್ಮೇಳನದ ಐವತ್ತನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಭಾಗವಹಿಸಿದ್ದು, ಆಫ್ರಿಕಾ ಮತ್ತು ಏಶ್ಯಾ ದೇಶಗಳೊಂದಿಗೆ ಸಂಬಂಧ ವೃದ್ಧಿಸುವ ಅವಕಾಶ ಒದಗಿತು. ಅದೇ ಸಂದರ್ಭದಲ್ಲಿ ಮಾಸ್ಕೊದಲ್ಲಿ ಹಿಟ್ಲರ್‌ನ ನಾಝಿ ಫ್ಯಾಸಿಸಂನ ವಿರುದ್ಧ ಜಯ ಗಳಿಸಿದ 60ನೇ ವಾರ್ಷಿಕೋತ್ಸವನ್ನು ವಿಜೃಂಭಣೆ ಯಿಂದ ಆಚರಿಸಿದ್ದು ಪ್ರಧಾನಿ ಮನಮೋಹನ್ ಸಿಂಗ್ ಭಾಗವಹಿಸಿದ್ದಾರೆ. ಇದು ರಶ್ಯಾದೊಂದಿಗೆ ಸ್ನೇಹ ವೃದ್ಧಿಸಲು ಸಹಕಾರಿಯಾಗಿದೆ.

ಆದರೆ ನೇಪಾಳಕ್ಕೆ ಶಸ್ತ್ರ ಮಾರಾಟ ನಿಷೇಧವನ್ನು ಹಿಂತೆಗೆದುಕೊಂಡಿರುವುದು ಪ್ರಜಾಪ್ರಭುತ್ವ ಪ್ರೇಮಿಗಳಿಗೆ ಅಘಾತ ತಂದಿದೆ. ಅಮೆರಿಕವು ಯುದ್ಧ ವಿಮಾನ ಮಾರಾಟ ಮಾಡಲು ಮುಂದೆ ಬಂದಿರುವುದನ್ನು ಎಚ್ಚರಿಕೆಯಿಂದ ಭಾರತ ನೋಡಬೇಕಾಗಿದೆ. ಹಾಗೂ ಅಮೆರಿಕಾದೊಂದಿಗೆ ಜಂಟಿ ಅಣ್ವಸ್ತ್ರ ರಕ್ಷಣಾ ವ್ಯವಸ್ಥೆ(MDS)ಯಲ್ಲಿ ಭಾಗವಹಿಸುವುದನ್ನು ಸಿಪಿಐ(ಎಂ) ವಿರೋಧಿಸಿದೆ.

ಬಿಜೆಪಿ ಬಹಿಷ್ಕಾರ :

ಚುನಾವಣೆ ನಡೆದು ಒಂದು ವರ್ಷ ಸಂದರೂ ಬಿಜೆಪಿ ಸಂಸತ್ತನ್ನೇ ಬಹಿಷ್ಕರಿಸಿ ಹೊರಗುಳಿದಿದೆ. ತಾವು ಅನುಭವಿಸಿದ ಸೋಲಿನಿಂದ ಇನ್ನೂ ಚೇತರಿಸಿಕೊಳ್ಳಲಾಗದ ಬಿಜೆಪಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಕೊಡಲಿ ಏಟು ನೀಡುತ್ತಿದೆ. ಬಿಜೆಪಿ ನಡೆಸುತ್ತಿರುವ ಸಂಸತ್ ಅಧಿವೇಶನದ ಬಹಿಷ್ಕಾರದಿಂದಾಗಿ, ಗ್ರಾಮೀಣ ಉದ್ಯೋಗ ಖಾತರಿ ಮಸೂದೆಯನ್ನು ಮಂಡಿಸಲು ಸಾಧ್ಯ ವಾಗಿಲ್ಲ. ಬಿಜೆಪಿ ನೇತೃತ್ವದ ಮೈತ್ರಿಕೂಟದಲ್ಲಿದ್ದ ತೆಲುಗುದೇಶಂ ಬಹಿಷ್ಕಾರವನ್ನು ತ್ಯಜಿಸಿ, ಸಂಸತ್ತಿಗೆ ಹಾಜರಾಗಿದೆ. ಸಂಸತ್ತಿನ ಬಹಿಷ್ಕಾರ ನೀತಿಯನ್ನು ಭಾರತದ ಜನತೆ ಒಪ್ಪುವುದಿಲ್ಲ ಎಂಬುದನ್ನು ಬಿಜೆಪಿಯು ಇತರೆ ಮೈತ್ರಿ ಪಕ್ಷಗಳು ಮನಗಾಣಬೇಕಾಗಿದೆ.

ಅಧಿಕಾರವಿಲ್ಲದ ಬಿಜೆಪಿ ಗೊಂದಲದಲ್ಲಿದ್ದು ಕಾಲ ಕಳೆಯುತ್ತಿದೆ. ಉಮಾ ಭಾರತಿ ಪ್ರಕರಣದ ನಂತರ, ಇದೀಗ ಇನ್ನೂ ಕೆಲವು ಭಿನ್ನಾಭಿಪ್ರಾಯ ಗಳು ಮೇಲೆದ್ದು ಬರುತ್ತಿವೆ. ಬಿಜೆಪಿಯ ಹಿರಿಯ ನಾಯಕ, ಆರ್‌ಎಸ್‌ಎಸ್‌ನ ಮುಖಂಡ ಹಾಗೂ ಗುಜರಾತಿನ ರಾಜ್ಯಪಾಲರಾಗಿದ್ದ ಸುಂದರ್ ಸಿಂಗ್ ಭಂಡಾರಿ, ಗುಜರಾತ್ ಗಲಭೆಯ ಸಂದರ್ಭದಲ್ಲಿ ಮೋದಿ ಸರ್ಕಾರ ಮತ್ತು ಅಂದಿನ ಕೇಂದ್ರ ಸರ್ಕಾರ ತಳೆದ ನಿಲುವನ್ನು ಕಟುವಾಗಿ ಟೀಕಿಸಿದ್ದಾರೆ. ಗಲಭೆ ನಡೆದು 3 ವರ್ಷಗಳ ಬಳಿಕವೂ61,000 ಜನರಿಗೆ ಯಾವುದೇ ಪುನರ್ವಸತಿ ಕಲ್ಪಿಸಲಾಗಿಲ್ಲ.

ರಾಜಸ್ತಾನದ ಭಿಲ್‌ವಾರಾದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ಸಂಘ ಪರಿವಾರವು ಹಿಂಸೆ ನಡೆಸಿದ್ದು ದೇಶದ ಜನತೆ ಖಂಡಿಸುವುದು ಮಾತ್ರ ವಲ್ಲದೆ, ಜನರನ್ನು ಜಾಗೃತಗೊಳಿಸ ಬೇಕಾಗಿದೆ.

ಸಿ.ಎ.ಜಿ. ವರದಿ

ಕೇಂದ್ರ ಆಡಿಟರ್ ಮತ್ತು ಕಂಟ್ರೋಲರ್ ಜನರಲ್ ಅವರ ವರದಿಯು, ಮುಂಬೈನ ಸೆಂಟಾರ್ ಹೋಟೆಲಿನ ಮಾರಾಟದಲ್ಲಿ ಅವ್ಯವಹಾರ ನಡೆದಿದೆ ಎಂಬುದನ್ನು ವಿಶದವಾಗಿ ವಿವರಿಸಿದೆ. ಕೇರಳದ ಕೋವಲಂ ಬೀಚ್ ಬಳಿಯಿರುವ ಐಟಿಡಿಸಿ ಹೋಟೆಲ್ ಮಾರಾಟದಲ್ಲಿ 65 ಎಕರೆ ಭೂಮಿಕೂಡಾ ಒಳಗೊಂಡಿದ್ದು ಇದರ ಬಗ್ಗೆ ಸಹ ತನಿಖೆ ನಡೆಸಬೇಕಾಗಿದೆ. ಬಿಜೆಪಿ ನೇತೃತ್ವದ ಸರ್ಕಾರ ಖಾಸಗಿಕರಣಕ್ಕೆ ಒತ್ತು ಕೊಟ್ಟು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದ್ದು ಯಾಕೆ ಎಂಬುದರ ಬಗ್ಗೆ ಒಂದೊಂದೇ ಪ್ರಕರಣಗಳು ಬೆಳಕಿಗೆ ಬರುತ್ತಿದೆ. ತನ್ನ ಬೆಂಬಲಿಗರಲ್ಲಿ ಶ್ರೀಮಂತರಾದವರಿಗೆ ಕೋಟಿಗಟ್ಟಲೆ ಲಾಭ ಗಳಿಸಲು ಅನುವು ಮಾಡಿದೆ.

ಕೇಂದ್ರ ಸರ್ಕಾರದ ನೀತಿಗಳು

ಭಾರತದ ಖಾಸಗೀ ಬ್ಯಾಂಕುಗಳ ಶೇರುದಾರರಿಗೆ ಈಗಿರುವ ಶೇ 10 ರಷ್ಟು ಮತದಾನದ ಮಿತಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿದೆ. ಈಗಾಗಲೇ ವಿದೇಶಿ ಬಂಡವಾಳವನ್ನು ಆಹ್ವಾನಿಸುವ ಹೆಸರಿನಲ್ಲಿ ಖಾಸಗಿ ಬ್ಯಾಂಕುಗಳಲ್ಲಿ ಶೇ 74 ರ ವರೆಗೆ ಬಂಡವಾಳ ಹೂಡಲು ಅನುಮತಿ ನೀಡಲಾಗಿದೆ. ಇದೀಗ ಶೇ 10 ರ ಮಿತಿಯನ್ನು ತೆಗೆದು ಹಾಕಿದಲ್ಲಿ ಭಾರತದ ಖಾಸಗಿ ಬ್ಯಾಂಕುಗಳನ್ನುವಹಿಸಿಕೊಳ್ಳಲು ವಿದೇಶಿ ಬಂಡವಾಳಕ್ಕೆ ತೆರೆದಿಟ್ಟಂತಾಗುತ್ತದೆ. ಶೇ 10 ರ ಮಿತಿಯನ್ನು ತೆಗೆದುಹಾಕಲು 'ಬ್ಯಾಂಕಿಂಗ್ ರೆಗ್ಯುಲೇಷನ್' ಕಾಯಿದೆಗೆ ತಿದ್ದುಪಡಿ ತರ ಬೇಕಾಗಿದ್ದು ಅದನ್ನು ವಿರೋಧಿಸಲು ನಿರ್ಧರಿಸಿದೆ.

ಅದೇ ರೀತಿಯಲ್ಲಿ ಸಾವಿರಾರು ಕೋಟಿ ರೂ. ಇರುವ ಪೆನ್ಷನ್ ನಿಧಿಯನ್ನು ಖಾಸಗೀಕರಿಸುವುದನ್ನು ವಿರೋಧಿಸಬೇಕಾಗಿದೆ.

ವಿಶೇಷ ಆರ್ಥಿಕ ವಲಯ ಮಸೂದೆಯನ್ನು ಸಂಸತ್ತಿನಲ್ಲಿ ಪಾಸು ಮಾಡಲಾಗಿದ್ದು, ಎಡ ಪಕ್ಷಗಳ ಮಧ್ಯಪ್ರವೇಶದಿಂದಾಗಿ 'ಈ ವಲಯಗಳಿಗೆ ಕಾರ್ಮಿಕ ಕಾನೂನುಗಳು ಅನ್ವಯವಾಗುವುದಿಲ್ಲ' ಎಂಬ ಕಲಂನ್ನು ತೆಗೆದುಹಾಕಲು ಸಾಧ್ಯವಾಗಿದೆ. ಅಂದರೆ ವಿಶೇಷ ಆರ್ಥಿಕ ವಲಯ(EPZ) ಗಳಲ್ಲಿ ಕಾರ್ಮಿಕ ಕಾನೂನುಗಳು ಅನ್ವಯವಾಗಲಿದೆ.

ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಖಂಡನೆ

ದೇಶದಾದ್ಯಂತ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿದ್ದು ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯೊಬ್ಬರ ಮೇಲಿನ ಗ್ಯಾಂಗ್ ರೇಪ್, ಮುಂಬೈನ ಪೊಲೀಸ್ ಚೌಕಿಯಲ್ಲಿ ಬಂಧನದಲ್ಲಿದ್ದ ಮಹಿಳೆಯ ಮೇಲಿನ ಬಲಾತ್ಕಾರ, ಚಿಕ್ಕ ಹೆಣ್ಣು ಮಕ್ಕಳ ಮೇಲೆ ಕೂಡಾ ಬಲಾತ್ಕಾರಗಳು ದಿನೇದಿನೇ ಹೆಚ್ಚುತ್ತಿವೆ. ಮಧ್ಯ ಪ್ರದೇಶದಲ್ಲಿ ಬಾಲ್ಯ ವಿವಾಹ ವನ್ನು ತಡೆಗಟ್ಟಲು ಹೋದ ಅಂಗನವಾಡಿ ಕಾರ್ಯಕರ್ತೆಯ ಕೈಗಳನ್ನು ದುಷ್ಕರ್ಮಿಗಳು ಕತ್ತರಿಸಿದ್ದು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಕ್ಕೆ ಸಿಪಿಐ(ಎಂ) ತೀವ್ರ ಕಳವಳ ವ್ಯಕ್ತಪಡಿಸಿದೆ.

ರೈತರ ಸಮಸ್ಯೆ:

ಮೆಣಸು, ಸಾಸಿವೆ, ಟಿ ಮತ್ತಿತರ ಕೃಷಿ ಉತ್ಪನ್ನಗಳ ಬೆಲೆ ತೀವ್ರ ಕುಸಿಯುತ್ತಿರುವುದರಿಂದ ಕೇಂದ್ರವು ಮಧ್ಯ ಪ್ರವೇಶಿಸಿ, ರೈತರ ರಕ್ಷಣೆಗೆ ಗಮನ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

○

ಯುಪಿಎ ಸರ್ಕಾರದ ಒಂದು ವರುಷ.......

ಪುಟ 14 ರಿಂದ

ಪೇಟೆಂಟ್ ಮಸೂದೆಯಲ್ಲಿ ತಿದ್ದುಪಡಿಗಳನ್ನು ತರಲಾಯಿತು; ವಿಮಾ ವಲಯದಲ್ಲಿ ಎಫ್‌ಡಿಐ ಮಿತಿಯನ್ನು ಏರಿಸಲಿಲ್ಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಏರಿಕೆಯಲ್ಲಿ ಇಳಿಕೆಯಾಯಿತು.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಸರಕಾರ ರೈತಾಪಿ ಜನಗಳಿಗೆ, ಕೃಷಿ ಕೂಲಿಕಾರರಿಗೆ, ಕೈಗಾರಿಕಾ ಕಾರ್ಮಿಕರಿಗೆ, ಕುಶಲಕೆಲಸಗಾರರಿಗೆ, ನಿರುದ್ಯೋಗಿ ಯುವಜನರಿಗೆ ಹಾಗೂ ಗ್ರಾಮೀಣ ಬಡವರಿಗೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ನೀಡಿದ ವಚನಗಳನ್ನು ಪಾಲಿಸುವಂತೆ ಪ್ರಚೋದಿಸಲು ನಿರಂತರ ಪ್ರಯತ್ನಗಳನ್ನು ನಡೆಸಬೇಕು. ಮುಂಬರುವ ದಿನಗಳಲ್ಲಿ, ಸಿಎಂಪಿಯಲ್ಲಿನ ಜನಪರ ಕ್ರಮಗಳ ಜಾರಿಯಾಗುವಂತೆ ಜನಸಮೂಹಗಳನ್ನು ಅಣಿನೆರೆಸುವುದನ್ನು, ಆಂದೋಲನಗಳನ್ನು ಸಿಪಿಐ(ಎಂ) ತೀವ್ರಗೊಳಿಸುತ್ತದೆ ಅದು ಹಣಕಾಸು ವಲಯವೂ ಸೇರಿದಂತೆ ಅಧಿಕಾರ ಪ್ರಧಾನ ವಲಯಗಳನ್ನು ವಿದೇಶೀ ಬಂಡವಾಳಕ್ಕೆ ವಹಿಸಿಕೊಡುವ ಕ್ರಮಗಳನ್ನೆಲ್ಲಾ ದೃಢವಾಗಿ ವಿರೋಧಿಸುತ್ತದೆ.

ದುಡಿಯುವ ಜನಗಳ ಮೂಲ ಹಿತಾಸಕ್ತಿಗಳಿಗೆ ಸಂಬಂಧಪಟ್ಟಂತೆ ಸಿಪಿಐ(ಎಂ) ಎಂದೂ ರಾಜಿ ಮಾಡಿಕೊಳ್ಳುವುದಿಲ್ಲ. ರಾಷ್ಟ್ರೀಯ ಸಾರ್ವಭೌಮತೆಯನ್ನು ಕುಂಠಿತಗೊಳಿಸುವ, ಅಥವಾ ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡಗಳಿಗೆ ಮಣಿಯುವ ಹಾಗೂ ದುಡಿಯುವ ಜನಗಳ ಬದುಕಿನ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುವ ಎಲ್ಲಾ ಕ್ರಮಗಳನ್ನು ವಿರೋಧಿಸುವಲ್ಲಿ ಎಡಪಕ್ಷಗಳ ದನಿ ಸಂಸತ್ತಿನ ಒಳಗೂ, ಹೊರಗೂ ನಿರಂತರವಾಗಿ ಬಲಿಷ್ಠವಾಗಿಯೇ ಇರುತ್ತದೆ.

ಯುಪಿಎ ಸರಕಾರಕ್ಕೆ ಎಡಪಕ್ಷಗಳ ಬೆಂಬಲವಿದೆ. ಅದೇ ವೇಳೆಗೆ, ಸಿಪಿಐ(ಎಂ) ಒಂದು ಸ್ವತಂತ್ರ ಪಾತ್ರವನ್ನು ವಹಿಸುತ್ತದೆ, ಜನತೆಯ ಹಿತಾಸಕ್ತಿಗಳ ಕಾವಲುಗಾರನಾಗಿ ಕೆಲಸ ಮಾಡುತ್ತದೆ. ಮುಂಬರುವ ದಿನಗಳಲಿ ಸಿಎಂಪಿಯಲ್ಲಿನ ಜನಪರ ಕ್ರಮಗಳು ಜಾರಿಯಾಗುವಂತೆ ಯುಪಿಎ ಸರಕಾರ ನೋಡಿಕೊಳ್ಳಬೇಕಾದರೆ ಹಾಗೂ ಬಿಜೆಪಿ ನೇತೃತ್ವದ ಸರಕಾರಕ್ಕಿಂತ ಭಿನ್ನವಾದ ಒಂದು ಹಾದಿಯನ್ನು ಹಿಡಿಯಬೇಕಾಗಿದೆ.

○

ಬೊಲಿವಿಯಾ ಜನತಾ ಕ್ರಾಂತಿಯ ಹೊಸ್ತಿಲಲ್ಲಿ

ದಕ್ಷಿಣ ಅಮೇರಿಕದಿಂದ ಪುನಃ ಒಳ್ಳೆಯ ಸುದ್ದಿಗಳು ಬರುತ್ತಿವೆ. ದುಡಿಯುವ ಜನತೆ ಎಲ್ಲೆಡೆ ಹೋರಾಟದಲ್ಲಿದ್ದಾರೆ. ಹಲವು ರೀತಿಯ ಮುನ್ನಡೆ ಸಾಧಿಸುತ್ತಿದ್ದಾರೆ. ಉರುಗ್ವೆಯ ಮುನಿಸಿಪಲ್ ಚುನಾವಣೆಗಳಲ್ಲಿ ಎಡಶಕ್ತಿಗಳು ಗೆಲ್ಲುವ ಮೂಲಕ ರಾಜಕೀಯ ಹಿಡಿತ ಬಲಪಡಿಸಿಕೊಂಡಿವೆ. ಬೊಲಿವಿಯಾದಲ್ಲಿ ಪುನ: ಪ್ರಾಕೃತಿಕ ಅನಿಲ ರಾಷ್ಟ್ರೀಕರಿಸಬೇಕೆಂದು ಜನತೆ ರಾಜಧಾನಿಯಲ್ಲಿ ಅಧ್ಯಕ್ಷರಿಗೆ ಮುತ್ತಿಗೆ ಹಾಕಿದ್ದಾರೆ. ಬ್ರೆಜಿಲ್‌ನಲ್ಲಿ ಭೂರಹಿತರು ಭೂಗ್ರಹಣ ಚಳುವಳಿ ಪುನರಾರಂಭಿಸುವ ಮೂಲಕ ಅಧ್ಯಕ್ಷ ಲುಲಾಗೆ ಅವರ ಚುನಾವಣಾ ಭರವಸೆ ನೆನಪಿಸಿದ್ದಾರೆ.

ಬೊಲಿವಿಯಾ ಚೆ ಗುವಾರರ ಕೊನೆಯ ದಿನಗಳ ಕ್ರಾಂತಿಕಾರಿ ಕಾರ್ಯಚರಣೆಗಳ ಕಾರ್ಯಕ್ಷೇತ್ರವಾಗಿದ್ದ ದೇಶ. ಪುನ: ದಕ್ಷಿಣ ಅಮೇರಿಕದಲ್ಲೇ ಜನತೆ ಮುನ್ನಡೆ ಸಾಧಿಸುತ್ತಿರುವ ಕ್ರಾಂತಿಕಾರಿ ಕರ್ಮಭೂಮಿಯಾಗಿದೆ. ಒಂದೆರಡು ವರ್ಷಗಳ ಒಳಗೆ ಜನತೆಯ ಬೇಡಿಕೆಗಳಿಗೆ ಮಣಿದು ಇನ್ನೊಬ್ಬ ಆಳುವ ವರ್ಗದ ಪ್ರತಿನಿಧಿಯಾದ ಅಧ್ಯಕ್ಷನನ್ನನು ಸೀಟು ಖಾಲಿ ಮಾಡಿಸುವ ಸಾಧ್ಯತೆ ಇದೆ. ಸಂವಿಧಾನ ಬದಲಾಯಿಸಿ ರೈತ-ಕಾರ್ಮಿಕನ ನೇರ ಆಡಳಿತ ನಡೆಸುವ ಲಕ್ಷಣಗಳು ಕಂಡಿವೆ.

ಪುನಃ ಪ್ರಾಕೃತಿಕ ಅನಿಲದ ಒಡೆತನದ ಬಗ್ಗೆ ತೀವ್ರ ವಿವಾದವೆದ್ದಿದೆ. ಬೊಲಿವಿಯಾ ಪ್ರಾಕೃತಿಕ ಅನಿಲ ವಿಪುಲವಾಗಿದೆ. ಆದರೆ ಆ ದೇಶದ ಆಳುವ ವರ್ಗದ ನಾಯಕರು ಇದನ್ನು ಮೂರು ಕಾಸಿಗೆ ಬಹುರಾಷ್ಟ್ರೀಯ ಅನಿಲ ಕಂಪನಿಗಳಿಗೆ ಮಾರಿಬಿಟ್ಟಿದ್ದಾರೆ. ಎನ್ರೋನ್, ಶೆಲ್ ಮತ್ತು ಬ್ರಿಟೀಷ್ ಪೆಟ್ರೋಲಿಯಂ ಸೇರಿದಂತೆ 12 ಕಂಪನಿಗಳು ಇದರಿಂದ ಸೂಪರ್ ಲಾಭ ಹೊಡೆಯುತ್ತಿದೆ. ಈ ಕಂಪನಿಗಳು ಮಾರುಕಟ್ಟೆಯ ಬೆಲೆಗಿಂತ ಕಡಿಮೆಯಲ್ಲಿ ಅನಿಲ ತೆಗೆದುಕೊಂಡು, ದುಬಾರಿ ಬೆಲೆಗೆ (12 ಪಟ್ಟು ಹೆಚ್ಚು) ಬೊಲಿವಿಯಾದ ಜನತೆಗೆ ಮಾರುತ್ತವೆ. ಹಿಂದಿನ ಕಾಂಟ್ರಾಕ್ಟ್‌ಗಳ ಪ್ರಕಾರ ಕಂಪನಿಗಳು ಶೇಕಡಾ 18 ರಾಯಲ್ಟಿ ಕೊಟ್ಟಂತಾಯಿತು. ಬೆಲೆ ಮೇಲೆ ಯಾವುದೇ ನಿರ್ಬಂಧ ಇಲ್ಲ. ಆ ಮೂಲಕ ದಕ್ಷಿಣ ಅಮೇರಿಕಾದಲ್ಲೆ ಅತ್ಯಂತ ಬಡ ದೇಶಗಳಲ್ಲಿ ಒಂದಾದ ಬೊಲಿವಿಯಾ ತಮ್ಮ ಪ್ರಾಕೃತಿಕ ಅನಿಲ ಸಂಪತ್ತು ಬಳಸಿ ದೇಶದ ಬೆಳವಣಿಗೆ ಸಾಧಿಸುವುದು ಸಾಧ್ಯವಾಗಿಲ್ಲ. ಅಕ್ಟೋಬರ್ 2003 ರಲ್ಲಿ ಅಧ್ಯಕ್ಷ ಲೊಜಾರಾನನ್ನು ಸೀಟು ಖಾಲಿ ಮಾಡಿಸಿದ್ದು ದೇಶವ್ಯಾಪಿ ಪ್ರತಿಭಟನೆಯ ನಂತರ. ಸತತವಾಗಿ ಪ್ರಾಕೃತಿಕ ಅನಿಲದ ಮೇಲೆ ರಾಷ್ಟ್ರೀಯ ನಿಯಂತ್ರಣ ಸಾಧಿಸುವಂತೆ ಜನತೆಯ ಒತ್ತಡ ಬರುತ್ತಿದೆ.

ಪ್ರಾಕೃತಿಕ ಅನಿಲ ರಾಷ್ಟ್ರೀಕರಣ

ಜೂನ್ 2004ರಲ್ಲಿ ನಡೆಸಿದ ದೇಶವ್ಯಾಪಿ ಜನಮತ ಸಂಗ್ರಹದಲ್ಲಿ ಶೇಕಡಾ 50 ರಾಯಲ್ಟಿ ಕೊಡಬೇಕೆಂಬ ಪ್ರಸ್ತಾವಕ್ಕೆ ಬಹುಮತ ದೊರಕಿತ್ತು. ಆಗಿನಿಂದ ಅದಕ್ಕೆ ಸರಿಯಾದ ಕಾನೂನು ಜಾರಿಗೆ ತರುವುದಕ್ಕೆ ಅಧ್ಯಕ್ಷ, ಬಲಪಂಥೀಯ ನಿಯಂತ್ರಣದಲ್ಲಿ ಪಾರ್ಲಿಮೆಂಟು ಅಡ್ಡಗಾಲು ಹಾಕುತ್ತಿದೆ. ಇವರ ಹಿಂದೆ ಐ.ಎಮ್.ಎಫ್ ವಿಶ್ವಬ್ಯಾಂಕ್ ಅಮೇರಿಕ, ಸ್ಪೈನ್ ಸರ್ಕಾರಗಳು, ಬಹುರಾಷ್ಟ್ರೀಯ ಕಂಪನಿಗಳು ಅವರ ಬಾಲಬಡುಕರೂ ಇದ್ದಾರೆ ಎಂದು ಬೇರೆ ಹೇಳ ಬೇಕಾಗಿಲ್ಲವಲ್ಲ. ಇನ್ನೊಂದೆಡೆ ಬೊಲಿವಿಯಾದ ಭೂಹೀನರೂ ಆದಿವಾಸಿಗಳು, ರೈತರು, ಕಾರ್ಮಿಕರು, ಬಡಜನರು, ಎಡಪ್ರಗತಿಪರ ರಾಜಕೀಯ ಶಕ್ರಿಗಳು, ಇವುಗಳ ನಡುವೆ ವರ್ಗ-ಸಮರವೇ ನಡೆದಿತ್ತು. ಅಧ್ಯಕ್ಷ ಈ ಕಾನೂನು ಬದಲಾವಣೆ ಆಗದಂತೆ 3 ಬಾರಿ ರಾಜೀನಾಮೆ ಕೊಟ್ಟು ರಾಜಕೀಯ ಬಿಕ್ಕಟ್ಟು ಸೃಷ್ಟಿಸುವ ಚುನಾವಣೆ 2 ವರ್ಷಗಳಷ್ಟು ಮುಂದೆ ಹಾಕುವ ಬೆದರಿಕೆ ಹಾಕಿದ್ದ. ಹಲವು ಬಾರಿ ಸಾಮಾಜಿಕ ಚಳುವಳಿಗಳು, ಸರ್ಕಾರ, ಗ್ಯಾಟ್ ಕಂಪನಿಗಳ ಜಂಟಿ ಸಭೆ ಕರೆದಿದ್ದ. ಕೊನೆಗೂ ಜನತೆಯ ಒತ್ತಡಕ್ಕೆ ಮಣಿದು ಪಾರ್ಲಿಮೆಂಟು ಕಾನೂನು ಬದಲಾವಣೆ ತಂದಿತು. ಆದರೆ ಈ ಕಾನೂನು ಯಾರನ್ನು ತೃಪ್ತಿಪಡಿಸಲಿಲ್ಲ. ಈಗಿರುವ ಶೇಕಡಾ 18 ರಾಯಲ್ಟಿ ಮೇಲೆ, ಶೇಕಡಾ



32 ತೆರಿಗೆ ಹಾಕಿತ್ತು ಹೊಸ ಕಾನೂನು. ಇದು ಯಾರನ್ನು ತೃಪ್ತಿಪಡಿಸಲಿಲ್ಲ. ಜನಮತ ಸಂಗ್ರಹದಂತೆ ಶೇಕಡಾ 50 ರಾಯಲ್ಟಿ ಹಾಕಲಿಲ್ಲ ಎಂದು ಸಾಮಾಜಿಕ ಚಳುವಳಿಗಳು ತಿರಸ್ಕರಿಸಿದವು. ಕಂಪನಿಗಳು ತಮ್ಮ ಲಾಭದ ಮೇಲೆ ದೊಡ್ಡ ಹೊಡೆತ ಕೊಡುತ್ತವೆಂದು ವಿರೋಧಿಸಿದರು. ಸರ್ಕಾರ, ಐ.ಎಂ.ಎಫ್ ವಿಶ್ವಬ್ಯಾಂಕುಗಳು ಇದರಿಂದ ವಿದೇಶ ಬಂಡವಾಳ ಹರಿವು ನಿಂತು ಹೋಗುತ್ತದೆ ಎಂದು ಬೊಬ್ಬೆ ಹೊಡೆದರು.

ಲಕ್ಷ ಜನರ ಜಾಥಾ

ಆದಿವಾಸಿ ರೆಡ್ ಇಂಡಿಯನ್ನರು ಭಾರಿ ಜಾಥಾದಲ್ಲಿ ರಾಜಧಾನಿ ಲಾಪಾರ್ಝ್‌ಗೆ ಹೊರಟರು. ಲಾಪಾರ್ಝ್ ಹತ್ತಿರ ಇರುವ ಎಲ್ ಅಲ್ಟೋ ಎಂಬ ಪಟ್ಟಣದಿಂದ ಬಡರೈತರ ಜಾಥಾ ಸಹ ಹೊರಟಿತು. ಈ ಜಾಥಾಗಳಿಂದ ರಾಜಧಾನಿ ಲಾಪಾರ್ಝ್ ದೇಶದ ಇತರ ಭಾಗಗಳಿಂದ ಪ್ರತ್ಯೇಕವಾಗಿದೆ. ಪೆರು ಮತ್ತು ಚಿಲಿಗೆ ಹೋಗುವ ಹಾದಿ ಸಹ ಪೂರ್ಣ ಬಂದಂತಾಗಿದೆ. ಕೊಕಾ ರೈತರು, ಗಣಿಕಾರ್ಮಿಕರು, ಸಮಾಜವಾದಕ್ಕಾಗಿ ಚಳುವಳಿ ಎಂಬ ವಿರೋಧಪಕ್ಷದ ಕಾರ್ಯಕರ್ತರು 200 ಕಿ.ಮೀದ ಜಾಥಾದಲ್ಲಿ ನಂತರ ರಾಜಧಾನಿ ಲಾಪಾರ್ಝ್‌ಗೆ ಬಂದರು. ಹೀಗೆ ದೇಶದ ಎಲ್ಲಾ ಪ್ರಮುಖ ಜನವಿಭಾಗಗಳು ಈ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ರಾಜಧಾನಿ ತಲುಪದ ಬಡ ಜನತೆ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ ವಶಪಡಿಸಿಕೊಂಡಿದ್ದಾರೆ. ಬೊಲಿವಿಯಾದ ಎರಡು ಕೇಂದ್ರೀಯ ಟ್ರೇಡ್‌ಯೂನಿಯನ್‌ಗಳೂ ಚಳುವಳಿಯಲ್ಲಿ ಭಾಗವಹಿಸಿವೆ. ರಾಜಧಾನಿಯಲ್ಲಿ



ಮುಷ್ಕರದಲ್ಲಿದ್ದ ಅಧ್ಯಾಪಕೀಯ, ವಿದ್ಯಾರ್ಥಿಗಳು ಮತ್ತು ಆರೋಗ್ಯಸೇನಾ ಕಾರ್ಮಿಕರು ಪ್ರದರ್ಶನಕಾರರ ಜತೆ ಕೇಂದ್ರ ರಾಜಧಾನಿಗೆ ಬರುತ್ತಿದ್ದ ಜಾಥಾದಲ್ಲಿ ಲಕ್ಷಕ್ಕೂ ಹೆಚ್ಚು ಜನ ಸೇರಿದ್ದರು.

ಚಳುವಳಿ ಬಿಸಿ ಏರಿದಂತೆ ಬೇಡಿಕೆಗಳು ಹೆಚ್ಚು ಸಮರಶೀಲವಾಗಿದೆ. ಈಗ ಜನಮತಸಂಗ್ರಹದಂತೆ ಶೇಕಡಾ 50 ರಾಯಲ್ಟಿ ಹೇರುವುದಕ್ಕಿಂತ ಮುಂದೆ ಹೋಗಿದೆ. ಬೊಲಿವಿಯಾದ ಎಲ್ಲಾ ಪ್ರಾಕೃತಿ ಅನಿಲ ಘಟಕಗಳನ್ನು ರಾಷ್ಟ್ರೀಕರಿಸಬೇಕು. ವಿದೇಶಿ ಕಂಪನಿಗಳ ಜತೆ ಮಾಡಿಕೊಂಡಿದ್ದ ಎಲ್ಲಾ ಕಾಂಟ್ರಾಕ್ಟ್‌ಗಳನ್ನು ರದ್ದು ಮಾಡಬೇಕು. ಅಧ್ಯಕ್ಷ ಮೇಸಾ ರಾಜಿನಾಮೆ ಕೊಡಬೇಕು. ಪಾರ್ಲಿಮೆಂಟು ವಿಸರ್ಜಿಸಬೇಕು. ಹೊಸ ಸಂವಿಧಾನಕ್ಕೆ ಅಸೆಂಬ್ಲಿ ರಚಿತವಾಗಬೇಕು. ಈಗಿನ ಸಂವಿಧಾನ ಉಳ್ಳವರ ಸಂವಿಧಾನ. ಅದನ್ನು ಬದಲಾಯಿಸಬೇಕು ಎಂಬ ಬೇಡಿಕೆ ಬಲವಾಗಿದೆ. ರಾಜಧಾನಿಯ ಕಾರ್ಮಿಕರು ಅನಿರ್ದಿಷ್ಟ ಸಾರ್ವತ್ರಿಕ ಮುಷ್ಕರಕ್ಕೆ ತಯಾರಿ ನಡೆಸುತ್ತಿದ್ದಾರೆ. ದುಡಿಯುವ ಬಡಜನರ ಎಲ್ಲಾ ಸಂಘಟನೆಗಳು ಒಂದು ಜಂಟಿ ರಂಗ ರಚಿಸಿದ್ದಾರೆ. ಕಾರ್ಮಿಕರು ಮತ್ತು ರೈತರು ಅಧಿಕಾರ ಹಿಡಿಯುವ ಕಾಲ ಬಂದಿದೆ ಎಂದು ಚಳುವಳಿಯ ಒಬ್ಬ ನಾಯಕ ಹೇಳಿದ್ದು, ಇಡೀ ದೇಶದಲ್ಲಿ ಧ್ವನಿಸುತ್ತಿದೆ. ದಕ್ಷಿಣ ಅಮೇರಿಕಾದಲ್ಲಿ ಇತ್ತೀಚಿನ ವರ್ಷಗಳಲ್ಲಿ ಇದು ಅತ್ಯಂತ ಕ್ರಾಂತಿಕಾರಿ ಬಿಕ್ಕಟ್ಟಿನ ನಿದರ್ಶನ.

ಉರುಗ್ವೇಯಲ್ಲಿ ಎಡಶಕ್ತಿ ಗಟ್ಟಿಗೊಂಡಿದೆ


ಇತ್ತೀಚೆಗೆ ಎಡಪಂಥೀಯ ಅಧ್ಯಕ್ಷನನ್ನು ಆರಿಸಿದ ಉರುಗ್ವೇಯಲ್ಲಿ ಎಡಶಕ್ತಿಗಳು ಇನ್ನಷ್ಟು ಗಟ್ಟಿಯಾಗುವ ಬೆಳವಣಿಗೆ ಆಗಿದೆ. ಇತ್ತೀಚೆಗೆ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ಎಡಶಕ್ತಿಗಳು ತಮ್ಮ ಹಿಡಿತವನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಿವೆ. ಕಳೆದ 170 ವರ್ಷಗಳ ಕಾಲ ದೇಶದ ರಾಜಕೀಯದ ಮೇಲೆ ಹಿಡಿತ ಸಾಧಿಸಿದ್ದ ಬಲಪಂಥೀಯ ಪಕ್ಷಗಳು ಮೊದಲ ಬಾರಿಗೆ ಹಲವು ಪ್ರಾಂತ್ಯಗಳ ಮುನಿಸಿಪಾಲಿಟಿಗಳಲ್ಲಿ ಅಧಿಕಾರ ಕಳೆದುಕೊಂಡಿವೆ. ರಾಜಧಾನಿಯಲ್ಲಿ ಎಡ-ಮಧ್ಯ ರಾಜಕೀಯ ಶಕ್ತಿಗಳು ಆಗಲೇ ಅಧಿಕಾರ ಪಡೆದಿದ್ದವು. ಎಡಶಕ್ತಿಗಳು ಗೆದ್ದಿರುವ ಪ್ರಾಂತೀಯ, ಮುನಿಸಿಪಲ್ ಪ್ರದೇಶಗಳು ದೇಶದ ಶೇಕಡಾ 75 ಜನಸಂಖ್ಯೆ ಇರುವ ಪ್ರದೇಶಗಳು. ಇದರಲ್ಲಿ ದೂರದ ಹಲವು ಗ್ರಾಮೀಣ ಪ್ರದೇಶಗಳು ಸೇರಿವೆ. ದೇಶದ ಅರ್ಧಕ್ಕಿಂತಲೂ ಹೆಚ್ಚು ಜನಸಂಖ್ಯೆ ಮತ್ತು ರಾಷ್ಟ್ರದ ಉತ್ಪಾದನೆ ಇರುವ ಮಾಂಟೆವಿಡಿಯೋದಲ್ಲಿ ಎಡ-ಮಧ್ಯಮ ಪಕ್ಷಗಳ ರಂಗ ಶೇಕಡಾ 60ಕ್ಕಿಂತಲೂ ಹೆಚ್ಚು ಮತ ಗಳಿಸಿದೆ.

ಬ್ರೆಜಿಲ್‌ನಲ್ಲಿ ಭೂರಹಿತರ ಜಾಥಾ

ಬ್ರೆಜಿಲ್ ಜಗದ್ವಿಖ್ಯಾತ ಭೂರಹಿತರ ಚಳುವಳಿ ಎಂಎಸ್‌ಟಿ (ಮೂವಿಮೆಂಟೋ ಡೊಸ್ ಸೆಮ್‌ತೆರಾ) ಪುನಃ ಸುದ್ದಿಯಲ್ಲಿದೆ. ಈ ಜಾಥಾ ಪ್ರಾಂತೀಯ ರಾಜಧಾನಿ ಗೊಯಾನಿಯಿಂದ ಹೊರಟು ದೇಶದ ರಾಜಧಾನಿ ಬ್ರೆಸಿಲಿಯಾ ತಲುಪಲಿದೆ. ಎಂಎಸ್‌ಟಿಯ 12 ಸಾವಿರ ಸದಸ್ಯರು ಈ ಜಾಥಾದಲ್ಲಿ ಭಾಗವಹಿಸಿದ್ದಾರೆ. ದೇಶದ ಹಲವು ಪ್ರಾಂತ್ಯಗಳಿಂದ ಈ ಸದಸ್ಯರು ಗೋಯಾನಿಯಾಕ್ಕೆ ಬಂದು ಸೇರಿದ್ದರು. ಈ ಜಾಥಾಕ್ಕೆ ಎಂಎಸ್‌ಟಿ ಹುಟ್ಟಿದ ದಕ್ಷಿಣ ಬ್ರೆಜಿಲ್‌ನ ತುಂಬಿಂದ ಅಲ್ಲದೆ ವಾಯುವ್ಯ ಪ್ರದೇಶಗಳಿಂದಲೂ ಬಂದಿದ್ದಾರೆ. ಜಾಥಾದ ಉದ್ದೇಶ ಅಧ್ಯಕ್ಷ ಲೂಲಾರ ಎಡ ಸರ್ಕಾರ ಭೂರಹಿತರಿಗೆ ಭೂಮಿ ಮತ್ತು ತಾಂತ್ರಿಕ ನೆರವು ನೀಡುವ ವ್ಯಾಪಕ ಕಾರ್ಯಕ್ರಮ ತೀವ್ರಗೊಳಿಸಲು ಒತ್ತಾಯ ಹೇರುವುದು. ಲುಲಾ ತಮ್ಮ ಚುನಾವಣಾ ಭರವಸೆಗಳಲ್ಲಿ ನಾಲ್ಕುವರೆ ಲಕ್ಷ ಭೂರಹಿತ ಕುಟುಂಬಗಳಿಗೆ ಭೂಮಿಕೊಡುವ ಭರವಸೆ ನೀಡಿದ್ದರು. ಇಷ್ಟರವರೆಗೆ ಕೇವಲ 73 ಸಾವಿರ ಕುಟುಂಬಗಳಿಗೆ ಭೂಮಿ ನೀಡಲಾಗಿದೆ. ಈ ದರದಲ್ಲಿ ಈ ಭರವಸೆ ಈಡೇರುವುದಿಲ್ಲ ಎಂದಿದ್ದಾರೆ ಎಂಎಸ್‌ಟಿಯ ವಕ್ತಾರರು.

ಜಾಥಾದಲ್ಲಿ ಎಂಎಸ್‌ಟಿಯ 'ಟ್ರೇಡ್‌ಮಾರ್ಕ್' ಆಗಿರುವ ಸರ್ಕಸ್ ಟೆಂಟ್‌ಗಳು, ದೊಡ್ಡ ಹ್ಯಾಟ್‌ಗಳು ಮತ್ತು ರೇಡಿಯೋ ಕಂಡುಬಂದವು. ಜಾಥಾದ ಉದ್ದಕ್ಕೂ ಹಲವು ದೊಡ್ಡ ಕೃಷಿ ಫಾರ್ಮುಗಳನ್ನು ವಶಪಡಿಸುವ ಕಾರ್ಯಾಚರಣೆ ನಡೆಯಿತು. ಜಾಥಾ ಆರಂಭವಾಗಿದ್ದೇ ಇಂತಹ ಒಂದು - ಕಾರ್ಯಾಚರಣೆಯಿಂದ. ಎಂಎಸ್‌ಟಿ ಚಳುವಳಿ ಹುಟ್ಟಿದ್ದೇ ಹೀಗೆ. ದೊಡ್ಡ ಕೃಷಿ ಫಾರ್ಮುಗಲ್ಲಿ ದೊಡ್ಡ ಸರ್ಕಸ್ ಟೆಂಟ್‌ಗಳನ್ನು ಹಾಗಿ ಭೂರಹಿತರು ಕೃಷಿ ಮಾಡುವುದು. ಇದೇ ಚಳುವಳಿಯಲ್ಲಿ ಮುಖ್ಯ ಚಟುವಟಿಕೆ. ಇದೇ ಎಂಎಸ್‌ಟಿಯ ಬ್ರೆಜಿಲ್‌ನ (ಏಕೆ ಜಗತ್ತಿನ) ಅತ್ಯಂತ ದೊಡ್ಡ ಸಫಲ ಭೂರಹಿತರ ಭೂಗ್ರಹಣ ಚಳುವಳಿಯನ್ನಾಗಿದ್ದು. ಜಾಥಾದಲ್ಲಿ 100 ಮಕ್ಕಳು ಇದ್ದಾರೆ. ಮಧ್ಯಾಹ್ನಗಳಲ್ಲಿ ಜಾಥಾ ಟೆಂಟ್‌ಗಳಲ್ಲಿ ಇರುತ್ತದೆ. ಆಗ ರಾಜಕೀಯ ಕ್ಲಾಸುಗಳ, ಸೆಮಿನಾರುಗಳು ನಡೆಯುತ್ತವೆ. ಮಕ್ಕಳಿಗೆ ಸ್ಕೂಲು ಕ್ಲಾಸುಗಳು ನಡೆಯುತ್ತವೆ. ಮಕ್ಕಳ ಸ್ಕೂಲು ಶಿಕ್ಷಣ, ದೊಡ್ಡವರ ರಾಜಕೀಯ ಶಿಕ್ಷಣ ಎಂಎಸ್‌ಟಿಯ ಅದ್ಭುತೆ - ವಿಶೇಷತೆಗಳಲ್ಲಿ ಒಂದು. ಮಧ್ಯಾಹ್ನ ತಂಗಿದಾಗ ಹಾಡು-ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ. ಜಾಥಾದ ನಡಿಗೆಯಲ್ಲೂ ರೆಡಿಯೋಗಳ ಮೂಲಕ ಸಂಗೀತ ಕೇಳುತ್ತಾರೆ.

ಜಾಥಾದ ಜತೆಗೆ ಕೇಂದ್ರ ಸರ್ಕಾರದ ಪೊಲೀಸು ತುಕಡಿಯೊಂದು ಇದೆ. ಆದರೆ ಎಲ್ಲೂ ಈವರೆಗೆ ಜಾಥಾದ ಚಟುವಟಿಕೆ ತಡೆಯುವುದು ನಡೆದಿಲ್ಲ. ಜಾಥಾದ ನಡಿಗೆಯಲ್ಲೂ ಹಿಂಸಾತ್ಮಕ ಘಟನೆಗಳೂ ಆಗಿಲ್ಲ, ಅಧ್ಯಕ್ಷ ಲುಲಾ ಭೂರಹಿತರಿಗೆ ಭೂಮಿ, ಇತರ ಸವಲತ್ತುಗಳನ್ನು ಕೊಡುವ ಕೆಲಸ ಚಟುವಟಿಕೆಗಳು ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಹೇಳಿದ್ದಾರೆ. ಆದರೆ ಆರ್ಥಿಕ ಚಟುವಟಿಕೆ ಚುರುಕಾದಷ್ಟು, ಸಾಮಾಜಿಕ ನ್ಯಾಯ ದೊರಕಿಸುವ ಸರ್ಕಾರದ ಚಟುವಟಿಕೆ ಚುರುಕಾಗಿಲ್ಲ. ಅದನ್ನು ಸಾಧ್ಯಮಾಡಲು ತಕ್ಕ ಒತ್ತಾಯ ಹೇರುವುದು ಜಾಥಾದ ಉದ್ದೇಶ ಎಂದಿದ್ದಾರೆ ಎಂಎಸ್‌ಟಿ ವಕ್ತಾರರು.



ಕೈಬಿಡಲ್ಪಟ್ಟವನು

ಮತ್ವೇಯ್ ತೊರೊಪೀಗಿನ್ ಅದೇ ಮೊದಲ ಬಾರಿಗೆ ಮಾಸ್ಕೋಗೆ ಬಂದಿದ್ದುದು. ಅವನೊಬ್ಬ ಚುರುಕಿನ ಚಾಲಾಕಿನ ಯುವಕನಾಗಿದ್ದ. ಒಖೋತ್ನಿ ಸಾಲಿನಿಂದ ತ್ವೆರ್‌ಸ್ಕಾಯ ಹಾಗೂ ನೆಗ್ಲೀನ್ನಯ ಬೀದಿಗಳಿಗೆ ಬೇಗಬೇಗ ಭೇಟಿಕೊಟ್ಟು ಕೊನೆಗೆ ಕ್ರೆಮ್ಲಿನ್‌ಗೆ ಹೋಗಲು ನಿರ್ಧರಿಸಿದ.

ಆ ಕಾಲದಲ್ಲಿ ಕ್ರೆಮ್ಲಿನ್‌ನಲ್ಲಿ ಒಂದು ಕ್ಷೌರಿಕ ಅಂಗಡಿಯೂ ಇದ್ದಿತು. ನಿಜ, ಅದೊಂದು ಚಿಕ್ಕದಾಗಿದ್ದಿತೆನ್ನಿ. ಅದು ತೊರೊಪೀಗಿನ್‌ನ ದೃಷ್ಟಿಗೆ ಬಿದ್ದಿತು. ಮುಖ ಕ್ಷೌರ ಮಾಡಿಸಿಕೊಳ್ಳಬಾರದೇಕೆ ಎಂದು ಅವನು ನಿರ್ಧರಿಸಿದ. ಅದು ಕ್ರೆಮ್ಲಿನ್‌ನ ಒಂದು ರೀತಿಯ ಸವಿನೆನಪಾಗಿಯೂ ಉಳಿಯುವುದು!

ಅವನು ಒಳಹೊಕ್ಕು ಒಂದು ಕುರ್ಚಿಯ ಮೇಲೆ ಕುಳಿತ. ಕ್ಷೌರಿಕ ಕಾರ್ಯವಾಸಿಯಾಗಿದ್ದ. ಹಾಗಾಗಿ ಇವನು ತನ್ನ ಸರದಿಗಾಗಿ ಕಾಯುತ್ತ ಕುಳಿತ.

ಐದು ನಿಮಿಷ ಆಯಿತು. ಬಾಗಿಲು ಮತ್ತೊಮ್ಮೆ ಕಿರುಗುಟ್ಟುತ್ತ ತೆರೆಯಿತು.

ಮತ್ವೇಯ್ ಕತ್ತೆತ್ತಿ ನೋಡಿದ-ಹೊಸ್ತಿಲ ಬಳಿ ಕಾಮ್ರೇಡ್ ಲೆನಿನ್!

ಮತ್ವೇಯ್ ತೊರೊಪೀಗಿನ್ ತನ್ನ ಆಸನದಿಂದ ಜಿಗಿದು ಕಂಬದಂತೆ ಗಡುಸಾಗಿ ನೆಟ್ಟಗೆ ನಿಂತ. ಕೈಗಳನ್ನು ತೊಡೆಗಳ ಪಕ್ಕದಲ್ಲಿ ಇಳಿಬಿಟ್ಟು ಸೈನಿಕನ ರೀತಿಯಲ್ಲಿ ನಿಂತ.

"ನಮಸ್ಕಾರ. ಯಾಕೆ ನಿಂತಿರಿ? ಕುಳಿತುಕೊಳ್ಳಿ" ವ್ಲದೀಮಿರ್ ಇಲ್ಯೀಚ್ ಹೇಳಿದರು.

ತೊರೊಪೀಗಿನ್ ಕುಳಿತುಕೊಳ್ಳುವಷ್ಟು ಧೈರ್ಯ ತಂದುಕೊಳ್ಳದಾದ.

"ಕುಳಿತುಕೊಳ್ಳಿ, ಕಾಮ್ರೇಡ್" ವ್ಲದೀಮಿರ್ ಇಲ್ಯೀಚ್ ನಸುನಗುತ್ತ ಹೇಳಿದರು.

ಮತ್ವೇಯ್ ಕೊನೆಗೆ ಹೇಗೋ ತನ್ನ ಕುರ್ಚಿಯಲ್ಲಿ ಕುಸಿದು ಕುಳಿತ. ಕುರ್ಚಿಯ ಒಂದು ಅಂಚಿಗೆ ಅಂಟಿಕೊಂಡು ಕುಳಿತನೆಂದು ಬೇರೆ ಹೇಳಬೇಕಾಗಿಲ್ಲ. ಲೆನಿನ್ ಅವನ ಪಕ್ಕದ ಕುರ್ಚಿಯಲ್ಲಿ ಕುಳಿತು ಅವನ ಕಡೆಗೊಮ್ಮೆ ನೋಡಿದರು.

"ನೀವು ಹಳ್ಳಿಯ ಕಡೆಯಿಂದ ಬಂದಿದ್ದೀರ?"

"ಹೌದು" ಮತ್ವೇಯ್ ಉತ್ತರಿಸಿದ, ನಾಚುತ್ತ.

"ಯಾವ ಪ್ರಾಂತದಿಂದ ಅಂತ ಕೇಳಬಹುದೆ?"

"ವ್ಯಾಜ್ಮ."

"ವ್ಯಾಜ್ಮದಲ್ಲಿ ಸ್ಪಷ್ಟವಾಗಿ ಎಲ್ಲಿಂದ?"

"ಅನೀಸೋವ್ಕ... ಇದು ನಮ್ಮ ಹಳ್ಳಿಯ ಹೆಸರು."

"ಹಾಗೋ" ವ್ಲದೀಮಿರ್ ಇಲ್ಯೀಚ್ ಹೇಳಿದರು. "ಅನೀಸೊವ್ಕದಲ್ಲಿ ನಿಮ್ಮ ಜೀವನ ಪರಿಸ್ಥಿತಿ ಹೇಗಿದೆ? ಹೊಸ ಅಧಿಕಾರದಿಂದ ನಿಮಗೆ ತೊಂದರೆಯಾಗಿದೆಯೇ? ಮಾಗಿ ಫಸಲು ಈ ವರ್ಷ ಹೇಗಿದೆ? ನಿಮ್ಮ ಹಳ್ಳಿಯಲ್ಲಿ ಶಾಲೆ ಇದೆಯೇ? ನಿಮಗೆ ವೃತ್ತಪತ್ರಿಕೆಗಳು



ಬರುತ್ತವೆಯೇ? ದಯವಿಟ್ಟು ವಿವರವಾಗಿ ಹೇಳಬಲ್ಲಿರಾ?"

ಮತ್ವೇಯ್‌ಗೆ ಎಲ್ಲಿಂದ ಪ್ರಾರಂಭಿಸುವುದು ಅನ್ನುವುದೇ ಗೊತ್ತಾಗಲಿಲ್ಲ. ಕೊನೆಗೆ "ನಮಗೇನೂ ತೊಂದರೆಯಾಗಿಲ್ಲ" ಎಂದು ಸೋವಿಯತ್ ಅಧಿಕಾರದ ಬಗೆಗೆ ಹೇಳಿದ. "ಮಾಗಿ ಫಸಲು ಚೆನ್ನಾಗಿ ಬರಲಿರುವುದು" ಎಂದ. "ನಮ್ಮಲ್ಲಿ ಇನ್ನೂ ಶಾಲೆ ಶುರುವಾಗಿಲ್ಲ. ಆದರೆ ಮುಂದಿನ ವರ್ಷ ಶುರುವಾಗುವುದು ಖಂಡಿತ."

ಈ ಹೊತ್ತಿಗೆ ಅವರ ಸಂಭಾಷಣೆಗೆ ಅಡಚಣೆ ಬಂದಿತು-ಕ್ಷೌರಿಕನ ಬಳಿ ಒಂದು ಆಸನ ಖಾಲಿಯಾಯಿತು ಮುಂದಿನ ಗಿರಾಕಿಗೆ ಆಹ್ವಾನ ಬಂದಿತು.

"ಹೋಗಿ, ಹೋಗಿ" ವ್ಲದೀಮಿರ್ ಇಲ್ಯೀಚ್‌ರು ಮತ್ವೇಯ್‌ಗೆ ಹೇಳಿದರು.

"ದಯವಿಟ್ಟು ಹೋಗಿ ಕುಳಿತುಕೊಳ್ಳಿ."

ಮತ್ವೇಯ್‌ಗೆ ಏನು ಮಾಡಬೇಕೋ ತೋಚದಾಯಿತು.

"ಸರಿ, ನಾನು.... ನೋಡಿ.... ನಾನು ಕಾಯುವೆ."

"ಬೇಡ, ಬೇಡ" ಲೆನಿನ್ ಉತ್ತರಿಸಿದರು. "ನಿಮ್ಮ ಸರದಿ, ನೀವು ಹೋಗಿ."

"ನನಗೇನೂ ಅವಸರವಿಲ್ಲ, ವ್ಲದೀಮಿರ್ ಇಲ್ಯೀಚ್."

"ಸಾಕು. ಸುಮ್ಮನೇ ವಾದ ಮಾಡುವುದು ಬೇಡ!"

ಮತ್ವೇಯ್ ಕ್ಷೌರಿಕನತ್ತ ನೋಡಿದ. ಅವನು ಇಂತಹ ಪ್ರಸಂಗಗಳಿಗೆ ಒಗ್ಗಿದ್ದನೆಂದು ಕಾಣುತ್ತೆ, ನಸುನಗುತ್ತ ನಿಂತಿದ್ದ. ಮತ್ವೇಯ್ ಮತ್ತೆ ಲೆನಿನರ ಕಡೆಗೆ ತಿರುಗಿದ.

"ವ್ಲದೀಮಿರ್ ಇಲ್ಯೀಚ್, ನಾನು ಕಾಯುವೆ, ನಾನು ಹೋಗೋದು ಸರಿಯಾಗಿ ಕಾಣೊಲ್ಲ..."

"ಎಲ್ಲ ಸರಿ,ಸರಿ!" ಉತ್ತರಿಸಿದರು ಲೆನಿನ್. "ಹೋಗಿ. ಸಮಯ ವ್ಯರ್ಥ ಮಾಡಬೇಡಿ. ನನಗಿಲ್ಲಿ ಒಂದು ಪುಟ್ಟ ಕೆಲಸವಿದೆ."

ಹಾಗೆಂದು ವ್ಲದೀಮಿರ್ ಇಲ್ಯೀಚ್‌ರು ತಮ್ಮ ಜೇಬಿನಿಂದ ಪತ್ರಿಕೆಯೊಂದನ್ನು ಹೊರತೆಗೆದು ಅದನ್ನು ಓದುತ್ತ ಕುಳಿತರು. ಮತ್ವೇಯ್‌ನನ್ನು, ಸಂಕೋಚಕ್ಕೆ ಒಳಪಡಿಸದಿರಲೆಂದು ಅವನಿಂದ ಅತ್ತ ಕಡೆಗೆ ತಿರುಗಿ ಕುಳಿತರು.

"ಬನ್ನಿ, ಕುಳಿತುಕೊಳ್ಳಿ" ಕ್ಷೌರಿಕ ಮತ್ವೇಯ್‌ನನ್ನು ಕರೆದ.

ವಿಧಿ ಇಲ್ಲದೇ ಬಡಪಾಯಿ ಮತ್ವೇಯ್ ಅಲ್ಲಿಗೆ ಹೋಗಿ ಕುಳಿತ. ಅಲ್ಲಿಗೆ ಹೋದುದೇ ತಪ್ಪಾಯಿತು ಅನ್ನಿಸಿತು ಅವನಿಗೆ. ಮುಳ್ಳಿನ ಆಸನದ ಮೇಲೆ ಕುಳಿತಂತೆ ಕುಳಿತಿದ್ದ. ಈ ಕೆಲಸ ಎಷ್ಟು ಬೇಗ ಮುಗಿದರೆ ಅಷ್ಟು ಒಳ್ಳೆಯದು ಎನ್ನುವ ಒಂದೇ ಒಂದು ಯೋಚನೆಯಷ್ಟೆ ಅವನ ಮನಸ್ಸಿನಲ್ಲಿದ್ದುದು.

ಕ್ಷೌರಿಕ ಅವನ ಮುಖ ಕ್ಷೌರ ಮಾಡಿ ಮುಗಿಸಿದ. ಮತ್ವೇಯ್ ಬೇಗ ಹೊರಹೋಗಲು ತನ್ನ ಟೋಪಿ ಎತ್ತಿಕೊಂಡ.

"ಸರಿ, ಈಗ ನನ್ನ ಸರದಿ ಅಂತ ಕಾಣುತ್ತೆ, ಅಲ್ಲವೇ" ವ್ಲದೀಮಿರ್ ಇಲ್ಯೀಚ್ ಲಘುವಾಗಿ ಹೇಳಿದರು. "ಏನಪ್ಪ, ನೀವೀಗ ಹೆಚ್ಚು ಯುವಕರಾಗಿ ಕಾಣೆತ್ತೀರ. ಎಷ್ಟು ಲಕ್ಷಣವಾಗಿದ್ದೀರ! ವ್ಯಾಜ್ಮದ ಜನರಿಗೆ ನನ್ನ ಶುಭಾಶಯ ತಿಳಿಸಿ."

ತೊರೊಪೀಗಿನ್ ತನ್ನ ಹುಟ್ಟುಹಳ್ಳಿ ಅನೀಸೊವ್ಕಗೆ ಹಿಂದಿರುಗಿದ.

" ಏನು ನೀನು ಹೇಳೋದು!" ರೈತರು ಆಶ್ಚರ್ಯದಿಂದ ಉದ್ಗರಿಸಿದರು.

"ನಿಜಕ್ಕೂ ಲೆನಿನರನ್ನು ಕಂಡೆಯಾ?! ಹೇಗೆ ಕಾಣಿಸುತ್ತಾರೆ? ಏನು ಹೇಳಿದರು?"

"ನಂಗೆ ಶುಭಾಶಯಗಳೇ? ನೋಡಿದಿರಾ ಹೇಗಿದೆ!"

"ಎಲ್ಲಿ ಕಂಡೆ ಲೆನಿನರನ್ನು?"

ತೊರೊಪೀಗಿನ್ ಎಲ್ಲವನ್ನೂ ತಿಳಿಸಿದ.

"ವಿವರವಾಗಿ ತಿಳಿಸು. ಇನ್ನಷ್ಟು ಹೇಳು."

ಆಮೇಲೆ ಇದ್ದಕ್ಕಿದ್ದಂತೆ ರೈತರು ಹುಬ್ಬುಗಂಟಿಕ್ಕಿದರು.

"ನಿನ್ನ ಜಾಗ ಅವರಿಗೆ ಬಿಟ್ಟುಕೊಡಲಿಲ್ಲವೇ? ಯಾಕೆ ಬಿಟ್ಟುಕೊಡಲಿಲ್ಲ, ಸೊಕ್ಕಿನ ಕುನ್ನಿ!"

ಮತ್ವೇಯ್ ಹೆಮ್ ಅಂದ. ಹಮ್ ಅಂದ. ನೋಡಿ ಅದು ಸುಮ್ಮನೆ ಹಾಗಾಗಿಬಿಟ್ಟಿತು ಅಂದ. ನನಗೇ ಅದು ಇಷ್ಟವಾಗಲಿಲ್ಲ ಅಂದ.

ಇನ್ನೇನು ಹೇಳಬಲ್ಲವನಿದ್ದ? ರೈತರಿಗೆ ಇನ್ನೂ ಹೆಚ್ಚಿಗೆ ಏನೂ ಬೇಕಿರಲಿಲ್ಲ.

"ನೀನು ನಮಗೆಲ್ಲ ಅವಮಾನ ಮಾಡಿದ್ದೀಯಾ. ನಮ್ಮ ಹೆಸರಿಗೆ ಕಳಂಕ ತಂದಿದ್ದೀಯ. ಅನೀಸೋವ್ಕ ಹಳ್ಳಿಯ ಗೌರವ ಕಾಪಾಡದೆ ಹೋಗಿದ್ದೀಯ. ಅಷ್ಟೇ ಅಲ್ಲ, ನೀನು ನಮ್ಮ ದೇಶದ ಇಡೀ ದುಡಿಯುವ ರೈತರಿಗೇ ಕೆಟ್ಟ ಹೆಸರು ತಂದಿದ್ದೀಯ."

ಅದೇ ಕಾಲದಲ್ಲಿ, ಕಾಕತಾಳೀಯವೆನ್ನುವಂತೆ, ಗ್ರಾಮ ಸೋವಿಯತ್‌ಗೆ ಚುನಾವಣೆಯು ಬಂದಿತು. ಆ ಮುನ್ನ ಮತ್ವೇಯ್ ತೊರೊಪೀಗಿನ್ ಹೆಸರನ್ನೂ ಸೂಚಿಸಲಾಗಿತ್ತು ಮತ್ತು ಎಲ್ಲರೂ ಅವನಿಗೆ ದೃಢ ಬೆಂಬಲ ನೀಡಿದ್ದರು. ಆದರೆ ಆಗ...

ರೈತರ ಸಭೆ ಕೂಡಿದ ಕೂಡಲೇ ಶುರುವಾಯಿತು:

"ನಂಗೆ ಅವನು ಬೇಡ" ರೈತರು ಕೂಗಿ ಹೇಳಿದರು. "ನಮಗವನು ಬೇಡ. ಅವನು ಲೆನಿನರಿಗೆ ಜಾಗ ಬಿಟ್ಟುಕೊಡಲಿಲ್ಲ. ನಾವು ಅವನಿಗೆ ಬೆಂಬಲ ನೀಡುವುದಿಲ್ಲ!"

ಹಾಗೆ ಮತ್ವೇಯ್ ಸೋವಿಯತ್‌ಗೆ ಚುನಾಯಿತನಾಗಲಿಲ್ಲ.

ಹಾಗೆ ಕಾಮ್ರೇಡ್ ಲೆನಿನ್‌ರು ಮತ್ವೇಯ್‌ನ ಕೈಬಿಟ್ಟಿದ್ದರು.

(ರಶಿಯನ್ ಇತಿಹಾಸದ ಕಥೆಗಳು - ಗ್ರಂಥದಿಂದ)

ಸಮಾಜವಾದ

ಏನೆಂದು ಹೇಳಲಿ ಈ ಸಮಾಜವಾದ
ಈ ಎಲ್ಲ ಪಕ್ಷಗಳ ಬರೆಬಾಯಿ ವೇದ
ಆಚರಣೆ ಎಡಪಂಥ ಒಂದನ್ನು ಬಿಟ್ಟು
ಎಲ್ಲಿಯೂ ಇಂದಿಲ್ಲ ಇದು ಅಲ್ಲ ಗುಟ್ಟು

\- ವಿಡಂಬಾರಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH